
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

24 ಸೆಪ್ಟೆಂಬರ್ 2014 ಪುಟ 20 ರೂ. 15/-




ಗುದ್ದಲಿ ಶರಣರ ಭೂಕಾಳಜಿ



ಹೋರಿಯಂತೆ ಹೊಕ್ಕ ಇಕ್ಕಿಸಿಕೊಂಡ ತಿಕ್ಕ!




ರಾಘುವಿನ ಪಲಾಯನ ಪ್ರಸಂಗ!



ಮುರುಘಾ ಶರಣರ ವೈಚಾರಿಕ ಅಧಃಪತನ

ಬೇಡ, ಅದೊಂದು ವಿಚಾರ ನನ್ನನ್ನು ಜೀವನವಿಡೀ ಕಾಡಬಹುದು...

ಅಂಚಿನಿಂದ....



ಡಾ.ವಾಸು ಎಚ್.ವಿ.

ಈ ಮಾತು ಆಡುವ ಹೊತ್ತಿಗೆ ಆತ ಸುಮಾರು 7 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದರು. ಅವರ ಮಗ ತನ್ನದೇ ಜವಾಬ್ದಾರಿರಹಿತ ನಡವಳಿಕೆಯಿಂದ ಮಾಡಿಕೊಂಡ ಎಡವಟ್ಟು ಒಂದು ಭೀಕರ ರಸ್ತೆ ಅಪಘಾತದಲ್ಲಿ ಕೊನೆಗೊಂಡಿತ್ತು. ಮೈಸೂರಿನ ಹೆದ್ದಾರಿಯಲ್ಲಿ ನಡೆದ ಅಪಘಾತದಲ್ಲಿ ಮಗನ ಸ್ನೇಹಿತ ಸ್ಥಳದಲ್ಲೇ ಸಾವನ್ನಪ್ಪಿದ್ದರೆ, ಅಪಘಾತವಾದ ಕ್ಷಣದಿಂದ ಕೋಮಾ ಸ್ಥಿತಿಗೆ ಮುಳುಗಿದ್ದು ಇವರ ಮಗ. ಎರಡು ತಿಂಗಳು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಆದ ಖರ್ಚು 5 ಲಕ್ಷಗಳಾಗಿದ್ದರೆ, ನಂತರದ 8 ತಿಂಗಳ ಕಾಲ ಮನೆಯಲ್ಲೇ ಕೋಮಾ ಸ್ಥಿತಿಯನ್ನು 'ಮೈಂಟೇನ್' ಮಾಡಲು 2 ಲಕ್ಷ ಕೈ ಬಿಟ್ಟುಹೋಗಿತ್ತು. ಬಂಧುಗಳು, ಸ್ನೇಹಿತರು ನೀಡಿದ ನೆರವು ಮತ್ತು ಕೈನಲ್ಲಿದ್ದ ಹಣದ ಹೊರತಾಗಿ ಉಳಿದ ಐದೂವರೆ ಲಕ್ಷವನ್ನೂ ಸಾಲ ಮಾಡಿಯೇ ತಂದಿದ್ದರು.


ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕರಾಗಿದ್ದ ಅವರ ಬಳಿ ಮಾರಿಕೊಳ್ಳಲು ಹಳ್ಳಿಯಲ್ಲಿನ ಎರಡೆಕರೆ ಜಮೀನು ಬಿಟ್ಟರೆ ಅಂತಹ ದೊಡ್ಡ ಆಸ್ತಿಯೂ ಇಲ್ಲ. ಪರಿಸ್ಥಿತಿ ಹೀಗಿರುವಾಗ ಇನ್ನೊಮ್ಮೆ ತಲೆ ಸ್ಕ್ಯಾನ್ ಮಾಡಿಸಿದರು. ಕೋಮಾದಲ್ಲಿದ್ದರೂ ಕೈ-ಕಾಲುಗಳು ಮಾಮೂಲಿ ಸ್ಥಿತಿಯಲ್ಲೇ ಇದ್ದದ್ದು ಹೋಗಿ, ಅವು ಸೆಟೆದುಕೊಳ್ಳಲಾರಂಭಿಸಿದ್ದರಿಂದ, ವೈದ್ಯರ ಸಲಹೆಯ ಮೇರೆಗೆ ಸ್ಕ್ಯಾನ್ ಮಾಡಿಸಲಾಗಿತ್ತು. ತಲೆ ಬುರುಡೆಯ ಪಕ್ಕ ಇದ್ದಕ್ಕಿದ್ದಂತೆ ರಕ್ತ ಸಂಗ್ರಹವಾಗಲು ಶುರುವಾಗಿದ್ದು ಕಂಡುಬಂದಿತು. ಇನ್ನೊಂದು ಆಪರೇಷನ್ ಮಾಡಿಸಿದರೆ, ಸೆಟೆದುಕೊಳ್ಳುವುದನ್ನು ಕಡಿಮೆ ಮಾಡಬಹುದು ಎಂಬುದು ತಜ್ಞ ವೈದ್ಯರ ಅಭಿಪ್ರಾಯವಾಗಿತ್ತು. ಇನ್ನೂ 40 ಸಾವಿರ ಖರ್ಚು ಮಾಡಿ ಆ ಆಪರೇಷನ್ ಮಾಡಿದರೆ, ಕೋಮಾದಿಂದ ಚೇತರಿಸಿಕೊಳ್ಳಬಹುದೇ ಎಂಬ ಪ್ರಶ್ನೆಗೆ ವೈದ್ಯರು ಯಾವ ಭರವಸೆಯನ್ನೂ ನೀಡಲಿಲ್ಲ. ಆದರೆ ಕೋಮಾದಿಂದ 'ಎಂದಾದರೂ ಒಂದು ದಿನ' ಚೇತರಿಸಿಕೊಳ್ಳುವ ಸಾಧ್ಯತೆಗೆ, ಈ ಹೊಸ ಸಮಸ್ಯೆ ಅಡ್ಡಿ ಎಂಬುದಷ್ಟೇ ಅವರ ಖಚಿತ ಅನಿಸಿಕೆ.

ಒಂದು ವೇಳೆ, ಈ ಆಪರೇಷನ್ ಮಾಡಿಸದೇ ಇದ್ದರೆ? ಕೈಕಾಲುಗಳು ಇನ್ನಷ್ಟು ಸೆಟೆದುಕೊಳ್ಳುತ್ತವೆ. ಕೋಮಾ ಸ್ಥಿತಿಯೂ ಇನ್ನಷ್ಟು ಹದಗೆಡಬಹುದು. ಮಾಡಿಸಿದರೆ? ಆಗಲೂ ಹದಗೆಡಬಹುದು! ಇಂತಹ ಸಂದರ್ಭದಲ್ಲಿ ನೀವಾದರೆ ಏನು ತೀರ್ಮಾನ ತೆಗೆದುಕೊಳ್ಳುತ್ತೀರಿ? ಕೋಟಿಗಟ್ಟಲೆ ಹಣವಿದ್ದರೆ, 'ಸಾಧ್ಯವಿರುವುದನ್ನೆಲ್ಲಾ ಮಾಡಿ' ಎಂದು ಸಲೀಸಾಗಿ ಹೇಳಬಹುದು. ಮುಂದಿನ ಹೊತ್ತಿಗೆ ಮಾತ್ರ ತಂದುಕೊಡಲೇ ಹಣವಿಲ್ಲ ಎನ್ನುವ ಸ್ಥಿತಿಯಿದ್ದರೆ? ಇಷ್ಟು ಹೊತ್ತಿಗೆ ಯಾವಾಗಲೋ ಮಗ ಸತ್ತು ಹೋಗಿರುತ್ತಿದ್ದ. ಬಡವರ ಸಾವು ತುಂಬಾ ಅಗ್ಗ. ಈ ಎರಡರ ಮಧ್ಯೆ ಇರುವ ಈ ಖಾಸಗಿ ಶಾಲೆಯ ಶಿಕ್ಷಕನ ಕುಟುಂಬ ಏನು ತೀರ್ಮಾನ ತೆಗೆದುಕೊಳ್ಳಬೇಕು? 'ಆಪರೇಷನ್ ನಡೆಯಲಿ. ಅದನ್ನು ಮಾಡಿಸದೇ ಇದ್ದರೆ, ನನ್ನ ಮಗ ಎಂದಾದರೂ ಒಂದು ದಿನ ಕಣ್ಣು ತೆರೆಯಬಹುದಾದ ಅವಕಾಶವನ್ನು ನಾನು ಇಲ್ಲವಾಗಿಸಿದೆ ಎಂಬುದು ನಾನು ಸಾಯುವವರೆಗೂ ನನ್ನನ್ನು ಕಾಡುತ್ತದೆ' ಎಂದರು ಆ ತಂದೆ. ಆಪರೇಷನ್ ನಡೆಯಿತು. ಅದರ ಮೂರನೇ ದಿನ ಮಗ ತೀರಿಕೊಂಡ.

ಇನ್ನೊಂದು ಕುಟುಂಬ. ಹಣಕಾಸು ವಿಪರೀತವಲ್ಲದಿದ್ದರೂ, ಹಲವು ಲಕ್ಷಗಳನ್ನು ಖರ್ಚು ಮಾಡಲು ತೊಂದರೆಯಿಲ್ಲ. ಒಂದು ವೇಳೆ ಅದನ್ನೂ ಮೀರಿದರೆ, ಮಾರಿಬಿಡಲು ಒಂದಷ್ಟು ಆಸ್ತಿಯಿದೆ. ಆ ಕುಟುಂಬಕ್ಕೆ ಜೀವನವಿಡೀ ದುಡಿದ ವ್ಯಕ್ತಿಯ ಕುರಿತು ಕುಟುಂಬದ ಎಲ್ಲರಿಗೂ ಪ್ರೀತಿಯಿದೆ. ಅವರಿಗೆ ಎದೆನೋವು ಬಂತು. ಕೇವಲ ಅಸಿಡಿಟಿಯಾ, ಹೃದಯ ಸಂಬಂಧೀ ಕಾಯಿಲೆಯಾ ಅಂತ ಅನುಮಾನ ಬರುವಷ್ಟು ಸಣ್ಣ ಪ್ರಮಾಣದ ನೋವು. ಸಾಮಾನ್ಯವಾಗಿ ನೋವು ಹೇಳಿಕೊಳ್ಳದ ವ್ಯಕ್ತಿಯಾದ್ದರಿಂದ ಒಂದು ಇಸಿಜಿ ಪರೀಕ್ಷೆ ಆಯಿತು, ಹೃದಯದ ಸ್ಕ್ಯಾನ್ ಆಯಿತು, ಟ್ರೆಡ್ ಮಿಲ್ ಪರೀಕ್ಷೆಯೂ ಆಯಿತು. ಕಾಯಿಲೆ ಇದೆಯೋ ಇಲ್ಲವೋ ಅನುಮಾನ ಬಗೆಹರಿಯಲಿಲ್ಲ. 'ಪರವಾಗಿಲ್ಲ ಬಿಡಿ' ಅಂದರು ಡಾಕ್ಟರು. 'ಹಾಗಾದರೆ ಏನೂ ಸಮಸ್ಯೆಯಿಲ್ಲವಾ?' ಕೇಳಿದರು ಮನೆಯವರು. 'ಇನ್ನೊಂದು ದೊಡ್ಡ ಸ್ಕ್ಯಾನ್ ಮಾಡಿಬಿಡಿ, ನೋಡೋಣ. ಮನಸ್ಸಿನಲ್ಲಿರುವ ಸಂದೇಹವೂ ಬಗೆಹರಿಯುತ್ತದೆ'. ಇನ್ನೊಂದು ಸ್ಕ್ಯಾನ್ ಆಯಿತು. ಹೃದಯದ ಕಾಯಿಲೆ ಇದೆ ಅಂತ ವರದಿ ಬರಲಿಲ್ಲ. ಇಲ್ಲ ಎಂದು ಖಚಿತವಾಗಿ ಹೇಳಲಾಗದು ಅಂತಲೂ ವರದಿ ಹೇಳಿತು.

ಈಗೇನು ಮಾಡಬೇಕು? ಮತ್ತೆ 'ಪರವಾಗಿಲ್ಲ ಬಿಡಿ' ಅಂದರು ಡಾಕ್ಟರು. 'ಹಾಗಾದರೆ ಏನೂ ಸಮಸ್ಯೆಯಿಲ್ಲವಾ?' ಕೇಳಿದರು ಮನೆಯವರು. 'ನಿಮಗೆ ಅಷ್ಟು ಅನುಮಾನವಿದ್ದರೆ ಆಂಜಿಯೋಗ್ರಾಮ್ ಮಾಡಿಬಿಡೋಣ. ಹೇಗೂ ನಾರ್ಮಲ್ ಅಂತಲೇ ಬರುತ್ತದೆ. ನಿಮ್ಮ ಮನಸ್ಸೂ ಹಗುರವಾಗುತ್ತದೆ'. ಆಂಜಿಯೋಗ್ರಾಮ್ ಸಹ ಆಯಿತು. ಹೃದಯದ ಒಂದು ರಕ್ತನಾಳ ಶೇ.90ರಷ್ಟು ಕಿರಿದಾಗಿದೆ ಎಂಬ ವರದಿ ಬಂದಿತು!

ಆಧುನಿಕ ವೈದ್ಯ ಪದ್ಧತಿ ಎಂದು ಕರೆಯಲಾಗುವ ಅಲೋಪತಿಯಲ್ಲಿ ಇಂತಹ ಸಂದರ್ಭಗಳು ನೂರಾರು ಬರುತ್ತವೆ. ಕೇವಲ ಕಳೆದ 3 ತಿಂಗಳಲ್ಲಿ ಇಂತಹ ಐದು ಸಂದರ್ಭಗಳನ್ನು ಈ ಅಂಕಣಕಾರ ಎದುರಿಸಬೇಕಾಯಿತು. ಖಚಿತವಾದ ತೀರ್ಮಾನ ಸಾಧ್ಯವಿಲ್ಲದೇ, ಅನುಮಾನ ಬಗೆಹರಿಸಿಕೊಳ್ಳಲು ಲಕ್ಷಾಂತರ ರೂ. ಖರ್ಚು ಮಾಡಿಸುವಷ್ಟು ಬಗೆಬಗೆಯ ಸ್ಕ್ಯಾನ್ ಮತ್ತು ಇತರ ಪರೀಕ್ಷಾ ಪದ್ಧತಿಗಳು ಬಳಕೆಯಲ್ಲಿವೆ. ಹಾಗೆಂದು, ಅವ್ಯಾವುದಕ್ಕೂ ತರ್ಕವಿಲ್ಲವೆಂತಲೂ ಅಲ್ಲ. ಪ್ರತಿ ನೂರು ಪರೀಕ್ಷೆಗಳಲ್ಲಿ ಶೇ.90ರಷ್ಟು 'ಏನೂ ಸಮಸ್ಯೆಯಿಲ್ಲ' ಎಂದೇ ವರದಿ ನೀಡಿದರೂ, ಉಳಿದ ಶೇ.10 'ಪಾಸಿಟಿವ್' ವರದಿಗಳು ರೋಗಿಯ ಚಿಕಿತ್ಸೆಗೆ ಒಳಿತು ಮಾಡುತ್ತವೆನ್ನುವುದೇ ಆ ಪರೀಕ್ಷೆಗಳಿಗೊಂದು ಮಾನ್ಯತೆಯನ್ನು ತಂದುಕೊಡುತ್ತವೆ.



ಆದರೆ ಕೆಲವು ಪ್ರಶ್ನೆಗಳಂತೂ ಏಳುತ್ತವೆ. ಇವೆಲ್ಲಾ ಪರೀಕ್ಷೆಗಳು, ಚಿಕಿತ್ಸೆಗಳು ಮನುಷ್ಯರ ಆರೋಗ್ಯಕ್ಕೆ ಸಂಬಂಧಿಸಿದ ಮೂಲಸಮಸ್ಯೆಗಳನ್ನು ಬಗೆಹರಿಸುತ್ತವೆಯಾ? ಇದನ್ನು ಮಾಡಬೇಕಾ, ಇಲ್ಲವಾ ಎಂಬುದರ ಕುರಿತು ಒಟ್ಟಾರೆ ಕನಿಷ್ಠ ಶೇ.51ರಷ್ಟು ನಿಖರತೆಯನ್ನು ಸಾಧಿಸಲು ಸಾಧ್ಯವಾಗಿದೆಯಾ? ಈ ಎಲ್ಲಾ ಪರೀಕ್ಷೆಗಳು ಹಾಗೂ ಚಿಕಿತ್ಸೆಗಳಿಗಾಗಿ ಹಣ ವ್ಯಯ ಮಾಡುವುದು ಕನಿಷ್ಠ ಶೇ.90ರಷ್ಟು ಜನರಿಗೆ ಸಾಧ್ಯವಾ?

ಈ ದೇಶದ ಆರೋಗ್ಯ ವ್ಯವಸ್ಥೆಯ ಏಕಮಾತ್ರ ಪರಿಹಾರವೆಂಬಂತೆ, ಸರ್ಕಾರ ಘೋಷಿಸುತ್ತಿರುವ ವಿಮೆಗಳು ಇವನ್ನು ಬಗೆಹರಿಸಲು ಸಾಧ್ಯವಿಲ್ಲ. ಏಕೆಂದರೆ, ವಿಮೆಯೆಂಬುದು ಲಾಟರಿ ಕಂಪೆನಿಯ ಆರ್ಥಿಕತೆಗಿಂತ ಸ್ವಲ್ಪ ಮಾತ್ರವೇ ಭಿನ್ನ. ಎಲ್ಲರಿಂದ ಸ್ವಲ್ಪಸ್ವಲ್ಪವೇ ಹಣ ಪಡೆದು, ಎಲ್ಲರ ಎಲ್ಲಾ ಕಾಯಿಲೆಗಳಿಗೂ ಚಿಕಿತ್ಸೆ ನೀಡಬಹುದಾದಷ್ಟು ಹಣವನ್ನು ಕೊಡುವ ವಿಮಾ ಕಂಪೆನಿ ಯಾವುದೂ ಇರಲು ಸಾಧ್ಯವಿಲ್ಲ. ಆಗ ಅದು ಸರ್ಕಾರವಾಗಿ ಬಿಡುತ್ತದೆ. ಏಕೆಂದರೆ ಅದು ಸರ್ಕಾರ ಮಾಡಬಹುದಾದ, ಮಾಡಬೇಕಾದ ಕೆಲಸ. ವಿಮಾ ಕಂಪೆನಿಗಳು ಲಾಭಕ್ಕಾಗಿ ವಿಮೆ ಒದಗಿಸುತ್ತವಾದ್ದರಿಂದ, ಹೇಗಾದರೂ ಮಾಡಿ ಒಂದಷ್ಟು ಕಾಯಿಲೆಗಳನ್ನು, ಚಿಕಿತ್ಸಾ ವೆಚ್ಚದ ಒಂದಷ್ಟು ಭಾಗವನ್ನು ಹೊರಗಿಡುವುದನ್ನು ಮಾಡುತ್ತಲೇ ಇರುತ್ತವೆ. ಅದರಲ್ಲೂ ಸರ್ಕಾರದ ಯೋಜನೆಗಳ ಭಾಗವಾಗಿ ಲಕ್ಷಾಂತರ ಜನರಿಗೆ ವಿಮೆ ಒದಗಿಸಬೇಕಾದಾಗಂತೂ ಇದು ನಡೆದೇ ನಡೆಯುತ್ತದೆ. ಈ ಲೇಖನ ಬರೆಯುತ್ತಿರುವ ಸಂದರ್ಭದಲ್ಲಿ ಆರೋಗ್ಯ ಮಂತ್ರಿ ಯು.ಟಿ.ಖಾದರ್‌ರ ಹೇಳಿಕೆಯೊಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಎಪಿಎಲ್ ಕಾರ್ಡುದಾರರಿಗೆ ಸರ್ಕಾರ ಘೋಷಿಸಿದ್ದ ವಿಮಾ ಯೋಜನೆಯಡಿ, ಸರ್ಕಾರವು (ವಿಮಾ ಕಂಪೆನಿಯು) ಶೇ.90ರಷ್ಟು ಹಣ ಭರಿಸಲಾಗದು; ಶೇ.70ರಷ್ಟನ್ನು ಮಾತ್ರ ಭರಿಸುತ್ತೇವೆಂದು ಅವರು ಹೇಳಿದ್ದಾರೆ. ಇದು ಒಂದು ಅತ್ಯಂತ ಇತ್ತೀಚೆಗಿನ ಸ್ಯಾಂಪಲ್ ಅಷ್ಟೇ.

ಅಂದರೆ, ತಮ್ಮ ಆರೋಗ್ಯ, ಬದುಕು ಹಾಗೂ ಸಾವಿನ ಕುರಿತು ಜನರು ಅನುಭವಿಸುವ ಗೊಂದಲ ಕೊನೆಗೊಳ್ಳುವುದಿಲ್ಲ. ಅತ್ಯಂತ ಅಗ್ಗವಾಗಿ ಸತ್ತು ಹೋಗುತ್ತಿರುವ ಬಡವರ ಜೀವಗಳು ಇಷ್ಟೊಂದು ಗೊಂದಲ ಅನುಭವಿಸುವುದಿಲ್ಲ. ನಾವು ಬಡವರು, ಇಷ್ಟೊಂದು ಪ್ರಶ್ನೆಗಳನ್ನು ಹಾಕಿಕೊಳ್ಳಬಾರದು ಎಂಬುದು ಅವರಿಗೆ ಸಹಜ ಅಭ್ಯಾಸವಾಗಿಬಿಡುವ ಪರಿಸ್ಥಿತಿಯಲ್ಲಿ ಅವರಿರುತ್ತಾರೆ. ನಾಗರಿಕವೆಂದು ಕರೆಸಿಕೊಳ್ಳುವ ಸಮಾಜಕ್ಕೆ ನಾಚಿಕೆಯೆಂಬುದಿಲ್ಲವಾದ್ದರಿಂದ ಇದು ಸದ್ಯದಲ್ಲೇ ಬಗೆಹರಿಯುವುದಿಲ್ಲ. ಆದರೆ ಮಧ್ಯಮ ವರ್ಗಕ್ಕೆ ವಿಪರೀತ ಗೊಂದಲ ಮುಂದುವರೆಯುತ್ತದೆ. ಮಧ್ಯಮ ವರ್ಗವೆಂಬುದು ಒಂದು ಏಕರೂಪದ ವರ್ಗವಲ್ಲ. ಅದರಲ್ಲೇ ಒಂದು ಸಣ್ಣ ವಿಭಾಗ ಮೇಲ್ಚಲನೆ ಪಡೆಯುತ್ತಲಿದ್ದು, ಅವರ ಜೇಬುಗಳು ತುಂಬಿಕೊಂಡಿವೆ. ಆದರೆ ಅದರಲ್ಲಿನ ಮಧ್ಯಮ ವಿಭಾಗ ಮತ್ತು ಕೆಳ ಮಧ್ಯಮವರ್ಗ ಅತ್ಯಂತ ತಳಮಳಕ್ಕೆ ಈಡಾಗುತ್ತಾರೆ. ಅವರು ಸರ್ಕಾರೀ ಆಸ್ಪತ್ರೆಗೆ ಹೋಗಲಾರರು; ಖಾಸಗಿ ಆಸ್ಪತ್ರೆಗಳ ವೆಚ್ಚವನ್ನು ಭರಿಸಲಾರರು.


ಸ್ಥಿತಿವಂತರು ಇವೆರಡರಿಂದ ಹೊರತಾಗಿರುವವರು. ಅವರಿಗೆ ಅಷ್ಟು ಮಟ್ಟಿಗಿನ ಬಿಡುಗಡೆಯಿದೆ. ಆದರೆ ಚಿಕಿತ್ಸೆಯೇ ಕಾಯಿಲೆಗಿಂತ ಭೀಕರವಾಗಿದ್ದು (treatment worse than the disease) ರೋಗಿಯನ್ನು ಸಾಯಿಸಿಬಿಡುವ ಸಾಧ್ಯತೆ ಅವರನ್ನೂ ಕಾಡದೇ ಬಿಡದು. ಹಿಂದೆ ಕ್ಯಾನ್ಸರ್ ಪೀಡಿತ ರೋಗಿಗಳಿಗೆ ಸಾವಿಗಿಂತ ಬದುಕೇ ಭೀಕರವಾಗಿರುತ್ತಿತ್ತು. ಈಗ ದುಡ್ಡಿದ್ದರೆ ಸಾವನ್ನು ಸಹನೀಯಗೊಳಿಸುವಷ್ಟು ವಿಜ್ಞಾನವನ್ನು ಬೆಳೆಸಲಾಗಿದೆ. ಆದರೆ ನಿರ್ದಿಷ್ಟ ಚಿಕಿತ್ಸೆಯ ಕುರಿತು ಗೊಂದಲವೆದ್ದರೆ, ತೀರ್ಮಾನ ಇಂತಹವರಿಗೂ ಕ್ಲಿಷ್ಟಕರವಾಗಿರುತ್ತದೆ.

ಅತ್ಯಂತ ಆಧುನಿಕವೆಂದು ಹೇಳಲಾಗುವ ವೈದ್ಯ ಪದ್ಧತಿಯಲ್ಲಿ ಹೀಗೆಲ್ಲಾ ಇರುವಾಗ, ಸರಿಯಾದ ವೈದ್ಯ ಪದ್ಧತಿ ಯಾವುದು ಎಂಬ ಪ್ರಶ್ನೆಯೂ ಏಳುತ್ತದೆ. ಇದು ವೈಚಾರಿಕವಾಗಿ ಆಲೋಚಿಸುವವರ ನಡುವೆಯೂ ಬಗೆಹರಿಯದ ಸಂಗತಿ. ತರ್ಕ, ಪುರಾವೆ ಆಧಾರಿತ ವ[…] ಪದ್ಧತಿ (evidence based medicine) ಯೆಂ[…] ಅದು ಅಲೋಪತಿ ಮಾತ್ರವೇ ಆಗಿರುವುದರಿಂದ, ಅದ[…] ಮಾತ್ರವೇ ತಾನು ಒಪ್ಪುತ್ತೇನೆ ಎಂದು ಹೇಳುವ ಕ[…] ವಿಚಾರವಾದಿಗಳು ಒಂದೆಡೆಯಿದ್ದಾರೆ. ಅಲೋ[…] ವಿಪರೀತವಾಗಿ ವಾಣಿಜ್ಯೀಕರಣಗೊಂಡಿರುವುದರಿಂದ ಮ[…] ಅದರ ನಿಯಂತ್ರಣವು ಭಾರೀ ದೊಡ್ಡ ಔಷಧಿ ಹಾ[…] ಇನ್ನಿತರ ಕಂಪೆನಿಗಳ ಕೈಯ್ಯಲ್ಲಿ ಇರುವುದರಿ[…] ಅದರಲ್ಲಿರುವುದೆಲ್ಲಾ ವಿಜ್ಞಾನ ಎಂದು ಹೇಳಲಾಗದು. ಅ[…] ಒಂದು ಲಾಭಕೋರ ವೈದ್ಯಪದ್ಧತಿ ಎಂಬ ಅನಿಸಿಕೆಯ[…] ಇನ್ನೊಂದೆಡೆ ಇದ್ದಾರೆ. ಜೊತೆಗೆ, ಅಲೋಪತಿ[…] ಮನುಷ್ಯರನ್ನು ಇಡಿಯಾಗಿ ನೋಡದೇ, ಪ್ರತೀ ಅಂಗವ[…] ಬಿಡಿಬಿಡಿಯಾಗಿ ನೋಡಿ ಚಿಕಿತ್ಸೆಯನ್ನು ನಿರ್ಧರಿಸು[…] ಇತರ ವೈದ್ಯ ಪದ್ಧತಿಗಳು (ಪರ್ಯಾಯ ವೈ[…] ಪದ್ಧತಿ-alternate medicine) ಇಡಿಯ[…] ನೋಡುತ್ತವೆ. ಹಾಗಾಗಿ ಅವೇ ಮೇಲು ಎಂಬ ಅಭಿಪ್ರಾ[…] ವನ್ನು ಹೊಂದಿರುವವರೂ ಇದ್ದಾರೆ. ಇತರ ವೈದ್ಯ ಪದ್ಧತಿ[…] ಇಡಿಯಾಗಿ ನೋಡುತ್ತವೆ ಎಂಬುದಕ್ಕೆ ಆಧಾರಗಳೇ[…] ಇಲ್ಲ. ಅವೂ ಸಹ ಕೆಲವು ಸೂತ್ರಗಳನ್ನು ಅನುಸ[…] ಚಿಕಿತ್ಸೆ ನೀಡುತ್ತವೆ. ಆ ಸೂತ್ರಗಳ ಕುರಿತಾಗಿ ನಿಖರವ[…] ವೈಜ್ಞಾನಿಕ ಸಂಶೋಧನೆಗಳೂ ನಡೆದಿಲ್ಲ. ಹಾಗೆಂದು ಅ[…] ಸಾರಾಸಗಟಾಗಿ ನಿರಾಕರಿಸಲಾಗದು. ಬೇರೆ[…] ಪೂರ್ವಗ್ರಹಗಳನ್ನು ಪಕ್ಕಕ್ಕಿಟ್ಟರೂ, ಎಷ್ಟೋ ಜನಕ್ಕೆ ಇ[…] ವೈದ್ಯ ಪದ್ಧತಿಗಳಿಂದ ಗುಣವಾಗಿರುವುದಂತೂ ನಿಜ.

ಸಾವಿರಾರು ವರ್ಷಗಳ ಕಾಲ ಜನಸಮುದಾಯ[…] 'ಆಧುನಿಕ ವೈದ್ಯ ಪದ್ಧತಿ'ಯನ್ನೇನೂ ನಂಬಿ ಬದುಕಿರ[…] ಜನಸಮುದಾಯಗಳಲ್ಲಿ ಪೀಳಿಗೆಯಿಂದ ಪೀಳಿಗೆಗೆ ಹರಿ[…] ಬಂದ ಜ್ಞಾನವನ್ನು ಸಾರಾಸಗಟಾಗಿ ನಿರಾಕರಿಸುವ[…] ಆಧುನಿಕರ ಉದ್ಧಟತನವಲ್ಲದೇ ಬೇರೇನೂ ಅಲ್ಲ. ಅ[…] ಇದೇ ಸಂದರ್ಭದಲ್ಲಿ ವೈಜ್ಞಾನಿಕವಾದದ್ದು ಅದ[…] ಯಾವುದು, ಹೇಗೆ ಎಷ್ಟು ಎಂಬುದಕ್ಕೆ ಮಾನದಂಡಗಳೇ[…] ಎಂಬುದಕ್ಕೆ ಯಾರಲ್ಲೂ ಸರಿಯಾದ ಉತ್ತರಗಳಿಲ್ಲ. ಎ[…] ವೈದ್ಯ ಪದ್ಧತಿಗಳಲ್ಲೂ ಇರುವ ಒಳಿತನ್ನು ತೆಗೆದುಕೊಂ[…] ಒಂದು ಸಮಗ್ರ ವೈದ್ಯ ಪದ್ಧತಿಯನ್ನು ರೂಪಿಸುವ ನಿಟ್ಟಿ[…] ಪ್ರಯತ್ನಗಳು ಇಲ್ಲವೇ ಇಲ್ಲ. ಈ ಮಧ್ಯೆ ಲಕ್ಷಾಂ[…] ಬಗೆಯ ಸಂಶೋಧನೆಗಳು ಜಗತ್ತಿನ ಬೇರೆ ಬೇರೆ ರಾಷ್ಟ್ರ[…] ಅಲೋಪತಿ ಪದ್ಧತಿಯಲ್ಲಿ ನಡೆಯುತ್ತಲೇ ಇವೆ.

ಇವೆಲ್ಲದರಾಚೆಗೂ 'ಅದೊಂದನ್ನು ಮಾಡಿ[…] ಚೆನ್ನಾಗಿತ್ತೇನೋ. ಅದು ನನ್ನ ಜೀವನವಿಡೀ ಕಾಡು[…] ಎಂಬ ಪಾಪಪ್ರಜ್ಞೆಯನ್ನು ಸಾಧ್ಯವಾದಷ್ಟೂ ಕಡಿಮೆ ಮಾಡ[…] ಮಟ್ಟಿಗೆ ವಿಜ್ಞಾನವನ್ನು ಬೆಳೆಸಲಾಗುವುದಿಲ್ಲವೇ? ಆ ನಿಟ್[…] ಸಂಶೋಧನೆ ನಡೆದರೆ ಲಾಭವಾಗುತ್ತದೆ. ಎ[…] ಸಂಶೋಧನೆಗೆ ಕೋಟಿ ಕೋಟಿ ಸುರಿಯುತ್ತಿರುವ[…] ಅನ್ನಿಸಿದರೆ ಆಗಬಹುದೇನೋ? ಸರ್ಕಾರಗಳು ಸಂಶೋ[…] ಯಿಂದ ಹಿಂದೆ ಸರಿಯುತ್ತಾ, ಲಾಭಕೋರ ಕಂಪೆ[…] ಸುಪರ್ದಿಗೆ ಅದನ್ನು ಒಪ್ಪಿಸಿದ ಮೇಲೆ ವಿಜ್ಞಾನದ ಬೆಳ[…] ಯೂ ವಿಕೃತವಾಗಿರುವ ಸಂದರ್ಭದಲ್ಲಿ ಇದನ್ನು ಖಚಿತ[…] ಹೇಳುವುದು ಕಷ್ಟ. ನಾವು ಅದೊಂದನ್ನು ಸರಿಪಡಿಸಬೇಕ[…] ಇಡೀ ಜೀವನ ನಮ್ಮನ್ನು ಕಾಡಬೇಕಾದ ಸಂಗತಿಯ[…] ಇದೇ, ಈ ರೀತಿಯ ಪರಿಸ್ಥಿತಿಯನ್ನು ಬದಲಿಸುವ ನಿಟ[…] ಕೆಲಸ ಮಾಡುವುದು.

ಇಂಗ್ಲೆಂಡನ್ನು ತಿರಸ್ಕರಿಸುತ್ತಾರೆಯೇ ಸ್ಕಾಟ್‌ಲ್ಯಾಂಡ್ ಜನ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ


...ವಲ ಎಪ್ಪತ್ತು ವರ್ಷಗಳ ಹಿಂದೆ ತನ್ನದು ...ರ್ ಎಂದೂ ಮುಳುಗದ ಸಾಮ್ರಾಜ್ಯ' ಎಂದು ...ಳ್ಳುತ್ತಿದ್ದ ಗ್ರೇಟ್ ಬ್ರಿಟನ್ ಮುಂದಿನ ವಾರ ...ಳ್ಳುವ ಅಂಚಿನಲ್ಲಿದೆ. ಯಾಕೆಂದರೆ ಸೆಪ್ಟೆಂಬರ್ ...ದು ಗ್ರೇಟ್ ಬ್ರಿಟನ್ ಎಂಬ ಸಂಯುಕ್ತ ...ದ ಪ್ರಮುಖ ಭಾಗವಾಗಿರುವ ಸ್ಕಾಟ್‌ಲ್ಯಾಂಡಿನ ...ವು ಕಳೆದ ಮುನ್ನೂರು ವರ್ಷಗಳಂತೆ ...ಡ್ ಜೊತೆ ಮುಂದೆಯೂ ಸಾಗಬೇಕೋ ... ಪ್ರತ್ಯೇಕವಾದ ಸ್ವತಂತ್ರ ದೇಶವಾಗಬೇಕೋ ... ಜನಮತದಲ್ಲಿ ಭಾಗವಹಿಸಲಿದ್ದಾರೆ. ಅವರು ... ದೇಶವಾಗಬೇಕು ಎಂದು ನಿರ್ಧರಿಸಿದರೆ ... ದೇಶಕ್ಕೆ ಹಲವಾರು ರೀತಿಗಳಲ್ಲಿ ...ವಾಗಲಿದೆ ಮಾತ್ರವಲ್ಲ, ಅಂತಾರಾಷ್ಟ್ರೀಯ ...ಲ್ಲಿ ಮುಖಭಂಗವಾಗಲಿದೆ.

...ಗೆ ನೋಡಿದರೆ ಬ್ರಿಟನ್ ದೇಶದ ಅಧೀನದಲ್ಲಿ ...ಯುಕ್ತ ಸಂಸ್ಥಾನ' (ಯುನೈಟೆಡ್ ಕಿಂಗ್‌ಡಮ್)



ಯೂನಿಯನ್ ಜಾಕ್





ಈಸ್ಟ್ ಇಂಡಿಯಾ ಕಂಪನಿಯ ದರ್ಬಾರು


...ದು ಜನ್ಮವೆತ್ತಿದ್ದೇ ಭಾರತದಿಂದಾಗಿ. ಅದು ... ಶತಮಾನದ ಆರಂಭಿಕ ವರ್ಷಗಳು. ಆಗ ...ನ್ ಮತ್ತು ಸ್ಕಾಟ್‌ಲ್ಯಾಂಡ್ ಪ್ರತ್ಯೇಕ ...ಗಳಾಗಿದ್ದವು. ಆದರೆ ಪ್ರಜಾಪ್ರಭುತ್ವ ವ್ಯವಸ್ಥೆ ಅಲ್ಲಿ ...ನ್ನು ಗಟ್ಟಿಗೊಂಡಿರಲಿಲ್ಲವಾದ್ದರಿಂದ ರಾಜರು ಮತ್ತು ...ಪುಟ್ಟ ದಳವಾಯಿಗಳೇ ಎರಡೂ ದೇಶಗಳಲ್ಲಿ ...ಕಾರವನ್ನು ಚಲಾಯಿಸುತ್ತಿದ್ದರು. ಬ್ರಿಟನ್ ರಾಣಿ ...ಜಬೆತ್ ಮತ್ತು ಇತರೆ ಕುಲೀನರು ಹುಟ್ಟುಹಾಕಿದ್ದ ...್ಟ್ ಇಂಡಿಯಾ ಕಂಪನಿ ಅಷ್ಟು ಹೊತ್ತಿಗೆ ...ತದಲ್ಲಿ ಬೇರು ಬಿಡಲಾರಂಭಿಸಿತ್ತು. ಇದನ್ನೇ ...ವಾಳ ಮಾಡಿಕೊಂಡ ಬ್ರಿಟನ್‌ನ ರಾಜಮನೆತನ ...ಲ್ಯಾಂಡ್ ಅನ್ನು ಆಳುತ್ತಿದ್ದ ದಳವಾಯಿಗಳಿಗೆ ...ಮ ಆಮಿಷವನ್ನು ಒಡ್ಡಿತು. ...ನೆಂದರೆ ಸ್ಕಾಟ್‌ಲ್ಯಾಂಡ್ ಬ್ರಿಟನ್ ...ೆತದ ಸಂಯುಕ್ತ ಸಂಸ್ಥಾನದ ...ವಾದರೆ ಭಾರತದಿಂದ ಲೂಟಿ ...ಡೆದ ಹಣದಲ್ಲಿ ಅಲ್ಲಿನ ...ವಾಯಿಗಳಿಗೂ ಪಾಲು ಕೊಡುವುದು.

... ತಮ್ಮ ಸ್ವಾತಂತ್ರ್ಯವನ್ನು ಇಷ್ಟಪಡುತ್ತಿದ್ದ ...ಲ್ಯಾಂಡ್ ಜನರು ಇದರ ವಿರುದ್ಧ ...ವಾಗಿ ಪ್ರತಿಭಟಿಸಿದರೂ ಆ ದೇಶದ ...ಮುಖರು ಬ್ರಿಟನ್ ಜೊತೆ 1707ರಲ್ಲಿ ...ಂದ ಮಾಡಿಕೊಂಡು ಇಂಗ್ಲೆಂಡ್ ದೇಶದ ...ವಾದರು. ಆಗ ಸ್ಕಾಟ್‌ಲ್ಯಾಂಡಿನ ...ಾತ ಕವಿ ರಾಬರ್ಟ್ ಬರ್ನ್ಸ್ ...ಟಿಷರ ಚಿನ್ನಕ್ಕೆ ನಮ್ಮನ್ನು ನಮ್ಮ ...ವಾಳ ನಾಯಕರು ಮಾರಿಬಿಟ್ಟರು" ...ದು ದುಃಖಿಸಿದ್ದರು. ಅಂತಹ ...ಂದದಿಂದಾಗಿ ಸ್ಕಾಟ್‌ಲ್ಯಾಂಡಿನ ...ಮುಖರಿಗೆ ಸಾಕಷ್ಟು ಲಾಭವಾಯಿತು. ...ರ್ ಕೆ ಜಾನ್ ಗಿಲ್ಲಾನಿ ಎಂಬ ...ಇತಿಹಾಸ ತಜ್ಞರ ಪ್ರಕಾರ (ಮಾಹಿತಿ ಆಧಾರ: ...ರ್ ಕೃಷ್ಣನ್ ಸಿಂಹಾ ಎಂಬುವವರು

ತೆಹೆಲ್ಕಾ ಪತ್ರಿಕೆಯಲ್ಲಿ ಬರೆದಿರುವ ಲೇಖನ) 1720ರಿಂದ 1780ರ ತನಕ ಸ್ಕಾಟ್‌ಲ್ಯಾಂಡ್‌ನ ದಳವಾಯಿಗಳು ಭಾರತದಿಂದ ಪಡೆದ ಒಟ್ಟು ಮೊತ್ತ ಬರೋಬ್ಬರಿ 68 ಮಿಲಿಯನ್ ಪೌಂಡ್‌ಗಳು! ಅದಕ್ಕಿಂತ ಹೆಚ್ಚು ಮೊತ್ತವನ್ನು ಬ್ರಿಟನ್ ಭಾರತದಿಂದ ಲೂಟಿ ಮಾಡಿತ್ತು ಎಂದು ಪ್ರತ್ಯೇಕವಾಗಿ ಹೇಳುವ ಅಗತ್ಯತೆ ಇಲ್ಲ.

ಹೀಗೆ ಬ್ರಿಟನ್ ಮತ್ತು ಸ್ಕಾಟ್‌ಲ್ಯಾಂಡ್ ಜೊತೆಗೂಡಿ ಭಾರತವನ್ನು ಲೂಟಿ ಮಾಡಿದ್ದರಿಂದ ನಮ್ಮ ದೇಶ ಸೊರಗಿದಷ್ಟೂ ಅವೆರಡೂ ದೇಶಗಳು ಅಭಿವೃದ್ಧಿ ಹೊಂದಿದವು. ಇಲ್ಲಿಂದ ದೋಚಿದ ಹಣವನ್ನು ಉಪಯೋಗಿಸಿಕೊಂಡೇ ಬ್ರಿಟನ್ ಏಷಿಯಾ, ಆಫ್ರಿಕಾ ಮತ್ತು ಇತರೆ ಕಡೆಗಳಲ್ಲೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿತು; ಎರಡೂ ವಿಶ್ವ ಯುದ್ಧಗಳಲ್ಲಿ ಭಾಗವಹಿಸಿತು. ಅದೇ ಹೊತ್ತಿನಲ್ಲಿ ಸ್ಕಾಟ್‌ಲ್ಯಾಂಡ್ ಕೂಡ ಉದ್ಧಾರವಾಯಿತು. ಸ್ಕಾಟ್‌ಲ್ಯಾಂಡ್ ರಾಜಧಾನಿ ಎಡಿನ್‌ಬರ್ಗ್‌ನಲ್ಲಿ ಸಾಮಾಜಿಕ ಕ್ರಾಂತಿಯೇ ಶುರುವಾಗಿ ಬೌದ್ಧಿಕ, ಆರ್ಥಿಕ ಮತ್ತು ಸಾಮಾಜಿಕ ವಲಯಗಳಲ್ಲಿ ಯೂರೋಪಿನಲ್ಲಿ ಪ್ರಥಮ ಸ್ಥಾನ ಪಡೆಯಿತು. ಗ್ಲಾಸ್ಗೋ ಎಂಬ ಮತ್ತೊಂದು ಊರು ಕಾರ್ಖಾನೆಗಳ ನಗರವಾಗಿ ತಲೆ





ವಿಸ್ಕಿ ಮತ್ತು ಬ್ಯಾಗ್‌ಪೈಪ್‌ಗಳಿಗೆ ಸ್ಕಾಟ್‌ಲ್ಯಾಂಡ್ ಖ್ಯಾತಿ ಪಡೆದಿದೆ

ಎತ್ತಿತು. ಇತರ ಕಡೆಗಳಲ್ಲೂ ಅಭಿವೃದ್ಧಿಯಾಗಿ ಸ್ಕಾಟ್‌ಲ್ಯಾಂಡ್ ಜನರು ಐಷಾರಾಮಿ ಜೀವನ ನಡೆಸಲಾರಂಭಿಸಿದರು.


ಆದರೂ ಸ್ಕಾಟ್‌ಲ್ಯಾಂಡ್ ಜನರನ್ನು ಬ್ರಿಟಿಷರು ಕೀಳಾಗಿ ಕಾಣುತ್ತಿದ್ದರು. ಆ ಮನೋಧರ್ಮವನ್ನು ಆಗ ಲಂಡನ್‌ನಲ್ಲಿ ಜನಪ್ರಿಯವಾಗಿದ್ದ ಲಘುಗೀತೆಯೊಂದು ಬಿಂಬಿಸುತ್ತಿತ್ತು. ಅದು ಹೀಗಿತ್ತು: "ಸೌಂದರ್ಯಕ್ಕೆ ಇಂಗ್ಲೆಂಡ್, ಚಾತುರ್ಯಕ್ಕೆ ಐರ್ಲೆಂಡ್, ಮೋಸಕ್ಕೆ ವೇಲ್ಸ್, ಮಲಕ್ಕೆ ಸ್ಕಾಟ್‌ಲ್ಯಾಂಡ್!"

ದಶಕಗಳು, ಶತಮಾನಗಳು ಉರುಳಿದರೂ ಸ್ಕಾಟ್‌ಲ್ಯಾಂಡ್ ಅನ್ನು ಕಡೆಗಣಿಸುವ ಬ್ರಿಟಿಷರ ಸ್ವಭಾವ ಬದಲಾಗಲಿಲ್ಲ. ರಾಜಾಡಳಿತವನ್ನು ನೆಪಮಾತ್ರಕ್ಕೆ

ಉಳಿಸಿಕೊಂಡಿದ್ದರೂ, ಪ್ರಜಾಪ್ರಭುತ್ವ ಗಟ್ಟಿಗೊಂಡಿದ್ದರೂ ಒಂದೆಡೆ ಸ್ಕಾಟ್‌ಲ್ಯಾಂಡ್ ಜನರ ಆಶೋತ್ತರಗಳನ್ನು ದಮನಿಸುತ್ತಾ, ಇನ್ನೊಂದೆಡೆ ಆ ಪ್ರದೇಶದಲ್ಲಿರುವ ನೈಸರ್ಗಿಕ ಸಂಪತ್ತನ್ನು ಲಪಟಾಯಿಸುತ್ತಾ ಬ್ರಿಟನ್ ಮುಂದುವರೆದಿತ್ತು. ಸಂಯುಕ್ತ ಸಂಸ್ಥಾನದ ಭಾಗವಾಗಿದ್ದರೂ ಬ್ರಿಟನ್ನಿನ ಸಂಸತ್ತಿನಲ್ಲಿ ಸ್ಕಾಟ್‌ಲ್ಯಾಂಡ್‌ನ ಪ್ರಾತಿನಿಧ್ಯ ಕಡಿಮೆ ಇದ್ದದ್ದರಿಂದ ಅಲ್ಲಿ ಆ ಪ್ರದೇಶದ ಹಿತಾಸಕ್ತಿಗಳನ್ನು ಕಾಪಾಡುವುದು ಕಷ್ಟಕರವಾಗಿತ್ತು.

ಸ್ವಾಭಾವಿಕವಾಗಿ ಸ್ಕಾಟಿಷ್ ಜನರು ಬ್ರಿಟಿಷರಿಗಿಂತ ವಿಭಿನ್ನರು. ಅವರು ಸಮಾಜವಾದಕ್ಕೆ ಹೆಚ್ಚು ಒತ್ತು ಕೊಡುವ ಜನ. ಆದ್ದರಿಂದಲೇ ಕಳೆದ 300 ವರ್ಷಗಳಿಂದ ಸ್ಕಾಟ್‌ಲ್ಯಾಂಡ್ ಬ್ರಿಟನ್ನಿನ ಭಾಗವಾಗಿದ್ದರೂ ಹಲವು ವಲಯಗಳಲ್ಲಿ ತನ್ನ ಸ್ವತಂತ್ರ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿದೆ. ಉದಾಹರಣೆಗೆ ನವಆರ್ಥಿಕ ನೀತಿಯಿಂದಾಗಿ ಇವತ್ತು ಇಂಗ್ಲೆಂಡ್‌ನಲ್ಲಿ ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳು ಖಾಸಗಿ ಬಂಡವಾಳಿಗರ ವಶವಾಗಿದ್ದರೆ ಸ್ಕಾಟ್‌ಲ್ಯಾಂಡ್‌ನಲ್ಲಿ ಇವತ್ತಿಗೂ ಇವೆರಡೂ ಸರ್ಕಾರದ ಅಧೀನದಲ್ಲಿದ್ದು ಉಚಿತವಾಗಿ ಎಲ್ಲರ ಕೈಗಳಿಗೆ ಎಟುಕುತ್ತವೆ. ಹಾಗೆಯೇ ಅಲ್ಲಿನ ಕೈಗಾರಿಕೆ ಮತ್ತು ವಿಜ್ಞಾನ ಕ್ಷೇತ್ರಗಳೂ ಬರೀ ಲಾಭಬಡುಕ ಸಂಸ್ಥೆಗಳಾಗಿರದೆ ಜನಪರವಾಗಿವೆ. ಇತ್ತೀಚೆಗೆ ಇಂಗ್ಲೆಂಡ್ ಬಲಪಂಥೀಯ ಪಕ್ಷಗಳತ್ತ ವಾಲುತ್ತಿರುವುದು ಸ್ಕಾಟಿಷ್ ಜನರಲ್ಲಿ ಆತಂಕವನ್ನು ಹೆಚ್ಚಿಸುತ್ತಿದೆ. ಜೊತೆಗೆ ಅಮೆರಿಕದ ಸಂಗಡ ಇಂಗ್ಲೆಂಡ್ ಜಗತ್ತಿನಾದ್ಯಂತ ನಡೆಸುತ್ತಿರುವ ದಮನಗಳ ಪಾಪದ ಕಳೆಯೂ ಸ್ಕಾಟ್‌ಲ್ಯಾಂಡಿಗೆ ಅಂಟಿಕೊಂಡಿದೆ. ಇವೆಲ್ಲದರ ಜೊತೆಗೆ ಇವತ್ತು ಇಂಗ್ಲೆಂಡ್ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿರುವುದರಿಂದ ಸ್ಕಾಟ್‌ಲ್ಯಾಂಡ್ ಕೂಡ ಅದಕ್ಕೆ ತುತ್ತಾಗುವ ಅಪಾಯವೂ ಇದೆ.

ತಮಗೆ ಬೇಡವಾಗಿದ್ದರೂ ಮುನ್ನೂರು ವರ್ಷ ಸಂಯುಕ್ತ ಸಂಸ್ಥಾನದ ಭಾಗವಾಗಿದ್ದ ಸ್ಕಾಟಿಷ್ ಜನರು ತಮಗೆ ಸ್ವಾತಂತ್ರ್ಯ ಬೇಕೆಂದು ಆಗ್ರಹಿಸುತ್ತಲೇ ಇದ್ದರು. ಅವರ ಅದೃಷ್ಟಕ್ಕೆ ಕಳೆದ ವರ್ಷ ನಡೆದ ಚುನಾವಣೆಗಳಲ್ಲಿ ಗೆದ್ದ ಸ್ಕಾಟಿಷ್ ನ್ಯಾಷನಲಿಸ್ಟ್ ಪಾರ್ಟಿ ಪ್ರತ್ಯೇಕ ದೇಶವಾಗುವ ಬಗ್ಗೆ ಜನಮತವನ್ನು ನಡೆಸಲಾಗುವುದು ಎಂದು ಘೋಷಿಸಿತ್ತು. ಈಗ ಅದು ಸನ್ನಿಹಿತವಾಗಿದೆ.



ಸ್ಕಾಟ್‌ಲ್ಯಾಂಡ್ ಪ್ರತ್ಯೇಕ ದೇಶವಾಗುವುದು ದಮನ ಪ್ರವೃತ್ತಿಯ ಇಂಗ್ಲೆಂಡ್ ಮತ್ತು ಯುದ್ಧಕೋರ ಅಮೆರಿಕಕ್ಕೆ ಬೇಡವಾಗಿದೆ. ಆದ್ದರಿಂದ ಅವೆರಡೂ ದೇಶಗಳು ಸ್ಕಾಟಿಷ್ ಜನರಿಗೆ ವಿವಿಧ ರೀತಿಯ ಧಮಕಿಗಳನ್ನು ಹಾಕುತ್ತಿವೆ. ಆದರೆ ಸ್ಕಾಟಿಷರು ಇದ್ಯಾವುದಕ್ಕೂ ಜಗ್ಗುತ್ತಿಲ್ಲ.

ಬರುವ 18ರಂದು ತಾವು ಪ್ರತ್ಯೇಕ ದೇಶವಾಗಬೇಕೆಂದು ಸ್ಕಾಟಿಷ್ ಜನರು ನಿರ್ಧರಿಸಿದರೆ ಮುಂದೆ ಆ ದೇಶ ಯಾವ ನಿಟ್ಟಿನಲ್ಲಿ ಸಾಗಲಿದೆ ಎಂಬುದರ ಬಗ್ಗೆ ಹಲವು ಸುಳಿವುಗಳು ಸಿಕ್ಕಿವೆ. ಮೊದಲನೆಯದಾಗಿ ಸ್ಕಾಟ್‌ಲ್ಯಾಂಡ್ ಸರ್ಕಾರ ಮತ್ತು ಪ್ರಜೆಗಳು ಅಣ್ವಸ್ತ್ರಗಳ ವಿರೋಧಿ ನಿಲುವನ್ನು ಹೊಂದಿದ್ದಾರೆ. ಆ ಕಾರಣಕ್ಕೆ ಸ್ಕಾಟ್‌ಲ್ಯಾಂಡ್ ಪ್ರದೇಶದಲ್ಲಿರುವ ಬ್ರಿಟನ್ನಿನ ನೌಕಾದಳದ ಅಣ್ವಸ್ತ್ರಗಳನ್ನು ಹೊಂದಿರುವ ಜಲಾಂತರ್ಗಾಮಿ ನೌಕೆಗಳ ಕೇಂದ್ರವನ್ನು 2020ರೊಳಗೆ ಮುಚ್ಚುವುದಾಗಿ ಘೋಷಿಸಿದೆ. ಆ ಕೇಂದ್ರವನ್ನು ಬಿಟ್ಟು ಮತ್ತೊಂದು ಕೇಂದ್ರ ಬ್ರಿಟನ್‌ನಲ್ಲಿ

ಇಲ್ಲವಾದ್ದರಿಂದ ಸಹಜವಾಗಿಯೇ ಬ್ರಿಟನ್ ಕಂಗಾಲಾಗಿದೆ.

ಹಾಗೆಯೇ ಇಂಗ್ಲೆಂಡಿನಿಂದ ಪ್ರತ್ಯೇಕಗೊಂಡರೆ ಬ್ರಿಟನ್ ಜಗತ್ತಿನ ವಿವಿಧ ಕಡೆ ಭಾಗಿ ಆಗಿರುವ ಯುದ್ಧಗಳಲ್ಲಿ ಸ್ಕಾಟ್‌ಲ್ಯಾಂಡ್ ಭಾಗವಹಿಸುವುದಿಲ್ಲವಾದ್ದರಿಂದ ಆ ಮೂಲಕ ಉಳಿಯುವ ಹಣವನ್ನು ಸಾಮಾಜಿಕ ಅಭಿವೃದ್ಧಿಗೆ ಉಪಯೋಗಿಸಲಾಗುವುದು ಎಂದೂ ನಿರ್ಧರಿಸಿಯಾಗಿದೆ. ಇದೂ ಕೂಡ ಬ್ರಿಟಿಷ್ ಸರ್ಕಾರದ ನಿದ್ದೆಗೆಡಿಸಿದೆ.

ಇದೇ ಸಮಯದಲ್ಲಿ ಇಂಗ್ಲೆಂಡಿಗೆ ತಲೆನೋವಾಗಿರುವ ಇತರೆ ಹಲವು ವಿಷಯಗಳೂ ಇವೆ. ಅವುಗಳಲ್ಲಿ ಕೆಲವು ತಮಾಷೆಯಾಗಿವೆ. ಮೊದಲನೆಯದಾಗಿ 'ಸಂಯುಕ್ತ ಸಂಸ್ಥಾನ' ಮತ್ತು 'ಗ್ರೇಟ್ ಬ್ರಿಟನ್' ಎಂಬ ಹೆಸರುಗಳನ್ನೇ ತೆಗೆದುಕೊಳ್ಳೋಣ. ಸ್ಕಾಟ್‌ಲ್ಯಾಂಡ್ ಪ್ರತ್ಯೇಕವಾದನಂತರ ಅಲ್ಲಿ 'ಸಂಯುಕ್ತ' ಮತ್ತು 'ಗ್ರೇಟ್' ಎಂಬ ಎರಡೂ ಪದಗಳಿಗೆ ಅರ್ಥವೇ ಇಲ್ಲದಂತಾಗುತ್ತದೆ. ಅದನ್ನು ಬದಲಾಯಿಸಬೇಕಾಗುತ್ತದೆ.

ಎರಡನೆಯದಾಗಿ ಬ್ರಿಟನ್ ದೇಶದ ಧ್ವಜ. 'ಯೂನಿಯನ್ ಜಾಕ್' ಎಂದು ಕರೆಯಲ್ಪಡುವ ಈ ಧ್ವಜದಲ್ಲಿ ಇಂಗ್ಲೆಂಡಿನ + ಚಿಹ್ನೆ ಮತ್ತು ಸ್ಕಾಟ್ಲೆಂಡ್‌ನ X ಚಿಹ್ನೆಯನ್ನು ಬೆರೆಸಲಾಗಿದೆ. ಆಗ ಇದನ್ನೂ ಬದಲಾಯಿಸಬೇಕಾಗಿದೆ.

2012ರಲ್ಲಿ ನಡೆದ ಒಲಂಪಿಕ್ಸ್‌ನಲ್ಲಿ ಬ್ರಿಟನ್ ತಂಡದಲ್ಲಿ ಶೇ. 10ರಷ್ಟು ಸ್ಕಾಟ್‌ಲ್ಯಾಂಡ್‌ನ ಕ್ರೀಡಾಪಟುಗಳಿದ್ದರು. ಅವರು ಬ್ರಿಟನ್ ಗೆದ್ದ ಒಟ್ಟು ಪದಕಗಳಲ್ಲಿ ಶೇ. 20 ಗೆದ್ದಿದ್ದರು. ಮುಂದಿನ ಒಲಂಪಿಕ್ಸ್‌ನಲ್ಲಿ ಅವರಿಲ್ಲದೆ ಬ್ರಿಟನ್ ತಂಡ ಸೊರಗುತ್ತದೆ.


ಇನ್ನು 77 ವರ್ಷಗಳ ನಂತರ ಪ್ರತಿಷ್ಠಿತ ವಿಂಬಲ್ಡನ್ ಟೆನ್ನಿಸ್ ಮ್ಯಾಚ್ ಗೆದ್ದ ಹೆಮ್ಮೆಯ ಬ್ರಿಟನ್ ಪುತ್ರ ಎಂದು ಆ್ಯಂಡಿ ಮುರ್ರೆಯನ್ನು ಬಿಂಬಿಸಲಾಗಿತ್ತು. ಆದರೆ ಆತ ಸ್ಕಾಟ್‌ಲ್ಯಾಂಡ್ ಪ್ರಜೆ ಆಗುವುದರಿಂದ ಆ ಹೆಮ್ಮೆಯೂ ಬ್ರಿಟಿಷರಿಗೆ ಇಲ್ಲದಂತಾಗುತ್ತದೆ.

ಅದೆಲ್ಲ ಒತ್ತಟ್ಟಿಗಿರಲಿ, ಕಳೆದ ಶತಮಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯ ಕರಗುತ್ತಿದ್ದ ಸಮಯದಲ್ಲೇ ಬೆಳ್ಳಿತೆರೆಯ ಮೇಲೆ ಬ್ರಿಟಿಷ್ ಸರ್ಕಾರದ ಶಕ್ತಿಯ ಪ್ರತೀಕದಂತೆ ಜಗತ್ತಿನಾದ್ಯಂತ ಮೆರೆದದ್ದು 'ಜೇಮ್ಸ್ ಬಾಂಡ್' ಎಂಬ ಕಾಲ್ಪನಿಕ ಹೀರೋ. ಆದರೆ ಆತನ ಮೂಲವೂ ಸ್ಕಾಟ್‌ಲ್ಯಾಂಡ್. ಆದ್ದರಿಂದ ಅದೂ ಬ್ರಿಟಿಷರ ಪಾಲಿಗೆ ಶೂನ್ಯವಾಗಲಿದೆ!

ಮುನ್ನೂರು ವರ್ಷಗಳ ಕಾಲ ತನ್ನನ್ನು ಕಡೆಗಣಿಸಿದ, ದಮನಿಸಿದ, ಅವಹೇಳನ ಮಾಡಿದ ಬ್ರಿಟಿಷರಿಂದ ಸ್ಕಾಟಿಷ್ ಜನರಿಗೆ ಸ್ವಾತಂತ್ರ್ಯ ಪಡೆಯುವ ಸುವರ್ಣ ಅವಕಾಶ ಈಗ ಎದುರಾಗಿದೆ. ಅದನ್ನು ಅವರು ಸರಿಯಾಗಿ ಉಪಯೋಗಿಸಿಕೊಳ್ಳುತ್ತಾರೋ ಇಲ್ಲವೋ ಎಂಬುದು ಮುಂದಿನ ವಾರ ಗೊತ್ತಾಗಲಿದೆ. ಈಗ ಬ್ರಿಟನ್ ಆತಂಕ ಮತ್ತು ಅವಮಾನದಿಂದ ತತ್ತರಿಸುತ್ತಿದೆ... ■



ರೇಪಿಸ್ಟ್ ರಾಘುಸ್ವಾಮಿಯ ಪಲಾಯನ ಪ್ರಸಂಗ



ಹವ್ಯಕ ಬ್ರಾಹ್ಮಣರ ಪರಮ ಪವಿತ್ರ ರಾಮಚಂದ್ರಾಪುರ ಮಠದ 'ಪಾಪ ಕೋಟಿ' ಕೊಟ್ಟ ಮಾತಿಗೆ ತಪ್ಪಿ ಪರಾರಿಯಾಗಿದೆ! ತನ್ನ ಧಾರ್ಮಿಕ ದಂಧೆಗೆ ಅಮಾಯಕ ಆಕಳನ್ನು 'ಟ್ರೇಡ್‌ಮಾರ್ಕ್' ಮಾಡಿಕೊಂಡು ಪುಣ್ಯಕೋಟಿ ಗೋಮುಖ ವ್ಯಾಘ್ರನೆಂಬುದು ಬಟಾಬಯಲಾಗಿ ಹೋಗಿದೆ. ರಾಮಕಥಾದ ಬಲಿಪಶು ಪ್ರೇಮಲತಾಗೆ ಲೈಂಗಿಕ ಕಿರುಕುಳ ಕೊಟ್ಟ ಕೇಸ್‌ಗಾಗಿ ಬಂಧಿಸಲು ಬಂದಿದ್ದ ಬೆಂಗಳೂರು ಪೊಲೀಸರಿಗೆ ಈ ರಂಗೀಲಾ ರಾಘವ 'ಚಾತುರ್ಮಾಸ್ಯ' ವ್ರತ ಮುಗಿದ ಮರುದಿನವೇ (10-9-2014) ಖುದ್ದು ಬಂದು ವಿಚಾರಣೆಗೆ ಒಳಗಾಗುತ್ತೇನೆಂದು ಮುಚ್ಚಳಿಕೆ ಬರೆದು ಕೊಟ್ಟಿದ್ದ. ಆದರೆ ಚಾತುರ್ಮಾಸ್ಯ ನೆಪದಿಂದ ಸಮಯಾವಕಾಶ ಪಡೆದ ಈ ವಂಚಕ ಕಾನೂನಿನ ದೌರ್ಬಲ್ಯ ಬಳಸಿಕೊಂಡು ಬಂಧನ ತಪ್ಪಿಸಿಕೊಂಡು ಕುಹಕದ ನಗೆ ಚೆಲ್ಲುತ್ತಿದ್ದಾನೆ!!

ಹೈಡ್ರಾಮಾ!

ದಿಲ್ಲಿಗೆ ಹೋಗಿದ್ದ ಸಿಎಂ ಸಿದ್ದುಗೆ ಅಲ್ಲಿಯ ಪತ್ರಕರ್ತರು 'ರೇಪ್ ಆರೋಪಿ ರಾಘು ಸ್ವಾಮಿ ಬಗ್ಗೇಕೆ ಮೃದು ಧೋರಣೆ?' ಎಂಬ ಪ್ರಶ್ನೆ ಎಸೆದಿದ್ದರು. ಸಿಎಂಗೆ ಎದುರಾದ ಈ ಸಂದಿಗ್ಧದಿಂದ ಅದುವರೆಗೆ ನಿಷ್ಕ್ರಿಯರಾಗಿದ್ದ ಬೆಂಗಳೂರು ಪೊಲೀಸರು ಗಡಿಬಿಡಿಗೆ ಬಿದ್ದರು. ಕುತಂತ್ರಗಾರಿಕೆ ಮತ್ತು ದುಡ್ಡಿನ ಬಲದ ಬಲಾಢ್ಯ ಬ್ರಾಹ್ಮಣ ಲಾಬಿಯ ಬುಟ್ಟಿಗೆ ಬಿದ್ದಿದ್ದ ಪೊಲೀಸರು ಅತ್ಯಾಚಾರಿ ಸ್ವಾಮಿಯನ್ನು ಬಂಧಿಸುವ ಪ್ರಹಸನವನ್ನಾದರೂ ಮಾಡಬೇಕಾದ ಅನಿವಾರ್ಯತೆ ಶುರುವಾಯಿತು. "ಸ್ವಾಮೀಜಿಯನ್ನು ಅರೆಸ್ಟ್ ಮಾಡೋದಿಲ್ಲ... ಆದರೆ ಬಂಧಿಸಲು ದಂಡೆತ್ತಿ ಬಂದಂತೆ ನಾಟಕ ಮಾಡುತ್ತೇವೆ... ಸ್ವಾಮಿ ಚಾತುರ್ಮಾಸ್ಯ ಮುಗಿದತಕ್ಷಣ ವಿಚಾರಣೆಗೆ ಹಾಜರಾಗುವ ಮುಚ್ಚಳಿಕೆ ಬರೆದುಕೊಡುವ ವ್ಯವಸ್ಥೆ ಮಾಡಿದರೆ ಸಾಕು..." ಎಂದು ಮಠದ ಮಧ್ಯವರ್ತಿಗಳಿಗೆ ಪ್ಲಾನ್ ಪೊಲೀಸರೇ ಹೇಳಿಕೊಟ್ಟರು.

ರಾಘವನ ಚಾತುರ್ಮಾಸ್ಯ ವ್ರತವೆಂದರೆ ಅದೊಂಥರಾ ಭೂರಿಭೋಜನ, ಮನರಂಜನೆಗಳ ಮೋಜು-ಮಸ್ತಿ; ಧಾರ್ಮಿಕತೆಯ ಮುಖವಾಡದಲ್ಲಿ ಜನಸಾಮಾನ್ಯರ ಕಾಮನೆ ಕೆರಳಿಸಿ ಲೌಕಿಕ ಬದುಕಿನ 'ಸುಖ' ಸಾಕ್ಷಾತ್ಕರಿಸುವುದು! ಹೀಗಾಗಿ ಚಾತುರ್ಮಾಸ್ಯದ ಪ್ರತಿದಿನವೂ ಎರಡು-ಮೂರು ಸಾವಿರ ಜನ ಸೇರುತ್ತಿದ್ದರು. ಶೂದ್ರಾದಿಗಳಿಗೂ ಊಟ-ಆಟ ತೋರಿಸಿ ಸೆಳೆಯಲಾಗಿತ್ತು. ಅಂದು ಏಕಾಏಕಿ (5-9-14) ಸ್ವಾಮೀಜಿಯ ಮೌನವ್ರತ. ಪೊಲೀಸರು ಬೆಂಗಳೂರಿಂದ ಸ್ವಾಮಿ ದಸ್ತಗಿರಿಗೆ ಬಂದಿದ್ದಾರೆಂಬ ಸುದ್ದಿ ಮಠ ಮೂಲಕವೇ ಹರಡಿ ಭಕ್ತರ ಆತಂಕ-ಅಂಧಶ್ರದ್ಧೆಯ ದುರ್ಲಾಭ ಪಡೆಯಲು ಗೊಂದಲ ಮೂಡಿಸಿತ್ತು.

ಗುರುವಾರವೇ ಹೊನ್ನಾವರಕ್ಕೆ ಬಂದಿದ್ದ ಬೆಂಗಳೂರಿನ ಗಿರಿನಗರ ಏರಿಯಾದ ಎಸಿಪಿ ಸುರೇಶ್‌ಬಾಬು ತಂಡ 'ತನಿಖೆ' ಶುರು ಹಚ್ಚಿಕೊಂಡಿತ್ತು. ಕಾರವಾರ ಜೈಲಲ್ಲಿದ್ದ ಪ್ರೇಮಲತಾ-ದಿವಾಕರ್ ದಂಪತಿಗಳ ಹೇಳಿಕೆ ಪಡೆದಿತ್ತು. ಶುಕ್ರವಾರ ಸಂಜೆಯ ಹೊತ್ತಿಗೆ ಹೊನ್ನಾವರದ ಕೆಕ್ಕಾರ ಎಂಬ ಕುಗ್ರಾಮದಲ್ಲಿರುವ ರಾಘವ ಸ್ವಾಮಿಯ ಅಡ್ಡೆಗೆ ಹೊರಟಿತ್ತು. ಜತೆಗೆ ನೂರಾರು ಪೊಲೀಸರು. ಇದು ಪ್ರಹಸನ ಎಂಬುದು ಮಠದ ಘಟಾನುಘಟಿಗಳಿಗೆ- ಖುದ್ದು ಸ್ವಾಮಿಗೆ ಗೊತ್ತಿತ್ತು. ಆದರೂ ದಲಿತರು-ಶೂದ್ರರು-ಬ್ರಾಹ್ಮಣರು ಮಠದ ಸುತ್ತ ದೊಡ್ಡ ಸಂಖ್ಯೆಯಲ್ಲಿ ಜಮೆಯಾಗುವಂತೆ ಮಾಡಲಾಯ್ತು. ಮುಕ್ರಿ (ದಲಿತರು)ಗಳನ್ನು ಮುಂಚೂಣಿಯಲ್ಲಿ ನಿಲ್ಲಿಸಿದ ಜನಿವಾರಿಗಳು ಪೊಲೀಸರಿಗೆ ಮಠದೊಳಗೆ ಅಡಿಯಿಡದಂತೆ ಬೆದರಿಸಿದರು.

ಚಾತುರ್ಮಾಸ್ಯ ಕಮಿಟಿಯ ವಿಪ್ರೋತ್ತಮರು "ತಮಗೇ ನೋಟಿಸ್ ಕೊಟ್ಟು ಹೋಗಿ... ಗುರುಗಳ ಬಂಧನಕ್ಕೆ ಮಾತ್ರ ಬಿಡಲಾರೆವು..." ಎಂದಬ್ಬರಿಸಿದರು. ಹುಂಬ



ಶೂದ್ರರಂತೂ ಕಳ್ಳ ಸ್ವಾಮಿಯ ರಕ್ಷಣೆಗೆ ಗುರಾಣಿಯಂತೆ ನಿಂತುಬಿಟ್ಟರು. ಪೊಲೀಸರು ಸ್ವಾಮಿಯನ್ನು ಸಾಕ್ಷಾತ್ ನೋಡಬೇಕೆಂದರು. "... ಇಲ್ಲ... ಇಲ್ಲ... ಗುರುಗಳು ಏಕಾದಶಿಯ ಮೌನವ್ರತದಲ್ಲಿದ್ದಾರೆ... ಅವರೇ ಬೇಕೆಂದರೆ ಕಾಯಬೇಕು..." ಎಂದು ಮಠ ಮೇನಿಯಾದ ಭಕ್ತರು ಬೊಬ್ಬೆ ಹೊಡೆದರು. ಪೊಕ್ಕು ಪೊಲೀಸರು ಕಾದೇ ಕಾ[...] ಶನಿವಾರ ಬೆಳಗಿನ ಜಾವ 2ರವರೆಗೂ ಕಾದರು. ಉಂಡರು; ಮನರಂಜನೆ ಕಂಡರು.

ಬೆಳಗಿನ ಜಾವ ಎಸಿಪಿ ಬಾಬು ಮತ್ತು [...] ಸಂದೀಪರನ್ನು 'ಏಕಾಂತ ದರ್ಶನ'ಕ್ಕೆ ಕರೆಸಿಕೊಂಡ ರಾ[...] ಸ್ವಾಮಿ, "ನಾನಿನ್ನು ಚಾತುರ್ಮಾಸ್ಯ ವ್ರತದಲ್ಲಿದ್ದೇನೆ... ವ್ರತ ಮುಗಿವ ತನಕ ಸುತ್ತಲಿನ ಸೀಮೆ- ನದಿ ದಾ[...] ಬಾರದೆಂಬ ನಿಯಮವಿದೆ... ನಾನೇ ವ್ರತ ಮುಗಿ[...] ಬಂದು ವಿಚಾರಣೆಗೆ ಸಹಕರಿಸುತ್ತೇನೆ... ಹಾಗೊಮ್ಮೆ ನಿ[...] ನನ್ನನ್ನು ಈಗಲೇ ಬಂಧಿಸಿ ಕರೆದೊಯ್ಯಲು ಪ್ರಯತ್ನಿಸಿ[...] ಲಾ ಅಂಡ್ ಆರ್ಡರ್ ಸಮಸ್ಯೆ ಆದೀತು... ಆ[...] ಅನಾಹುತಕ್ಕೆ ನಾನು ಬಾಧ್ಯಸ್ಥನಲ್ಲ..." ಎಂದು ಧ[...] ಹಾಕಿಬಿಟ್ಟ. ಪೊಲೀಸರಿಗೂ ಇದೇ ಬೇಕಿತ್ತು. ಕಾನೂ[...] ಸುವ್ಯವಸ್ಥೆಯ ಕುಂಟುನೆಪದಿಂದ ಮುಚ್ಚಳಿಕೆ ಬರೆಸಿಕೊ[...] ರಾಘವನನ್ನು ನಿರಾತಂಕವಾಗಿ ಇರಲು ಹೇಳಿಹೋದ[...] ಆಗ ಕೆಕ್ಕಾರ ಮಠದ ಸುತ್ತ ಇದ್ದ 'ಉದ್ವಿಗ್ನತೆ' ಕರ[...] ಮುಗ್ಧ ಭಕ್ತರು ಬರಿಗೈಲಿ ಪೊಲೀಸರು ಕಳಿಸಿದ ಗುರು[...] 'ಮಹಿಮೆ' ಕೊಂಡಾಡಿದರು. ಇದೇತಾನೆ ಪುರೋಹಿತ[...] ಜಾಣ್ಮೆ-ತಂತ್ರಗಾರಿಕೆ?! ಅಲ್ಲಿಗೆ ಬಂಧನದ ಪ್ರಹಸ[...] ತೆರೆಬಿತ್ತು!!

ಪೊಲೀಸರಿಗೆ ಫಲ ಮಂತ್ರಾಕ್ಷತೆ!

ಹೊನ್ನಾವರದಿಂದ ಬೆಂಗಳೂರಿನವರೆಗಿನ ಪೊಲೀಸ[...] ಮಠದ ಮಾಫಿಯಾ ಬುಕ್ ಮಾಡಿಕೊಂಡಿ[...] ಇಂಥದೊಂದು ಅನುಮಾನ ರುಜುವಾತು ಪಡಿಸುವ[...] ಪೊಲೀಸರ ನಡೆ-ನುಡಿ. ಇದೊಂದು ಪಕ್ಕಾ ಕಳ್ಳ-ಪೊಲಿ[...] ಆಟ. ಹೊನ್ನಾವರದಲ್ಲಿ ಗಾಯಕಿ ಪ್ರೇಮಲತಾ, ಆಕೆ[...] ಪತಿ ದಿವಾಕರ, ಮೈದುನ ನಾರಾಯಣನ ವಿರ[...] ಬ್ಲಾಕ್‌ಮೇಲ್ ಕೇಸ್ ಮಠದವರು ದಾಖಲಿಸಿದಾಗ ಅ[...] ಎಲ್ಲಿಯೂ ಸುದ್ದಿಯಾಗದಂತೆ ಪೊಲೀಸ್ ವ್ಯ[...] ನೋಡಿಕೊಂಡಿದೆ. ಅಕಸ್ಮಾತ್ ಕೇಸ್ ಆಗಿರುವ[...] ಪ್ರೇಮಲತಾ ಪರಿವಾರಕ್ಕೆ ಗೊತ್ತಾದರೆ ಅವರು [...] ಮರೆಸಿಕೊಂಡು ರಾಘುಸ್ವಾಮಿ ವಿರುದ್ಧವೇ ಕೇಸ್ ಜಡಿ[...] ತ್ತಾರೆಂಬ ಭಯ ಮಠದ ಮಠ್ಠಾಳರಿಗಿತ್ತು. ಮಠದ[...] ಕೊಟ್ಟ ದೂರಿನಲ್ಲೇ ಇದು ವ್ಯಕ್ತವಾಗಿದೆ. ಪ್ರೇಮ[...] ಲೈಂಗಿಕ ಅತ್ಯಾಚಾರದ ಕೇಸು ಹಾಕುವುದಾಗಿ ಬೆದರಿ[...] ದ್ದಾರೆಂದು ಮಠದ ಕಂಪ್ಲೇಂಟಿನಲ್ಲಿದೆ.


ಇದರರ್ಥ ಇಷ್ಟೇ. ಸ್ವಾಮಿ ಅರೆಸ್ಟಾಗುವ ಮೊದ[...] ಪ್ರೇಮಲತಾ ಜೈಲಿಗೆ ಬೀಳಬೇಕು; ತನ್ಮೂಲಕ ಆಕೆಯಿ[...] ರಾಘವನ ಕಾಮಕಾಂಡ ಕಥಾ ಹೊರಬೀಳದ[...] ನಿರ್ಬಂಧಿಸಬೇಕು. ಇದಕ್ಕೆ ಹೊನ್ನಾವರದ ಪೊಲೀ[...] ಮಠದ ಸಗಣಿ ತಿಂದು ಸಹಕರಿಸಿದ್ದಾರೆ. ಸಣ್ಣ-ಪುಟ್ಟ ತ[...] ತಕರಾರಾದರೂ ಪ್ರೆಸ್-ಟಿವಿಯವರಿಗೆ ಸುದ್ದಿ ಕೊ[...] ವೀರಾಧಿವೀರರಂತೆ ಹಾರಾಡುವ ಹೊನ್ನಾವರ ಪೊಲೀಸ[...]





ಕಾವಿ ಕಾಮುಕನ ಕಾಪಾಡುತ್ತಿದ್ದಾರೆ ರಾಜಕಾರಣಿಗಳು!


ಶ್ರದ್ಧಾ-ಭಕ್ತಿಯಿಂದ ತನಗೆ ನಡೆದುಕೊಳ್ಳುತ್ತಿದ್ದ ಮುಗ್ಧ ಗಾಯಕಿ ಪ್ರೇಮಲತಾರನ್ನು ನಿರಂತರ-ನಿರಾತಂಕವಾಗಿ ಸ್ವಾಹಾ ಮಾಡಿದ ಗೋಕರ್ಣ ಮಠಾಧೀಶ ರಾಘವೇಶ್ವರ ಭಾರತಿ ಕಾವಿ-ಕಾಸಿನ ಮಹಿಮೆಯಿಂದ ಸರ್ವಸಂಗ ಪರಿತ್ಯಾಗಿಯಂತೆ ತೋರಿಸಿಕೊಳ್ಳುತ್ತಿರುವುದು ವಿಪರ್ಯಾಸವೇ ಸರಿ. ಇಡೀ ಆಡಳಿತ ವ್ಯವಸ್ಥೆಯೇ ಆತನ ಕಾಮ ವಿಕಾರದಡಿಯಲ್ಲಿ ಕಾಲು ಮುರಿದುಕೊಂಡು ಬಿದ್ದಂತೆ ಭಾಸವಾಗುತ್ತಿದೆ. ಅನಾಚಾರ-ಅವ್ಯವಹಾರದಿಂದ ಲೋಕ ಪ್ರಸಿದ್ಧನಾಗಿದ್ದ ರಗಳೆ ರಾಘು ಸ್ವಾಮಿಯ 'ಕೀರ್ತಿ' ಕಿರೀಟಕ್ಕೀಗ ಅತ್ಯಾಚಾರದ ಗರಿಯೂ ಅಧಿಕೃತವಾಗೇ ಸೇರಿಕೊಂಡಿದೆ!


ದುರಂತವೆಂದರೆ, ರಾಘು ಸ್ವಾಮಿಯ ಬುರ್ನಾಸ್ ಭಾನ್ಗಡಿ ಗೊತ್ತಿದ್ದು-ಗೊತ್ತಿದ್ದೂ ಆತನ ಬೆನ್ನಿಗೆ ಆಳುವ ಕಾಂಗ್ರೆಸ್‌ನ ಮಂತ್ರಿ-ಶಾಸಕ-ಶಾಸಕಿ ನಿಂತು











ಬೆಂಬಲಿಸುತ್ತಿದ್ದಾರೆ. ಬೆಂಗಳೂರಿನ ಪೊಲೀಸರು ಕಾರವಾರದ ಎಸ್ಪಿಯೊಂದಿಗೆ ನೂರಾರು ಪೊಲೀಸರನ್ನಿಟ್ಟುಕೊಂಡು ಬಂಧಿಸುವ ಪ್ರಹಸನ ಕೆಕ್ಕಾರ ಮಠದ ಅಂಗಳದಲ್ಲಿ ರಸವತ್ತಾಗಿ ನಡೆಸಿದ್ದರು. ಪೊಲೀಸರು ಬರುವುದು ಗೊತ್ತಾಗಿದ್ದ ರಾಘು ಸ್ವಾಮಿ ಭಟ್ಕಳದ ಶಾಸಕ ಮಂಕಾಳ್ ವೈದ್ಯ ಮತ್ತು ಕುಮಟಾ ಶಾಸಕಿ ಶಾರದಾ ಶೆಟ್ಟಿಯನ್ನು ಮಠದ ಆವರಣಕ್ಕೆ ಕರೆಸಿಕೊಂಡಿದ್ದ. ತನಗೆ ಎಂತೆಂಥ ಅಧಿಕಾರಸ್ಥರ ಬೆಂಗಾವಲಿದೆ ಎಂದು ಸಮಾಜಕ್ಕೆ ಮತ್ತು ಜೈಲಲ್ಲಿ ಕಂಗಾಲಾಗಿ ಕೂತಿರುವ ಕಾಮ ಕಥಾ ಬಲಿಪಶು ಪ್ರೇಮಲತಾ ಮತ್ತವಳ ಕುಟುಂಬಕ್ಕೆ ತೋರಿಸುವ ರಾಘವನ ಹಿಕಮತ್ತು ಇದಾಗಿತ್ತು.


ಹುಂಬ ಶೂದ್ರರನ್ನು ಮುಂದೆ ಬಿಟ್ಟು ಪೊಲೀಸರಿಗೆ ತಡೆಯೊಡ್ಡಿದ್ದ ಮಠದ ಬ್ರಾಹ್ಮಣ ಪರಿವಾರ ಶಾಸಕರೂ ತಮ್ಮ ಮಠಪೀಠದ ದಾಸಾನುದಾಸರೆಂದು ಬಿಂಬಿಸಲು ಯಶಸ್ವಿಯಾದರು. ಭಟ್ಕಳದ ಶಾಸಕ ವೈದ್ಯ ಮತ್ತು ಕುಮಟೆಯ ಶಾಸಕಿ ಶಾರದಾ ಸ್ವಾಮಿಗಳ ಬಂಧಿಸದಂತೆ ಪೊಲೀಸರಿಗೆ ತಾಕೀತು ಮಾಡಿದ್ದಾರೆ. ಇದರಿಂದ ಅಲ್ಲಿ ಸೇರಿದ್ದ ಅಮಾಯಕ ಜನರಿಗೆ ಪ್ರಚೋದಿಸಿದಂತಾಗಿದೆ. ಸಾಕ್ಷಾತ್ ಎಮ್ಮೆಲ್ಲೆಗಳೇ ಸ್ವಾಮಿ ಪರ ನಿಂತಿರುವುದರಿಂದ ರಾಘು ರಂಗೀಲಾ ಗೊತ್ತಿಲ್ಲದ ದೈವ-ಮಠ ಭಕ್ತಿಯ ಮಂದಿ ಪೊಲೀಸರಿಗೆ ಅಡ್ಡ ನಿಂತು ರಾಘು ರಕ್ಷಣೆಗೆ ಪ್ರಯತ್ನಿಸಿದ್ದಾರೆ. ದೋ ನಂಬರ್ ದಂಧೆಗಳ ಇತಿಹಾಸದ ಶಾಸಕ ವೈದ್ಯ ಮತ್ತು ರಾಘು ಸ್ವಾಮಿ ಸಂಟಿನ ಬಗ್ಗೆ ನಾನಾ ನಮೂನೆಯ ಸುದ್ದಿಗಳಿವೆ. ಈ ಮೀನುಗಾರ ಕುಲದ ಶೂದ್ರನ ಟೇಬಲ್ ಮೇಲೆ ಬ್ರಾಹ್ಮಣ ಯತಿಯ ಫೋಟೋ ರಾರಾಜಿಸುವುದು ಅನೇಕ ಅನುಮಾನಕ್ಕೆಡೆಯಾಗಿದೆ.

ದೀವರ ಶಿವಾನಂದ ನಾಯ್ಕನನ್ನು ಹಣಿಯಲು ಬಿಜೆಪಿ ಬ್ರಾಹ್ಮಣರು ರಾಘವ ಸ್ವಾಮಿಯನ್ನು ಉಪಯೋಗಿಸಿದ್ದರು. ಇದು ವೈದ್ಯನಿಗೆ ಎಮ್ಮೆಲ್ಲೆ ಆಗಲು ಹೆಲ್ಪ್ ಮಾಡಿತ್ತು. ಇದಕ್ಕೂ ಹೆಚ್ಚಾದ ಸಂಬಂಧವೊಂದು ರಾಘು-ವೈದ್ಯ ನಡುವಿದೆ ಎಂದು ಇಬ್ಬರ ಇತಿಹಾಸ-ಭೂಗೋಳ ಬಲ್ಲವರು ಹೇಳು[...] ಹಾಗೆಯೇ ಕುಮಟೆಯ ಶಾಸಕಿ ಶಾರದಾ ಶೆಟ್ಟಿಗೆ ಬ್ರಾಹ್ಮಣ ಸಮುದಾ[...] ಒಂದಿಷ್ಟು ಓಟು ಬಂದಿತ್ತು. ಇದಕ್ಕೆ ಕಾರಣ ಶೂದ್ರೆ ಶಾರದಾ ಮೇ[...] ಪ್ರೀತಿ-ಗೌರವವಲ್ಲ. ಬಿಜೆಪಿಯಿಂದ ಹೈಗರಿಗಾಗದ ದೀವರ ಪೋರ ಸು[...] ನಾಯ್ಕ ಸೋನಿ ನಿಂತಿದ್ದ. ಆತನಿಗಿಂತ ಪೆದ್ದಿ ಶಾರದೆಯೇ ಬೆಟರ್ ಎ[...] ಸ್ವಾಮೀಜಿ ಫರ್ಮಾನು ಹೊರಡಿಸಿದ್ದ. ಈ ಋಣ ತೀರಿಸಲು ಶಾರದಾ [...] ಮಠಕ್ಕೆ ಬಂದು ಪೊಲೀಸರನ್ನು ಪ್ರಶ್ನಿಸಿದ್ದರು.

ಕನಿಷ್ಠ ನಾಚಿಕೆ-ಶಾಸಕತ್ವದ ಕರ್ತವ್ಯಪ್ರಜ್ಞೆಯೂ ಇಲ್ಲದ ವೈದ್ಯ ಮ[...] ಶಾರದಾ ಶೆಟ್ಟಿ ಅತ್ಯಾಚಾರ ಆರೋಪಿ ಪರ ಬಹಿರಂಗವಾಗೇ ವಕಾ[...] ವಹಿಸಿದ್ದು ಇವರಿಬ್ಬರೂ ಎಮ್ಮೆಲ್ಲೆಯಾಗಲು ನಾಲಾಯಕ್ ಎಂಬು[...] ಸಾಬೀತುಪಡಿಸಿದೆ. ಅತ್ಯಾಚಾರದ ಬಲಿಪಶು ಅನ್ಯಾಯದ ಮೇಲೆ ಅನ್ಯಾ[...] ಅನುಭವಿಸುತ್ತಿರುವಾಗ ರೇಪಿಸ್ಟ್ ಪರ ತಾವು ನಿಲ್ಲುವುದು ಪಾಪವಾಗುತ್ತದ[...] ಸಣ್ಣ ಯೋಚನೆಯೂ ಈ ಶಾಸಕ-ಶಾಸಕಿ ಬಂದಿಲ್ಲ ಎಂಬುದು ನಾಚಿಕೆಗೇ[...] ಓಟಿಗಾಗಿ ಎಂಥ ಕೀಳು ಮಟ್ಟಕ್ಕಾದರೂ ವೈದ್ಯ-ಶಾರದಾ ಇಳಿಯಬಲ್ಲರೆಂಬು[...] ಅವರ ಕೊಳಕು ನಡವಳಿಕೆಯೇ ಖಾತ್ರಿಪಡಿಸಿದೆ!

ಇದೇರೀತಿ ಶಿಕ್ಷಣ ಮಂತ್ರಿ ಕಿಮ್ಮನೆ ರತ್ನಾಕರ್ ರೇಪಿಸ್ಟ್ ರಾಘು [...] ನಿಂತು ನಗೆಪಾಟಲಿಗೀಡಾಗಿದ್ದಾರೆ. ತೀರ್ಥಹಳ್ಳಿ ಕ್ಷೇತ್ರದ ಬ್ರಾಹ್ಮಣರ ಓಟಿ[...] ಈತ 'ರಾಘು ಸ್ವಾಮಿ ಪರಿಶುದ್ಧ ಯತಿ' ಎಂದು ಸರ್ಟಿಫಿಕೇಟ್ ಕೊಟ್ಟಿದ[...] ಇಷ್ಟಾದರೆ ಅದವರ ಕರ್ಮ ಎಂದು ಸುಮ್ಮನಾಗಬಹುದಿತ್ತು. ಈತ ಪ್ರೇಮ[...] ಮತ್ತವಳ ಫ್ಯಾಮಿಲಿಯೇ ಸರಿ ಇಲ್ಲ ಎಂದು ಹೇಳಿರುವುದು ಅಕ್ಷಮ[...] ಸರಿ. ಅತ್ಯಾಚಾರಕ್ಕೀಡಾದ ಹೆಂಗಸನ್ನು ಮೂದಲಿಸುವುದು ಮಂತ್ರಿಯೊಬ್ಬ[...] ಶೋಭೆಯಲ್ಲ.

ಅತ್ಯಾಚಾರಿ ಸ್ವಾಮಿ ಅಟ್ಟಹಾಸದಿಂದ ಮೆರೆಯುತ್ತಿರುವುದು, ಆ[...] ಕಾಮಪಿಪಾಸೆಗೆ ಬಲಿಯಾದ ಹೆಂಗಸು ಜೈಲಲ್ಲಿ ಚಡಪಡಿಸುತ್ತಿರುವುದು, ಆಕೆ[...] ಕುಟುಂಬದ ಸದಸ್ಯನೊಬ್ಬ ಆಹುತಿಯಾಗಿರುವುದು, ಆ ಇಡೀ ಕುಟು[...] ಜೀವಭಯದಲ್ಲಿ ತತ್ತರಿಸುತ್ತಿರುವುದು ಸಿದ್ದು ಆಡಳಿತಕ್ಕೆ ಅರ್ಥವಾಗುತ್ತಿಲ್ಲ[...] ತಕ್ಷಣವೇ ಸಿದ್ದು ಸರಕಾರ ರಾಘು ಮತ್ತಾತನ ಮಠದ ರೌಡಿಗಳಿಗೆ ಅಂ[...] ಇಡದಿದ್ದರೆ ಇನ್ನಷ್ಟು ಮಾನ-ಪ್ರಾಣಹರಣ ಗ್ಯಾರಂಟಿ!!



ಮೋದಿ ಮೇಲ್

ಮೋದಿ ಜನಸಾಮಾನ್ಯರ ತೀರಾ ಸಣ್ಣ ಸಂಗತಿಯ
ಮೇಲ್ ಪತ್ರ-ದೂರಿಗೆ ತಕ್ಷಣ ಸ್ಪಂದಿಸುವ
ನಾಯಕನೆಂದು ಹಿಂದೂತ್ವವಾದಿಗಳು ಭೋಂಗು
ಬಿಡುವುದು ಸಾಮಾನ್ಯ. ಈತ ಪ್ರಧಾನಿಯಾದರೆ ಧರೆಗೆ
ಸ್ವರ್ಗವೇ ಇಳಿಸುತ್ತಾನೆಂದು ಭ್ರಮೆಯೂ ಬಿತ್ತಲಾಗಿತ್ತು.
ಪ್ರೇಮಲತಾ ಎಂಬ ಅಸಹಾಯಕ ಬ್ರಾಹ್ಮಣರ ಹೆಂಗಸನ್ನು
ಪೀಠ', 'ಮಠ ಶ್ರದ್ಧೆ'ಯನ್ನು ಬಳಸಿಕೊಂಡು ಅದೇ
ಯ ಸ್ವಾಮೀಜಿ ಬರ್ಬರ ರೇಪ್ ಮಾಡಿರುವುದು,
ಬಹಿರಂಗವಾದಾಗ ಆಕೆಯನ್ನೇ ಜೈಲಿಗಟ್ಟಿದ ಪ್ರಕರಣ
ಪಿಎಂ ಸಾಹೇಬರ ತನಕವೂ ತಲುಪಿದೆ. ಆದರೆ
ಗಳ ಕಿತಾಪತಿ ಮೇಲೆಯೇ ನಿಂತಿರುವ ಮೋದಿ
ಇದು ಸಣ್ಣ ಸಂಗತಿ ಎಂಬಂತೆ ಕಂಡಿರಲೂ ಸಾಕು.
ಮೋದಿಗೆ ರಾಮಚಂದ್ರಾಪುರ ಮಠದ ಬೆದೆಸ್ವಾಮಿ
ವನ ಕಾಮಕಾಂಡದ ಬಲಿಪಶು-ಹಾಡುಗಾರ್ತಿ
ಮಲತಾರ ಅಣ್ಣ ಪುತ್ತೂರಿನ ನಿವಾಸಿ ವೆಂಕಟಕೃಷ್ಣ
ಎಂಬವರು ಇಮೇಲ್ ಮೂಲಕ ತನ್ನ ತಂಗಿಗಾದ
ಮಿಯ ಅನ್ಯಾಯ-ಬರ್ಬರ ಅತ್ಯಾಚಾರದ ಕತೆ ವಿವರಿಸಿ
ವಾರ ಕಳೆದಿದೆ. ಆದರೆ ಒಂದೇ ದಿನದಲ್ಲಿ ಸಾಮಾನ್ಯರ
ಮೇಲ್‌ಗೆ ಪ್ರತಿಕ್ರಿಯಿಸುವ ಪ್ರತೀತಿಯ ಪಿಎಂ ಮೋದಿ
ಟಿಸ ತನಕವೂ ಉತ್ತರಿಸಿಲ್ಲ. ಅಷ್ಟೇ ಅಲ್ಲ, ಈ
ರಣದ ಬಗ್ಗೆ ಸರಿಯಾದ ತನಿಖೆ ನಡೆಸಿಯೆಂದು ಸಣ್ಣ
ಸೂಚನೆಯೂ ಸಂಬಂಧಿಸಿದವರಿಗೆ ಕೊಟ್ಟಿಲ್ಲ.
ರಾಮ ರಾಮಾ... ಕಪಟ ಸನ್ಯಾಸಿ ರಾಘವನ ಕೀಚಕ
ಕೃತಕ್ಕೆ ಕಡಿವಾಣ ಹಾಕೋರ್‍ಯಾರು? ರಾಮಚಂದ್ರಾಪುರ
ದ ನಿಷ್ಠಾವಂತರ ಹಾರಾಟ ಕಂಡರೆ ಅಸಹಾಯಕ
ಮಲತಾರ ಭವಿಷ್ಯದ ಬಗ್ಗೆ ಆತಂಕ ಯಾರಿಗಾದರೂ
ತ್ತದೆ! ಆಕೆಗೆ ಸೂಕ್ತ ರಕ್ಷಣೆ ಸಮಾಜವಾದಿ ಸಿಎಂ
ಆದರೂ ಕೊಡಿಸುವರಾ?

ಷ್ಠಿತ' ಬ್ರಾಹ್ಮಣರ ಮಠಾಧೀಶನ ಮಠಕ್ಕೆ ಬ್ಲಾಕ್‌ಮೇಲ್
ಸುದ್ದಿ ಸುದ್ದಿಮಾಧ್ಯಮಕ್ಕೆ ಬಿಡುಗಡೆ ಮಾಡಲಿಲ್ಲ?!
ಒಂದೇ ಸಾಕಲ್ಲವಾ, ಪ್ರೇಮಲತಾರನ್ನು ವ್ಯವಸ್ಥಿತವಾಗಿ
ಡಿವ ವಾಮಮಾರ್ಗದಲ್ಲಿ ಸ್ವಾಮಿ ವೇಷದ ಕಟುಕ
ಪತಿ ಮಾಡಿದ್ದಾನೆಂಬುದಕ್ಕೆ?
ಹಾಗೆಯೇ ಬೆಂಗಳೂರಿನ ಎಸಿಪಿ ಸುರೇಶ್ ಬಾಬು
ತ್ತು ಉತ್ತರ ಕನ್ನಡ ಎಸ್ಪಿ ದಿಲೀಪ್ ಕೈಗೆ ಸಿಕ್ಕಿದ
ರೋಪಿಯನ್ನು ಗೌರವಾನ್ವಿತವಾಗಿ ಬಿಟ್ಟು ಬಂದಿದ್ದು
ಲೀಸರ ಪಾತಕವೇ ಸರಿ! ಆರೋಪಿಯೊಬ್ಬ ಚಾತುರ್ಮಾಸ್ಯ
ದಲ್ಲಿದ್ದಾನೆಂದು ಬಿಟ್ಟು ಬರುವುದಾದರೆ ನಾಳೆ ಮತ್ತೊಬ್ಬ
ಸತ್ಯನಾರಾಯಣ ಕತೆಯೋ ಚೌಡಿ ಪೂಜೆಯೋ
ಪ್ಯವುದೋ ಧಾರ್ಮಿಕ ಕೈಂಕರ್ಯದಲ್ಲಿರುತ್ತಾನೆಂದು ಬಿಟ್ಟು
ತ್ತಾರಾ? ಕಾನೂನು-ಸುವ್ಯವಸ್ಥೆಯ ನೆಪದಿಂದ ಕಳ್ಳನನ್ನು
ಧಿಸದೇ ಬಿಟ್ಟು ಬರುವುದಿದೆಯಲ್ಲ ಅದು, ಅಕ್ಷಮ್ಯ
ರಾಧವಷ್ಟೇ ಅಲ್ಲ, ಖಾಕಿ ಸಮವಸ್ತ್ರಕ್ಕೆ ಮಾಡುವ
ಮಾನ! ಕಾನೂನು-ಸುವ್ಯವಸ್ಥೆಯು ಏರ್ಪಾಡು
ಡಿಕೊಂಡೇ ಬಲಾಢ್ಯ ಆರೋಪಿಯನ್ನು ಬಂಧಿಸುವುದು
ಲೀಸರು-ಆಳುವ ಸರ್ಕಾರದ ಕರ್ತವ್ಯ. ವೀರಪ್ಪನ್ ವರನಟ
ಕುಮಾರ್‌ರನ್ನು ಅಪಹರಿಸಿದಾಗ ಕಾನೂನು
ವ್ಯವಸ್ಥೆಯು ಕಾರಣಕ್ಕೆ ಪಾತಕಿ ವೀರಪ್ಪನ್‌ಗೆ
ಶರಿಸಬೇಕಾಗಿದೆ ಎಂದು ಅಂದಿನ ಎಸ್ಸೆಂ ಕೃಷ್ಣ ಸರ್ಕಾರ
ದಾಗ ಸುಪ್ರೀಂಕೋರ್ಟ್ ಛೀಮಾರಿ ಹಾಕಿತ್ತು.
ಒಟ್ಟಿನಲ್ಲಿ ಅತ್ಯಾಚಾರ ಆರೋಪಿ ರಾಘು ಸ್ವಾಮಿಗೆ
ಕ್ಷಣಾ ಜಾಮೀನು ತರಲು ಅಥವಾ ಪ್ರೇಮಲತಾರ
ಗು ಕೊಟ್ಟ ಅತ್ಯಾಚಾರ ದೂರು ರದ್ದು ಪಡಿಸುವಂತೆ
ನ್ಯಾಯಕ್ಕೆ ಹೋಗಲು ಕಾಲಾವಕಾಶ ಕೊಡಲು
ಲೀಸರು ಮತ್ತು ಮಠದ ಥೈಲಿ ಡಾನ್‌ಗಳು ಸೇರಿ
ದ ಷಡ್ಯಂತ್ರವಿದು. ಬೆಳಗ್ಗೆ ಅರೆಸ್ಟಾದರೆ ಸಂಜೆ ವೇಳೆಗೆ
ಬೇಲು ಸಿಗಬಹುದಾದ ಕೇಸ್‌ನಲ್ಲಿ ಪ್ರೇಮಲತಾ-
ವರ್ ಮೂರು ವಾರದಿಂದ ಜೈಲಲ್ಲಿ ಕೊಳೆಯುತ್ತಿದ್ದಾರೆ.
ಜಾಮೀನೇ ಸಿಗದ ಪ್ರಕರಣದಲ್ಲಿ ಬ್ರಾಹ್ಮಣರ ಸ್ವಾಮಿ
ಸಿದ್ದರೂ ಆತ ಕಾನೂನಿನ ತೂತುಗಳಲ್ಲಿ ತೂರುತ್ತ
ಗಣಿಯಲ್ಲಿ ನಿಂತು ಸಾಚಾತನದ ಪ್ರವಚನ
ನೀಡುತ್ತಿದ್ದಾನೆ. ಹಾಗಿದ್ದರೆ ಈ ನೆಲದ ಕಾನೂನಿಗೆ
ಬೆಲೆಯಿದೆಯೇ ಇಲ್ಲವಾ? ಪ್ರಭಾವಿ ಕಾವಿಗಳಿಗೊಂದು
ನ್ಯಾಯ, ಅತ್ಯಾಚಾರಕ್ಕೆ ಒಳಗಾದ ಅಸಹಾಯಕ ಹೆಂಗಸಿಗೆ
ನ್ಯಾಯ, ಶಿಕ್ಷಿಸ ಐಪಿಸಿ ಭಾರತದಲ್ಲಿದೆಯಾ?!




ಉತ್ತರಿಸಬೇಕಾಗಿರುವುದು ಸಿಎಂ ಸಿದ್ದು ಸಾಹೇಬರೊಬ್ಬರೇ...

ಪ್ರೇಮಲತಾ ಏಕೆ ಹೊರಬರುತ್ತಿಲ್ಲ?

ಪ್ರೇಮಲತಾ ದಂಪತಿಗಳ ಮೇಲಿರುವ ಬ್ಲಾಕ್‌ಮೇಲ್ ಕೇಸ್ ಇದೆಯಲ್ಲ ಅದು ಬೇಲೇಬಲ್! ಆದರೂ ಆಕೆ ಯಾಕೆ ವಾರಗಟ್ಟಲೆ ಜೈಲಲ್ಲೇ ಕಣ್ಣೀರು ಸುರಿಸುತ್ತ ದಿನ ಕಳೆಯುವಂತಾಗಿದೆ? ಒಂದು ಮೂಲದ ಪ್ರಕಾರ ಆಕೆಯ ವಕೀಲರೇ ಜಾಮೀನಿಗೆ ಹಠಕ್ಕೆ ಬಿದ್ದು ಪ್ರಯತ್ನಿಸುತ್ತಿಲ್ಲ. ಏಕೆಂದರೆ, ಆಕೆ ಹೊರಬಂದರೆ ಜೀವಕ್ಕೆ ಅಪಾಯವಾಗುವ ಸಾಧ್ಯತೆಯಿದೆ. ಇನ್ನೊಂದು ಮೂಲದ ಪ್ರಕಾರ ಆಕೆಯ ಹೊನ್ನಾವರದ ವಕೀಲ ಮಠದ ಮಾಫಿಯಾದ ಜತೆ ಚಕ್ಕಂದವಾಡುತ್ತಿದ್ದಾರಂತೆ. ಬೇರೆ ವಕೀಲರ ತರಲು ಪ್ರೇಮಲತಾಗೆ ಸಹಾಯ ಮಾಡೋರೇ ಇಲ್ಲದಂತಾಗಿದೆ. ಆಕೆಯ ಅಣ್ಣ ವೆಂಕಟಕೃಷ್ಣ ಪುತ್ತೂರಲ್ಲಿ ಕುಳಿತು ತನ್ನಿಂದಾಗುವ ಪ್ರಯತ್ನ ಮಾಡುತ್ತಿದ್ದಾರೆ. ಶ್ಯಾಮಶಾಸ್ತ್ರಿ ಮಠದ ಗೂಂಡಾಪಡೆಯ ಬೆದರಿಕೆಗೆ ಹೆದರಿ ಆತ್ಮಹತ್ಯೆ ಮಾಡಿಕೊಂಡ ಕಾರಣವೆಂದು ಹೇಳಿದ್ದಾರೆ. ಪುತ್ತೂರಿನ ಪೊಲೀಸರು ಶ್ಯಾಮಶಾಸ್ತ್ರಿ ಆತ್ಮಹತ್ಯೆಯಲ್ಲಿ ಮಠದ ಕೈವಾಡದ ಬಗ್ಗೆ ತಲೆಯೇ ಕೆಡಿಸಿಕೊಂಡಿಲ್ಲ. ಮಠದ ಕಡೆಯವರು ತನ್ನ ಪತಿಗೆ ಬೆದರಿಸುವ ಫೋನ್ ಕಾಲ್ ಮಾಡುತ್ತಿದ್ದರೆಂದು ಶಿಕ್ಷಕಿ ಸಂಧ್ಯಾಲಕ್ಷ್ಮೀ ದೂರಿನಲ್ಲಿ ಹೇಳಿದ್ದಾರೆ. ಈ ದೂರಿನ ಸುತ್ತಲೇ ಸಣ್ಣ ತನಿಖೆ ಪೊಲೀಸರು ನಡೆಸಿದರೂ ಸಾಕು, ರಾಘವನ ಕಾವಿಯಲ್ಲಡಗಿರುವ ರಕ್ತದ ಕಲೆ ಗುರುತಿಸಬಹುದು. ಆದರೆ ಪೊಲೀಸರ್‍ಯಾಕೋ ಶ್ಯಾಮಶಾಸ್ತ್ರಿಯ ಡೈರಿ, ಡೆತ್‌ನೋಟ್ ಇದ್ದರೂ ಕೈಕಟ್ಟಿ ಹಾಕಿದಂತೆ ವರ್ತಿಸುತ್ತಿದ್ದಾರೆ.

ಮಾಧ್ಯಮ ನಿಭಾವಣೆ

ಮಾಡಬಾರದ್ದು ಮಾಡಿ ಸಿಕ್ಕಿಬಿದ್ದಿರುವ ಹೋರಿ ಸ್ವಾಮಿ ರಾಘವನಿಗೆ ಆಗುತ್ತಿರುವ ಧಾರ್ಮಿಕ ಡ್ಯಾಮೇಜ್ ಕಂಟ್ರೋಲ್‌ಗೆ ಮಠದ ಮಾಫಿಯಾ ಬರೋಬ್ಬರಿ ಹತ್ತು ಕೋಟಿ ಹುಂಡಿ ತೆಗೆದಿರಿಸಿದೆ ಎಂಬ ಗುಲ್ಲು ತುಂಬ




ಶ್ಯಾಮ್‌ಶಾಸ್ತ್ರಿ



ದಿವಾಕರ್



ಪ್ರೇಮಲತಾ



ಎಸ್ಪಿ ದಿಲೀಪ್

ನಂತರವಂತೂ ಪ್ರೇಮಲತಾರ ಬಂಧು-ಬಳಗ ನ್ಯಾಯ ಸಿಗುವ ಭರವಸೆಯನ್ನೇ ಕಳೆದುಕೊಂಡುಬಿಟ್ಟಿದೆ. ಅತ್ಯಾಚಾರದಂಥ ಗುರುತರ ಆರೋಪ ಹೊತ್ತಿರುವ ಸ್ವಾಮಿಯೊಬ್ಬನಿಗೆ ಸುಬಗನಂತೆ ಓಡಾಡಲು ಬಿಡುವ ಪೊಲೀಸ್ ವ್ಯವಸ್ಥೆ ಅತ್ಯಾಚಾರಕ್ಕೊಳಗಾದ ಹೆಂಗಸಿಗೆ ಅನ್ಯಾಯದ ಮೇಲೆ ಅನ್ಯಾಯವೇ ಮಾಡುತ್ತಿದೆ.

ವೆಂಕಟಕೃಷ್ಣ ತನ್ನ ತಂಗಿ ಮೇಲೆ ಹೋರಿ ಸ್ವಾಮಿ ಮಾಡಿರುವ ಅತ್ಯಾಚಾರ, ಪೊಲೀಸ್ ವ್ಯವಸ್ಥೆಯಿಂದ ಆಗುತ್ತಿರುವ ಅನ್ಯಾಯದ ಬಗ್ಗೆ ಪ್ರಧಾನಿ, ರಾಷ್ಟ್ರಪತಿ, ಲೋಕಸಭೆ ಸ್ಪೀಕರ್, ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ, ಮಾನವ ಹಕ್ಕು ಆಯೋಗ, ಮಹಿಳಾ ಹಕ್ಕು ಆಯೋಗಕ್ಕೆಲ್ಲ ದೂರು ಕೊಟ್ಟಿದ್ದಾರೆ. ಇದರಲ್ಲಿ ಮಾನವ ಹಕ್ಕು ಆಯೋಗ ಸ್ಪಂದಿಸಿದೆ. ಬೆಂಗಳೂರು ಪೊಲೀಸರಿಗೆ ಈ ಸ್ವಾಮಿ ಕೇಸ್‌ನ ಮರ್ಮದ ವಿವರ ಕೇಳಿದೆ. ಹೀಗಾಗಿ ಎಚ್ಚೆತ್ತ ಬೆಂಗಳೂರು ಗಿರಿನಗರ ಪೊಲೀಸರು ಈಗ ರಾಘು ಸ್ವಾಮಿ ಮೇಲೆ ಅತ್ಯಾಚಾರ ಕೇಸ್ (ಐಪಿಸಿ 376) ದಾಖಲಿಸಿದ್ದಾರೆ.

ಇಷ್ಟು ದಿನ ರಾಘು ಮೇಲೆ ಲೈಂಗಿಕ ಕಿರುಕುಳ (ಐಪಿಸಿ354 (A)) ಪ್ರಕರಣವಷ್ಟೇ ಇತ್ತು. ಇದೇ ವೇಳೆಗೆ ರಾಘು ಲೈಂಗಿಕ ಕಿರುಕುಳ ಕೇಸ್‌ನಲ್ಲಿ ತನ್ನನ್ನು 19-9-14ರವರೆಗೆ ಬಂಧಿಸದಂತೆ ಹೈಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾನೆ. ಈ ಸಾಹಸಕ್ಕಾಗೇ ಆತನನ್ನು ಬಂಧಿಸಲು ಕೆಕ್ಕಾರು ಮಠಕ್ಕೆ ಬಂದಿದ್ದ ಪೊಲೀಸರಿಗೆ 10-9-14ರಂದು ವಿಚಾರಣೆಗೆ ಹಾಜರಾಗುತ್ತೇನೆಂದು ಸುಳ್ಳು ಹೇಳಿ ಸಾಗಹಾಕಿದ್ದಾನೆ. ಕಾನೂನಿನ ದುರ್ಲಾಭ ಪಡೆಯಲು ಪುಣ್ಯಕೋಟಿಯಂತೆ ಈ ಪಾಪ ಕೋಟಿ ತೋರಿಸಿಕೊಳ್ಳುತ್ತಿರುವುದು ಆತ ಕಾನೂನಿನ 'ಆಟ' ಆಡುತ್ತಿರುವುದೇ ಸಾಬೀತು ಪಡಿಸಿದೆ!

ಅತ್ತ ಪುತ್ತೂರಲ್ಲಿ ಮಠದ ರೌಡಿಗಳಿಗೆ ಬಲಿಯಾದ ಶ್ಯಾಮಶಾಸ್ತ್ರಿ ಕೇಸ್ ಹಳ್ಳ ಹಿಡಿಯುತ್ತಿದೆ. ಶ್ಯಾಮ್ ಪತ್ನಿ ಸಂಧ್ಯಾಲಕ್ಷ್ಮೀ ಮಠದ ಮೇಲೆಯೇ ನೇರಾನೇರ ಆರೋಪ ಮಾಡಿ ಕಂಪ್ಲೇಂಟು ಕೊಟ್ಟಿದ್ದಾರೆ. ತನ್ನ ಪತಿಯ ಸಾವಿಗೆ ರಾಮಚಂದ್ರಾಪುರ ಮಠದ ಕಡೆಯವರ ಭಯೋತ್ಪಾದನೆಯೇ ರಭಸವಾಗಿ ಹಬ್ಬಿದೆ. ಸುಪ್ರೀಂಕೋರ್ಟ್ ಮಟ್ಟದ ವಕೀಲರು, ಕಾನೂನುತಜ್ಞರ ಸಲಹೆ ಪಡೆಯುತ್ತಿರುವ ರಾಘವನ ಪಟಾಲಂ ಸುದ್ದಿ ಮಾಧ್ಯಮಗಳನ್ನೂ ತುಂಬ ನಾಜೂಕಾಗಿ ನಿಭಾಯಿಸುತ್ತಿದೆ. ಪೊಲೀಸರಿಗಂತೂ ಹಣದ ಪಿಂಡಿಯೇ ದಿನಕ್ಕೊಂದರಂತೆ ಕೊಡಲಾಗುತ್ತಿದೆಯೆಂದು ಮಠದ ಗಿಂಡಿ ಮಾಣಿಗಳು, ಕಷಾಯಧಾರಿಗಳು ಪಿಸುಗುಡುತ್ತಿದ್ದಾರೆ.


ರಾಘವ ಗೋಕರ್ಣ ದೇವಸ್ಥಾನವನ್ನು ತನ್ನ ಜೋಳಿಗೆಗೆ ಅನಾಮತ್ತಾಗಿ ಎತ್ತಿ ಹಾಕಿಕೊಂಡಾಗ ಎದ್ದ ರಂಪ-ರಾದ್ಧಾಂತದ ಜತೆ ಪ್ರೇಮಲತಾ ಅತ್ಯಾಚಾರ ಕೇಸನ್ನು ಸೇರಿಸಿ ಜನರನ್ನು ದಾರಿ ತಪ್ಪಿಸಲು ರಾಘವನ ಬಳಗ ಕಸರತ್ತು ಮಾಡುತ್ತಿದೆ. ಹಿಂದೆ ರಾಘವನ ಬಗ್ಗೆ ಬಂದ ನಕಲಿ ಸಿಡಿ ಪುರಾಣವಾಗಲಿ, ಆತನ ಮಠಕ್ಕೆ ಬೆಂಗಳೂರಿನ ವಕೀಲರಿಬ್ಬರು ಮಾಡಿದ ಬ್ಲ್ಯಾಕ್‌ಮೇಲಾಗಲಿ, ಗೋಕರ್ಣದ ವೈದಿಕರ ಒಂದು ಗ್ಯಾಂಗ್ ರಾಘವನ ವಿರುದ್ಧ ತಿರುಗಿ ಬಿದ್ದು ಕಾನೂನು ಹೋರಾಟ ಮಾಡುತ್ತಿರುವುದಾಗಲೀ ಅಥವಾ ಆತನ ಇತರೆ ರಸಿಕ ರಗಳೆಗಳ ಉಪಕತೆಗಳಿಗಾಗಲಿ ಪ್ರೇಮಲತಾ ಅತ್ಯಾಚಾರ ಪ್ರಕರಣದೊಂದಿಗೆ ಥಳುಕು ಹಾಕಿಕೊಂಡಿಲ್ಲ. ಪ್ರೇಮಲತಾಗೂ ರಾಘವನ ವಿರೋಧಿಗಳಿಗೂ ಯಾವ ನಂಟೂ ಇಲ್ಲ. ಇದು ಪುತ್ತೂರಿನ ಚಕ್ರರೋಡಿ ಫ್ಯಾಮಿಲಿ ಮತ್ತು ರಾಘವನ ನಡುವಿನ ಲೈಂಗಿಕ-ಆರ್ಥಿಕ ವ್ಯವಹಾರದ ತಗರಣವಷ್ಟೇ!

ಎಷ್ಟು ಯೋಜನಾಬದ್ಧವಾಗಿ ರಾಘವನ ಹಿಂದಿರುವ ಘನ ವಿದ್ವಾಂಸರು-ಪತ್ರಕರ್ತರು-ರಾಜಕಾರಣಿಗಳು-ಮಾಜಿ, ಹಾಲಿ ಸರ್ಕಾರಿ ಅಧಿಕಾರಿಗಳು ಮತ್ತು ದೋ ನಂಬರ್ ಬಿಸ್ನೆಸ್‌ಮನ್‌ಗಳು ಪ್ರೇಮಲತಾ ಪ್ರಕರಣ ಮುಚ್ಚಿಹಾಕಲು ಹವಣಿಸುತ್ತಿದ್ದಾರೆಂದರೆ, ಆಕೆಗೆ ಆದ ಶೋಷಣೆ, ಅನ್ಯಾಯದ ಬಗ್ಗೆ ಪತ್ರಿಕೆ-ಟಿವಿಯವರೂ ಸಣ್ಣ ಸುದ್ದಿಯೂ ಪ್ರಕಟಿಸದಂತೆ-ಪ್ರಸಾರ ಮಾಡದಂತೆ ನೋಡಿಕೊಳ್ಳುತ್ತಿದ್ದಾರೆ. ಆಕೆ ಪತ್ರಕರ್ತರ ಮುಂದೆ ತನಗಾದ ನೋವು-ದಾಳಿ-ಲೈಂಗಿಕ ದೌರ್ಜನ್ಯ-ಅತ್ಯಾಚಾರ ಬಿಂಬಿಸದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ರಾಘು ಗ್ಯಾಂಗ್ ತರಲು ಯಶಸ್ವಿಯಾಗಿದೆ.

ರಾಘವನ ರಂಗೀಲಾ ರಗಳೆ ಊರು ತುಂಬ ಹರಡದಂತೆ ಮಠ ಮಾಫಿಯಾ ಸರ್ಕಸ್ ಮಾಡಿದಂತೆಲ್ಲ ಅದು ಉಲ್ಟಾ ಹೊಡೆಯುತ್ತಿದೆ. ಪ್ರೇಮಲತಾರ ಗುಣ-ನಡತೆಯೇ ಸರಿ ಇಲ್ಲ; ಶಾಸ್ತ್ರಿ ಫ್ಯಾಮಿಲಿಯ ಚರಿತ್ರೆಯೇ ಕೊಳಕೆಂದು ಮಠದವರು ಎಷ್ಟೇ ಹೇಳಿದರೂ ಜನರೀಗ ರಾಘವ ಪರಿಶುದ್ಧ ಸಂತನೆಂದು ನಂಬುವ ಸ್ಥಿತಿಯಲ್ಲಿಲ್ಲ. ಇಲ್ಲಿರುವ ಪ್ರಶ್ನೆ ಒಂದೇ. ಸನ್ಯಾಸ ಧರ್ಮ ಪಾಲಿಸುವೆನೆಂದು ಮಠದ ಪೀಠವೇರಿದ ಕಾವಿ ಜೀವಿಯೊಬ್ಬ ಹೆಂಗಸೊಬ್ಬಳ ಆಸೆಗೆ ಬಿದ್ದು ವಿಕೃತವಾಗಿ ವಂಚಿಸಿದ್ದಾನೆಂಬುದೇ ಅಕ್ಷಮ್ಯ ಅಪರಾಧ. ಯತಿಯೊಬ್ಬನ ಮೇಲೆ ಬರಲೇಬಾರದಂಥ ಗಲೀಜು ಆರೋಪವಿದು. ಪ್ರೇಮಲತಾಗೆ ಈ ಬೆದೆಗಾರ ಸ್ವಾಮಿ ಅತ್ಯಾಚಾರದ ಮೊದಲು ಕೊಡುತ್ತಿದ್ದ 'ರಾಮನ ಪ್ರಸಾದ'ದಲ್ಲಿ ಏನಿರುತ್ತಿತ್ತು, ಅದನ್ನು ತಿಂದಾಗ ಆಕೆಗ್ಯಾಗೆ ಮಂಕು ಕವಿಯುತ್ತಿತ್ತು?

ಇಂಥ ನಿಗೂಢ 'ಆಟ'ಗಳೇ ರಾಘವ ಕಾವಿ ಧರಿಸಿಯೇ ಕಾಮಕಥಾ ಹೇಳಿದ್ದನೆಂಬುದನ್ನು ಸಾರಿ-ಸಾರಿ ಹೇಳುತ್ತವೆ. ಈತನನ್ನು ನಿಷ್ಠೂರ ತನಿಖೆಗೆ ಒಳಪಡಿಸುವ ತಾಕತ್ತು ಸಿದ್ದು ಸರ್ಕಾರಕ್ಕೆ ಇದೆಯಾ? ಧಾರ್ಮಿಕ ದಾದಾಗಿರಿಗೆ ಹೆಣ್ಣೊಬ್ಬಳು ಅನ್ಯಾಯವಾಗಿ ಬಲಿಯಾಗದಂತೆ ತಡೆಯುವ ನೈತಿಕ ಕರ್ತವ್ಯ ಗೃಹಮಂತ್ರಿ ಜಾರ್ಜ್‌ರದಲ್ಲವಾ? ಮಠದೊಳಗಣ ಬೆಕ್ಕು ಪುಟ ನೆಗೆದದ್ದು ಕಂಡೂ ಸರ್ಕಾರ ಸುಮ್ಮನಿರುವುದು ನ್ಯಾಯವಾ?!

■ ಶುದ್ಧೋಧನ



ಒಂದು ಮನವಿ

ಡಾ. ಯು.ಆರ್.ಅನಂತಮೂರ್ತಿಯವರು ನಮ್ಮನ್ನಗಲಿದ್ದಾರೆ. ಅವರ ಚಿಂತನೆ, ಸಾಹಿತ್ಯ, ಹೋರಾಟಗಳ ಬಗ್ಗೆ ಹಲವರು ಬರೆದಿದ್ದಾರೆ.


ಆದರೆ ಅವರು ಸಾಹಿತ್ಯೇತರವಾಗಿ ಸಾಮುದಾಯಿಕ ವಿಷಯಗಳ ಬಗ್ಗೆ, ಸ್ಥಳೀಯ ಹೋರಾಟಗಳ ಬಗ್ಗೆ ಸಹಾಯ ಮಾಡಿದ ವಿವರಗಳು ಬಹುತೇಕರಿಗೆ ಗೊತ್ತಿಲ್ಲ.


ಈ ದೃಷ್ಟಿಯಿಂದ, ಅನಂತಮೂರ್ತಿಯವರು ಕೈಜೋಡಿಸಿದ ದಾಖಲೆಗಳು ಯಾರಲ್ಲಾದರೂ ಇದ್ದರೆ ಅದನ್ನು ಒಟ್ಟುಗೂಡಿಸಿ ಪ್ರಕಟಿಸುವುದು ಉಚಿತ. ಅವರ ಸಾಮಾಜಿಕ ಕಾಳಜಿಯ ಈ ಆಯಾಮವನ್ನು ಪ್ರಕಟಿಸುವ ಜವಾಬ್ದಾರಿಯಿಂದ ಈ ಮನವಿ.


ಆದ್ದರಿಂದ ಈ ರೀತಿಯ ಅನಂತಮೂರ್ತಿಯವರ ಪತ್ರ ಇನ್ನಿತರೇ ದಾಖಲೆಗಳಿದ್ದರೆ, ಅದರ ಫೋಟೋ ಪ್ರತಿ ಸಹಿತ ಪುಟ್ಟ ಟಿಪ್ಪಣಿಯೊಂದನ್ನು ಈ ಕೆಳಕಂಡ ವಿಳಾಸಕ್ಕೆ ಕಳಿಸಿಕೊಟ್ಟರೆ/ಮೈಲ್ ಮಾಡಿದರೆ ಅನುಕೂಲವಾಗುತ್ತದೆ.



ವಿಳಾಸ: ಕೆ.ಪಿ.ಸುರೇಶ, ನಂ 22, 1ನೇ ಕ್ರಾಸ್,
ಅಂಜನಾದ್ರಿ ಲೇಔಟ್, ಕೋಣನಕುಂಟೆ, ಬೆಂಗಳೂರು-62
ಫೋನ್: 09538226543
ಇಮೇಲ್: kpsuresha@gmail.com

ಮುರುಘಾ ಶರಣರ ವೈಚಾರಿಕ ಅಧಃಪತನ!







ವೈಚಾರಿಕತೆ ಅಧೀರತೆಗೆ ತುತ್ತಾದರೆ ಚಿಂತನೆ, ತತ್ವ, ಸಿದ್ಧಾಂತಗಳೆಲ್ಲ ಅದ್ವೇಗೆ ನೆಲಕಚ್ಚುತ್ತವೆ ಎನ್ನುವುದಕ್ಕೆ ಚಿತ್ರದುರ್ಗದ ಮುರುಘಾ ಮಠ ತಾಜಾ ನಿದರ್ಶನವಾಗುವ ಎಲ್ಲಾ ಸಾಧ್ಯತೆಗಳೂ ಢಾಳಾಗಿ ಕಾಣಿಸುತ್ತಿವೆ. ಒಂದು ಕಾಲಕ್ಕೆ ಶರಣ ಪರಂಪರೆಯ ನೈಜ ಉದ್ದೇಶಗಳನ್ನು ಸಮಾಜದಲ್ಲಿ ಬಿತ್ತಿ ಮೂಢನಂಬಿಕೆ, ಜಾತೀವಾದದಂತಹ ಕಳೆ ತೆಗೆಯುವ ಕೃಷಿಗೆ ಕೈಯಿಟ್ಟಿದ್ದ ಮುರುಘಾ ಶರಣರೇ ಇವತ್ತು ಮಠದ ಆವರಣದ ತುಂಬೆಲ್ಲಾ ಅದೇ ಕಳೆಯನ್ನು ಪೋಷಿಸಲು ಟೊಂಕಕಟ್ಟಿ ನಿಂತಿರೋದು ವೈಚಾರಿಕ ಜಗತ್ತಿನ ಬಹುದೊಡ್ಡ ದುರಂತವೇ ಸರಿ.

ಮಠದ ಆವರಣದಲ್ಲಿ 90 ಅಡಿ ಪೀಠದ ಮೇಲೆ ಏಳು ಅಂತಸ್ತು ಎತ್ತರದ ಬೃಹತ್ ಬಸವಣ್ಣನ ವಿಗ್ರಹ ನಿಲ್ಲಿಸುವ ಮುರುಘಾ ಶರಣರ ಹುಚ್ಚು ಸಾಹಸ ಹೊಸದೇನೂ ಅಲ್ಲ. ಬಿಜೆಪಿಯ ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗಲೇ ಶರಣರು ಈ ಯೋಜನೆಯನ್ನು ಪ್ರಕಟಿಸಿ ಯಡ್ಡಿಯಿಂದ ಐದು ಕೋಟಿ ಆರಂಭಿಕ ಅನುದಾನವನ್ನೂ ಮಂಜೂರು ಮಾಡಿಸಿಕೊಂಡಿದ್ದರು. ಯಡ್ಡಿ ಕೈಯಿಂದಲೇ ಭೂಮಿ ಪೂಜೆಯನ್ನೂ ನೆರವೇರಿಸಿದ್ದರು. ಪ್ರಪಂಚದಲ್ಲೇ ಮೂರನೇ ಅತಿದೊಡ್ಡ ಸ್ಟ್ಯಾಚು ಆದಾಗಲಿದೆ ಅಂತ ಶರಣರು ಬೀಗುತ್ತಿರುವ ವೇಳೆಯಲ್ಲೇ 'ಸ್ಥಾವರಕ್ಕೆ ಅಳಿವುಂಟು ಜಂಗಮಕ್ಕೆ ಅಳಿವಿಲ್ಲ' ಎಂಬ ಬಸವಣ್ಣನ ಬೋಧನೆ ಆ ಸ್ಟ್ಯಾಚೂ ಕೆಳಗೆ ಹೂತು ಹೋಗುತ್ತಿರುವುದನ್ನು ಕಂಡು ನಾಡಿನ ಪ್ರಜ್ಞಾವಂತ ಪೀಳಿಗೆ ಮಮ್ಮುಲ ಮರುಗಿದ್ದೂ ಸುಳ್ಳಲ್ಲ. ಅದೆಷ್ಟೋ ವೇದಿಕೆಯಲ್ಲಿ ಇದೇ ಶಿವಮೂರ್ತಿ ಶರಣರು ಬಸವಣ್ಣನ ಈ ತತ್ವವನ್ನು ಒತ್ತಿ ಹೇಳಿದ್ದರು, ಅಷ್ಟೇಏಕೆ ತಾವು ಪೀಠಾಧ್ಯಕ್ಷರಾಗಿ ಆಯ್ಕೆಯಾದ ಮೊದಮೊದಲು ಮಠದ ಆವರಣದಲ್ಲಿದ್ದ ದೇವರ ಮೂರ್ತಿಗಳನ್ನೆಲ್ಲಾ 'ಸ್ಥಾವರದ ಪ್ರತೀಕ'ಗಳೆಂದು ಜರಿದು ತೆರವುಗೊಳಿಸಿದ್ದರು. ಆ ಮೂಲಕ ಶರಣ ಪರಂಪರೆಯ ಕ್ರಾಂತಿಕಾರಕ ಹಾದಿಗೆ ಮರುಜೀವ ನೀಡುವ ಭರವಸೆ ಮೂಡಿಸಿದ್ದರು. ಆದರೆ ಈಗ ಇದ್ದಕ್ಕಿದ್ದಂತೆ ಬಸವನನ್ನೇ ಸ್ಥಾವರವಾಗಿಸಲು ಶರಣರು ಹೊರಟಿರೋದು ಅವರಲ್ಲಿನ ವೈಚಾರಿಕ ಅಧೋಗತಿಯನ್ನು ತೋರಿಸಿದಂತಿದೆ.

ಸಮಾಜದ ಸ್ವಾಸ್ಥ ಕಾಪಾಡುವ ಮಠಗಳು ಇರಬೇಕಾದ್ದು ಹೀಗೆ ಎನ್ನುವಷ್ಟರ ಮಟ್ಟಿಗೆ ಮಠವನ್ನು ವೈಚಾರಿಕಗೊಳಿಸಿದ್ದ ಶಿವಮೂರ್ತಿ ಶರಣರು ಇದ್ದಕ್ಕಿದ್ದಂತೆ ಹೀಗೇಕೆ ಬದಲಾಗಿ ಹೋದರು ಎಂಬ ಅಚ್ಚರಿಗೆ ಈಗ ಉತ್ತರ ಸಿಗುತ್ತಿದೆ. ಶರಣತತ್ವದ ಮರೆಯಲ್ಲಿ ಅಡಗಿದ್ದ ಜಾತೀವಾದ ಮತ್ತು ಕೋಮುಘಾದದ ಎಂಬ ಕೂಸುಗಳು ಇಂತಹ ಅವಾಂತರದ ಹಿಂದಿರುವ ಮೂಲಕಾರಣ. ಮಠದ ವೈಚಾರಿಕ ಅಧಃಪತನವನ್ನು ಅರ್ಥಮಾಡಿಕೊಳ್ಳಬೇಕೆಂದರೆ ಇಡೀ ವೃತ್ತಾಂತದ ಎಳೆಯನ್ನು ಸೂಕ್ಷ್ಮವಾಗಿ ಬಿಡಿಸಿ ನೋಡಬೇಕಾಗುತ್ತದೆ. ಅದು ಆರಂಭವಾಗೋದೆ ಶಿವಮೂರ್ತಿ ಸ್ವಾಮಿಗಳ ಪೀಠಾರೋಹಣದಿಂದ.

ಸರ್ವ ಜಾತಿಗಳ ಮಠ

ಶರಣ ಪರಂಪರೆಯನ್ನು ಅಕ್ಷರಶಃ ಪಾಲಿಸಿಕೊಂಡು ಬಂದ ಮುರುಘಾ ಮಠಕ್ಕೆ ಅಪಾರ ಭಕ್ತ ಸಮೂಹವಿದೆ. ಈ ಹಿಂದಿನ ಮಲ್ಲಿಕಾರ್ಜುನ ಸ್ವಾಮೀಜಿಗಳವರೆಗೂ ಬಸವಣ್ಣನನ್ನು ಜಂಗಮವಾಗಿಸುತ್ತಲೇ ವಚನ ಪರಂಪರೆಯ ಕಾಯಕ ದಾಸೋಹ ಉಣಿಸಿದ್ದು ಮಠದ ವಿಶೇಷ. ಇದೇ ಕಾರಣಕ್ಕೆ ಲಿಂಗಾಯತರೊಳಗೊಂಡಂತೆ ನಾಡಿನ ಸಮಸ್ತ ಜಾತಿಸಮುದಾಯಗಳಿಗೂ ಇದು ನಮ್ಮ ಮಠ ಎನ್ನುವ ಆಪ್ತತೆ ಬೆಳೆದು ಬಂದಿತ್ತು, ಇಂಥಾ ಭಾವನೆಯ ನಡುವೆಯೇ 1991-92ರ ಸುಮಾರಿನಲ್ಲಿ ಚಿತ್ರದುರ್ಗ ಜಿಲ್ಲೆಯವರೇ ಆದ ಶಿವಮೂರ್ತಿ ಮುರುಘಾ ಸ್ವಾಮಿಗಳನ್ನು ತಮ್ಮ ಮುಂದಿನ ಪೀಠಾಧೀಶರನ್ನಾಗಿ ಮಲ್ಲಿಕಾರ್ಜುನ ಸ್ವಾಮಿಗಳು ಆರಿಸಿದ್ದರು. ಶಿವಮೂರ್ತಿ ಮುರುಘಾಸ್ವಾಮಿಗಳು ಕಾಯಕಯೋಗಿ ಪರಂಪರೆ ಮುಂಚೂಣಿ ವಹಿಸಿಕೊಳ್ಳುತ್ತಿದ್ದಂತೆಯೇ ಮಠ ಮತ್ತೊಂದು ಕ್ರಾಂತಿಕಾರಕ ತಿರುವಿಗೆ ತೆರೆದುಕೊಂಡಿತ್ತು, ವೈಚಾರಿಕ ಮನೋಭಾವದ ಶಿವಮೂರ್ತಿ ಮುರುಘರು ಈ ಮೊದಲಿದ್ದ 'ಜಗದ್ಗುರು' ಎಂಬ ಸ್ವಯಂಘೋಷಿತ ಬಿರುದಾವಳಿಯನ್ನು ಕಳಚಿ 'ಮುರುಘಾ ಶರಣ'ರು ಎನ್ನುವ ಹೊಸ ನಾಮಕರಣದ ಮೂಲಕ ಭಕ್ತಸಮೂಹದಲ್ಲಿ ರೋಮಾಂಚನ ಮೂಡಿಸಿದ್ದರು. ಅಲ್ಲದೆ ಮಠದಂಗಳದಲ್ಲಿದ್ದ ದೇವರ ಮೂರ್ತಿಗಳನ್ನೆಲ್ಲ ಸ್ಥಾವರದ ಸಂಕೇತಗಳೆಂದು ಎತ್ತಿ ಹಿಡಿಸಿದ್ದರು. ಕರ್ಪೂರ-ಊದುಗಡ್ಡಿ, ಮಂಗಳಾರತಿ ಗಂಟೆ-ಜಾಗಟೆಯ ಸದ್ದುಗಳಿಂದ ಮಠವನ್ನು ಮುಕ್ತವಾಗಿಸಿ ಶರಣರ ನೈಜ ಆದರ್ಶ ತತ್ವಗಳು ಮೇಳೈಸುವಂತೆ ಮಾಡಿದ್ದರು. ಅನಿಷ್ಟವೆಂತಲೇ ಭಾವಿಸಿದ್ದ ಅಮಾವಾಸ್ಯೆಯೆಂದೇ ಮದುವೆಗಳನ್ನು ಮಾಡಿಸಿ ಆ ದಿನಕ್ಕೊಂದು ಜೀವಕಳೆ ತಂದು ಕೊಟ್ಟಿದ್ದರು. ಇದಕ್ಕಾಗಿ ಕೆಲ ಭಕ್ತರ ವಿರೋಧ ಕಟ್ಟಿಕೊಳ್ಳಬೇಕಾಗಿ ಬಂದಾಗಲೂ ಅವರು ಜಗ್ಗಲಿಲ್ಲ, ವಿಧವಾ ವಿವಾಹಗಳನ್ನು ಮಾಡುವ ಮೂಲಕ ಮಠವನ್ನೇ ವೈಚಾರಿಕಗೊಳಿಸಿದರು. ನಾಡಿನ ಪ್ರಜ್ಞಾವಂತ ಜನ ಮುರುಘಮಠವನ್ನು ಕಲಿಯುಗದ ಬಸವಾದಿ ಶರಣರ ಪರಂಪರೆಯ ಮುಂದುವರೆದ ಭಾಗ ಎಂದೇ ಬಣ್ಣಿಸುವಷ್ಟು ಎತ್ತರಕ್ಕೆ ಬೆಳೆಸಿದರು.

ಹೀಗೆ ಒಂದಿಲ್ಲೊಂದು ಕ್ರಾಂತಿಕಾರಿ ಬದಲಾವಣೆ ಮೂಲಕ ಮೂಢನಂಬಿಕೆ ಮೇಲೆ ಪ್ರಹಾರ ಮಾಡುತ್ತಿದ್ದ ಶಿವಮೂರ್ತಿ ಮುರುಘಾ ಶರಣರ ಖ್ಯಾತಿಯೂ ಉತ್ತುಂಗಕ್ಕೇರಲು ಶುರುವಾಯಿತು. ಇದೇ ಹುಮ್ಮಸ್ಸಿನಲ್ಲಿ ಅವರು ಮತ್ತೊಂದು ಕ್ರಾಂತಿಕಾರಿ ಸಾಹಸಕ್ಕೆ ಕೈಹಾಕಿದ್ದರು. ಶೋಷಿತ ಸಮುದಾಯಗಳಿಗೆ ದೂರವಾಗಿಯೇ ಉಳಿದಿದ್ದ ಮಠ ಪರಂಪರೆಯನ್ನು ಆ ಜಾತಿಗಳಿಗೂ ವಿಸ್ತರಿಸುವ ಸಲುವಾಗಿ ಚಲವಾದಿ, ಮಾದಿಗ, ಯಾದವ, ಕುಂಚಿಟಿಗ, ನಾಯಕ, ಮೇದಾರ, ಮಡಿವಾಳ, ಉಪ್ಪಾರ, ಹೀಗೆ ಜಾತಿಗೊಬ್ಬ ಸ್ವಯಂಘೋಷಿತ ಜಗದ್ಗುರುಗಳನ್ನು ಹುಟ್ಟುಹಾಕಿ ಅವರ ಮೂಲಕ ಆಯಾ ತಳ ಸಮುದಾಯದ ಜನರ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಜಾಗೃತಿಗೆ ಮುಂದಾಗಿದ್ದರು. ಆಲೋಚನೆಯೇನೋ ಅದ್ಭುತವಾಗಿತ್ತು ಆದರೆ ಅದರ ಅನುಷ್ಠಾನ ಆಲೋಚನೆಯಷ್ಟು ಪಕ್ವವಾಗಿರಲಿಲ್ಲ,

ಹೀಗೆ ತಾವೇ ಹುಟ್ಟುಹಾಕಿದ ಕೆಲವು ಜಗದ್ಗುರುಗಳಿಗೆ ಐದೈದೆಕರೆ ಭೂಮಿ ನೀಡಿ ನೆಲೆಗೊಳಿಸಿದರು. ತಮ್ಮ ಕ್ರಾಂತಿಯ ಗುಂಗಿನಲ್ಲಿ ಸ್ವಾಮಿಯಾಗಲು ಲಾಯಕ್ಕಲ್ಲದವರಿಗೆಲ್ಲ ಕಾವಿತೊಡಿಸಿ ಜಾತಿಗೊಬ್ಬ ಜಗದ್ಗುರು ಗಳನ್ನು ದಯಪಾಲಿಸಿದ್ದೇ ಶರಣರು ಮಾಡಿದ ಮೊದಲ ಯಡವಟ್ಟು.

ಒಂದಷ್ಟು ಕಾಲ ಎಲ್ಲವೂ ಮುರುಘಾಶರಣರು ಅಂದುಕೊಂಡಂತೆಯೇ ನಡೆಯಿತಾದರೂ ಆಮೇಲಾಮೇಲೆ ಈ ಜಾತಿ ಜಗದ್ಗುರುಗಳ ಮೇಲೆ ಶರಣರ ದಬ್ಬಾಳಿಕೆ ಹೆಚ್ಚಾಗುತ್ತಿದೆ ಎಂಬ ಅಸಮಾಧಾನದ ಹೊಗೆ ಹರಿದಾಡಲು ಆರಂಭಿಸಿತು. ತಾನು ಹುಟ್ಟಾಕಿದ ಜಗದ್ಗುರುಗಳು ತಮ್ಮ ಹಿಡಿತ ಮೀರಿ ಹೋಗಬಾರದು ಎನ್ನುವ ಮೂಗುದಾರವನ್ನು ಶರಣರು ಪೋಣಿಸಿದ್ದಾರೆ, ಸಕಲ ಜಾತಿಗಳ ಜಗದ್ಗುರುಗಳು ಹಗಲೆಲ್ಲ ತಮ್ಮತಮ್ಮ ಮಠಗಳಲ್ಲಿದ್ದು ಸಂಜೆಯಾದೊಡನೆ ಮುರುಘಾಮಠದಲ್ಲಿ ಸೇರಿಕೊಳ್ಳಬೇಕು, ಮುರುಘಾಶರಣರೇ ಪ್ರತಿಯೊಬ್ಬ ಜಾತಿ ಜಗದ್ಗುರುವಿಗೂ ನಾಳಿನ ಕಾರ್ಯಕ್ರಮಗಳ ಪಟ್ಟಿ ಸಿದ್ಧಪಡಿಸುತ್ತಾರೆ ಎಂಬುವ ಮಟ್ಟಕ್ಕೆ ಅಸಮಾಧಾನ ಬೆಳೆದು ನಿಲ್ಲುತ್ತಲೇ ಬಂತು. 'ನಾನು ನನ್ನ ಜಾತಿಯ ಜಗದ್ಗುರುವಾದ ಮೇಲೆ ನನ್ನ ಜಾತಿಯನ್ನು ಸಂಘಟಿಸುವುದು, ಅವರ ಮೂಢನಂಬಿಕೆ ತೊಲಗಿಸುವುದು, ಶಿಕ್ಷಣ, ಆರ್ಥಿಕ, ರಾಜಕೀಯವಾಗಿ ಜಾಗೃತಿಗೊಳಿಸುವ ಸ್ವತಂತ್ರ ಹೊಣೆ ನನ್ನದು' ಎಂಬ ಹಂಬಲ ಆ ಜಾತಿ ಜಗದ್ಗುರುಗಳಲ್ಲಿ ಮೊಳೆತದ್ದೇ ತಡ ಅವರೆಲ್ಲಾ ಶರಣರ ವಿರುದ್ಧವೇ ಬಂಡಾಯವೆದ್ದು ಕೂತರು.



ಬಂಡಾಯದ ಹಿಂದಿನ ರಹಸ್ಯ


ಶರಣರ ಅಧಿಪತ್ಯದ ವಿರುದ್ಧ ಜಾತಿ ಜಗದ್ಗುರುಗಳು ಬಂಡಾಯವೆದ್ದಿದ್ದರ ಹಿಂದಿರುವ ಮಾಸ್ಟರ್ ಮೈಂಡ್ ಎಂದರೆ ಬಸವರಾಜನ್. ಅಷ್ಟಕ್ಕೂ ಈ ಬಸವರಾಜ್ ಹೊರಗಿನವನೇನೂ ಅಲ್ಲ, ಅದೇ ಮಠದ ಆಸಾಮಿ. ಹಾಗೆನ್ನುವುದಕ್ಕಿಂತ ಮಠದ ಶಿಕ್ಷಣ ಮಾರಾಟ ಕೇಂದ್ರಗಳ ಒಡೆಯ, ಮಠದ ಸಾವಿರಾರು ಕೋಟಿ ಆಸ್ತಿಗೆ ಸರದಾರ ಎಂದರೆ ಆತನ ಕಪಿಮುಷ್ಟಿಯ ಆಳ ಅಗಲ ಅರ್ಥವಾದೀತು. ಹಾಗೆ ನೋಡಿದರೆ ಮಠದ ಹಿಂದಿನ ಮಲ್ಲಿಕಾರ್ಜುನ ಸ್ವಾಮಿಗಳಿಗೆ ತನ್ನ ನಂತರ ಪೀಠಕ್ಕೆ ಈ ಬಸವರಾಜನೇ ಅಧಿಪತಿಯಾಗಬೇಕೆಂಬ ಹೆಬ್ಬಯಕೆ ಇತ್ತು. ಆದರೆ ಐಷಾರಾಮಿ ಚಪಲತೆಯ ಆತನಿಗೆ ಸರ್ವಸಂಗ ಪರಿತ್ಯಾಗಿಯಾಗಿ ಬದುಕುವುದು ಇಷ್ಟವಿರಲಿಲ್ಲ. ಹಾಗಾಗಿ ಶಿವಮೂರ್ತಿ ಶರಣರನ್ನು ತಾನೇ ಹುಡುಕಿ ತಂದು ಮಲ್ಲಿಕಾರ್ಜುನ ಸ್ವಾಮಿಗಳನ್ನು ಒಪ್ಪಿಸಿ ಪೀಠಾಧಿಪತಿ ಮಾಡಿ ಕೂರಿಸಿದ್ದ. ಅದಕ್ಕೋಸ್ಕರವೇ ಬಸವರಾಜನ್ ವಿರುದ್ಧ ಶಿವಮೂರ್ತಿ ಶರಣರು ಧ್ವನಿ ಎತ್ತುತ್ತಲೇ ಇರಲಿಲ್ಲ, ಬಸವರಾಜನ್‌ಗೆ ಶರಣರು ಅದೆಷ್ಟು ಶರಣಾಗಿ ಹೋಗಿದ್ದರೆಂದರೆ ಆತ ಸೌಭಾಗ್ಯ ಎಂಬಾಕೆಯನ್ನು ಮದುವೆಯಾಗಿ ಮಠದ ಆವರಣದಲ್ಲೇ ಸಂಸಾರ ಹೂಡಿದಾ[ಗ] ಇಡೀ ಮಠದ ಭಕ್ತರು ವಿರೋಧಿಸಿದರೂ ಶಿವಮೂರ್ತಿ ಶರಣರು ಆತನನ್ನು ಬಿಟ್ಟುಕೊಟ್ಟಿರಲಿಲ್ಲ, ಬಸವರಾಜನ[್] ಪ್ರಕಾಂಡ ಬುದ್ಧಿವಂತ. ಮುರುಘಾ ಶರಣರ ವೈಚಾರಿ[ಕ] ನಡೆಗಳ ಹಿಂದೆ ಈತನ ಮೈಂಡು ಕೆಲಸ ಮಾಡುತ್ತಲೇ ಇತ್ತು, ಸ್ಥಾವರಗೊಂಡಿದ್ದ ದೇವರಮೂರ್ತಿಗಳ ಎತ್ತಂಗಡಿ, ಅಮಾವಾಸ್ಯೆಯಲ್ಲಿ ಮದುವೆ, ಶುಭಕಾರ್ಯ, ವಿಧವಾ ವಿವಾಹ, ಜಾತಿಗೊಬ್ಬ ಜಗದ್ಗುರುಗಳ ನೇಮಕದ ರೂವಾರಿಯೇ ಈತ ಎನ್ನುವ ಸುದ್ದಿಗಳೂ ಇವೆ. ಒಂದರ್ಥದಲ್ಲಿ ಮುರುಘಾ ಶರಣರು ಈ ಬಸವರಾಜನ್‌ನ ಮುಷ್ಟಿಯ ಕೂಸಾಗಿದ್ದರು.

ಯಾವಾಗ ಬಸವರಾಜನ್ ಹೊಸದುರ್ಗದ ಹೊಸಕೆರೆಯ ಸೌಭಾಗ್ಯ ಎನ್ನುವ ಕುಂಚಿಟಿಗ ಹುಡುಗಿಯನ್ನು ವಿವಾಹವಾದನೋ ಮಠದ ಪರಿಸರವೇ ವಿರುಪೇರಾಗಲು ಶುರುವಾಯಿತು. ಸೌಭಾಗ್ಯ ಬಸವರಾಜನ್ ಮಠ ಪ್ರವೇಶ ಮಾಡಿದ್ದೇ ತಡ ಮಠದ ಆಡಳಿತ ವ್ಯವಹಾರದಲ್ಲಿ ಮೂಗು ತೂರಿಸಲು ಶುರು ಮಾಡಿದಳು. ಬಸವರಾಜನ್ ಕೂಡ ಹೆಂಡತಿಯ ಹುಕುಂ ಪಾಲಿಸುವ ದಾಸನಾಗಿದ್ದು ಕೂಡ ಮುರುಘಾ ಶರಣರ ನಡೆಗಳಿಗೇ ಬ್ರೇಕ್ ಬೀಳತೊಡಗಿತು. ಮಠದೊಳಗಿದ್ದೇ ಸೌಭಾಗ್ಯ ರಾಜಕೀಯ ಪ್ರವೇಶಿಸಿ ಚಿತ್ರದುರ್ಗ ಜಿಲ್ಲಾ ಪಂಚಾಯತಿಯ ಸದಸ್ಯೆಯಾಗಿ ಅಧ್ಯಕ್ಷೆಯಾಗಿ ಪ್ರಭಾವ ಬೆಳೆಸಿಕೊಂಡದ್ದಲ್ಲದೆ ಮಠದೊಳಕ್ಕೂ ರಾಜಕೀಯ ತಂದಿಟ್ಟಳು. ಸಾಲದ್ದಕ್ಕೆ ಬಸವರಾಜನ್ ಮಠದ ಚಕ್ರವರ್ತಿಯಾಗಿದ್ದುಕೊಂಡೇ 1996ರಲ್ಲಿ ಜನತಾದಳದ ಬೆಂಬಲಿತ ಅಭ್ಯರ್ಥಿಯಾಗಿ ಎಂ.ಎಲ್.ಸಿ. ಚುನಾವಣೆಗೆ ನಿಂತು ಸೋತ. 2004ರಲ್ಲಿ ಮತ್ತೆ ಜನತಾದಳ ಪಕ್ಷದಿಂದಲೇ ಚಿತ್ರದುರ್ಗ ಮತಕ್ಷೇತ್ರದಿಂದ ವಿಧಾನಸಭೆಗೆ ಸ್ಪರ್ಧಿಸಿ ಎರಡನೇ ಬಾರಿಯೂ ಸೋತ. ಅಲ್ಲಿಂದ ರಾಜಕೀಯ ಹುಚ್ಚು ಬಸವರಾಜನ್‌ನ ನೆತ್ತಿಗೇರಿತ್ತು. ಈ ಎರಡೂ ಚುನಾವಣೆಗೆ ಆತ ಖರ್ಚು ಮಾಡಿದ್ದು ಮಠಕ್ಕೆಂದು ಭಕ್ತರು ನೀಡಿದ್ದ ದೇಣಿಗೆಯ ಹಣವನ್ನೇ. ಇದು ಭಕ್ತ ಸಮೂಹದಲ್ಲಿ ಅಸಮಾಧಾನವನ್ನು ಹುಟ್ಟುಹಾಕಿ ಅವರೆಲ್ಲಾ ಬಸವರಾಜನ್ ವಿರುದ್ಧ ಧ್ವನಿ ಎತ್ತಲು ಆರಂಭಿಸಿದರು. ಅಷ್ಟರಲ್ಲಾಗಲೇ ಬಸವರಾಜನ್ ಮತ್ತವನ ಹೆಂಡತಿಯ ಉಪದ್ರವ ಮಿತಿಮೀರಿದ್ದರಿಂದ ಮುರುಘಾ ಶರಣರೂ ಒಳಗಿಂದೊಳಗೆ ಭಕ್ತರನ್ನು ಪ್ರಚೋದಿಸಿ ಬಸವರಾಜನ್‌ನನ್ನು ಮಠದ ಆವರಣದಿಂದ ಹೊರದಬ್ಬುವ ಹಂತಕ್ಕೆ ತಂದು ನಿಲ್ಲಿಸಿದ್ದರು. ಇನ್ನು ತಾನು ಮಠ ಬಿಟ್ಟು ಹೊರಡುವುದು ಬಸವರಾಜನ್‌ಗೆ ಖಾತ್ರಿಯಾಗುತ್ತಿದ್ದಂತೆಯೇ ಎರಡೂ ಕೈಯಿಂದ ಮಠದ ಸ್ವತ್ತನ್ನೆಲ್ಲಾ ಬಾಚಿಕೊಂಡಿದ್ದಲ್ಲದೆ 2007 ರಲ್ಲಿ ಮಠದಿಂದ ಕಾಲೆತ್ತಿಡುವ ವೇಳೆಗೆ ಮಠವನ್ನು 70 ಕೋಟಿ ಸಾಲದ ಕುಣಿಕೆಯಲ್ಲಿ ನೇತಾಡಲು ಬಿಟ್ಟಿದ್ದ. ಅಲ್ಲಿಂದ ಬಸವರಾಜನ್‌ನಿಗೂ ಮಠಕ್ಕೂ ಇದ್ದ ಮೂಲ ಸಂಬಂಧ ಮುರುಕೊಂಡು ಬಿತ್ತು, ಹಾಗಂತ ಸುಮ್ಮನೆ ಕೂರುವ ಜಾಯಮಾನ ಆತನದಾಗಿರಲಿಲ್ಲ, ಆಗಲೇ ಆತ ಶುರು ಮಾಡಿದ್ದು ಈ ಜಾತಿ ಜಗದ್ಗುರುಗಳ ಬಂಡಾಯ ಅಧ್ಯಾಯವನ್ನು.

ಹೇಗೂ ಅಷ್ಟೂ ಜಗದ್ಗುರುಗಳನ್ನು ಮುರುಘಾ ಶರಣ[ರ] ಮೂಲಕ ಪೀಠಕ್ಕೇರಿಸಿದ್ದು ತಾನೇ ಆಗಿದ್ದರಿಂದ ಅವರೆಲ[್ಲಾ] ತನ್ನ ಪರವಾಗಿ ಬರುತ್ತಾರೆ ಎಂಬ ಖಾತ್ರಿ ಆತನಿಗಿತ್ತು. ಅದೇವೇಳೆಗೆ ಶರಣರ ಅಧಿಪತ್ಯವನ್ನು ಕಳಚಿಕೊಂಡು ಸ್ವತಂ[ತ್ರ] ಜಗದ್ಗುರುಗಳಾಗಬೇಕೆಂಬ ತುಡಿತವೂ ಅವರ[ಲ್ಲಿ] ಜೋರಾಗಿತ್ತು, ಹಾಗಾಗಿ ಬಸವರಾಜನ್ ಅವರನ್ನೆಲ್ಲಾ ಶರಣ[ರ] ವಿರುದ್ಧ ಛೂಬಿಡಲು ಆರಂಭಿಸಿದ.

ಮೊದಲ ಬಂಡಾಯ

ಮೊಟ್ಟಮೊದಲು ಬಂಡಾಯವೆದ್ದದ್ದು ಪಂಚಮಸಾ[ಲಿ] ಸಮುದಾಯದ ಜಗದ್ಗುರು ಮೃತ್ಯುಂಜಯ ಶರಣರು. ದಾವಣಗೆರೆ ವಿರಕ್ತ ಮಠದ ಶರಣರಾಗಿ ಮುರುಘಾ ಶರಣರಿಂದ ದೀಕ್ಷೆಪಡೆದ ಮೃತ್ಯುಂಜಯರು ವಿದ್ಯಾರ್ಥಿ ದೆಸೆಯಲ್ಲಿ ಎಡಪಂಥೀಯರಾಗಿ ಗುರುತಿಸಿಕೊಂಡಿದ್ದಂತವ[ರು]



ಬಸವರಾಜನ್, ಬಿದರಿ ಮತ್ತು ಬಸವಶ್ರೀ ಪ್ರಶಸ್ತಿ

ಮುರುಘಾ ಮಠದಿಂದ ಹೊರದಬ್ಬಿಸಿಕೊಂಡ ಬಸವರಾಜನ್ ಶರಣರಿಗೆ ಕೊಟ್ಟ ಕಾಟ ಒಂದೆರಡಲ್ಲ, ಮಠದ ಪ್ರಮುಖನಾಗಿದ್ದಾಗಲೇ ಮುರುಘಾ ಶರಣರಿಂದ ಹತ್ತಾರು ಚೆಕ್ಕುಗಳಿಗೆ ಸಹಿ ಹಾಕಿಸಿಕೊಂಡಿದ್ದ, ಅವುಗಳನ್ನೇ ಆಧಾರವಾಗಿಟ್ಟುಕೊಂಡು ಶರಣರ ವಿರುದ್ಧ ಚೆಕ್ ಬೌನ್ಸ್ ಕೇಸು ಜಡಿಯತೊಡಗಿದ್ದ ಪ್ರಭಾವಿ ಭಕ್ತರು ಮಧ್ಯ ಪ್ರವೇಶಿಸಿ ಕೇಸು ಹಾಕಿದ ಬೇನಾಮಿ ಹೆಸರಿನವರೊಂದಿಗೆ ರಾಜಿ ಪಂಚಾಯ್ತಿ ನಡೆಸಿ ಒಂದೆರಡು ಪ್ರಕರಣಗಳನ್ನು ಇತ್ಯರ್ಥ ಪಡಿಸಿದ್ದರು. ಆದರೆ ಒಂದು ಕೇಸು ಮುಗಿಯಿತೆಂದು ನಿಟ್ಟುಸಿರು ಬಿಡುತ್ತಿದ್ದಂತೆಯೇ ಬಸವರಾಜನ್ ಮತ್ತೊಂದು ಚೆಕ್‌ಬೌನ್ಸ್ ಕೇಸನ್ನು ಹಾಕುತ್ತಲೇ ಬರುತ್ತಿದ್ದ, ಇದರಿಂದ ಚಿಂತೆಗೀಡಾದ ಶರಣರು ಸಹಾಯ ಬೇಡಿಹೋದದ್ದು ಶಂಕರ್ ಬಿದರಿಯನ್ನು, ಆಗಿನ್ನೂ ಬಿದರಿ ಬೆಂಗಳೂರಿನಲ್ಲಿ ಪೊಲೀಸ್ ಕಮೀಶನರ್ ಆಗಿದ್ದರು. ಶರಣರು ಬಸವರಾಜನ್‌ನ ಕಾಟ ನಿವೇದಿಸಿಕೊಳ್ಳುತ್ತಿದ್ದಂತೆಯೇ ಜಾತಿ ಮಠದ ಮೇಲಿನ ವ್ಯಾಮೋಹದಿಂದ ಬಿದರಿ ಬಸವರಾಜನ್‌ಗೆ ಅದೇನು ಧಮಕಿ ಹಾಕಿದರೋ ಆನಂತರ ಬಸವರಾಜನ್ ಕೂಡಾ ತೆಪ್ಪಗಾಗಿಬಿಟ್ಟ.

ಆ ನಡುವೆ 70 ಕೋಟಿ ಸಾಲದಲ್ಲಿರುವ ಶರಣರಿಗೆ ಖುದ್ದು ಶಂಕರ ಬಿದರಿಯೇ ಬಡ್ಡಿ ಇಲ್ಲದೆಯೇ 25 ಕೋಟಿ ಸಾಲ ಕೊಡಿಸಿದ್ದಾರೆಂಬ ಸುದ್ದಿ ದುರ್ಗದಲ್ಲಿ ಹರಡಿತ್ತು, ಅದಕ್ಕೆ ಸರಿಯಾಗಿ, ಮಠದಿಂದ ಸಾಮಾಜಿಕ ಸುಧಾರಕರಿಗೆ ಕೊಡಮಾಡುವ ಬಸವಶ್ರೀ ಪ್ರಶಸ್ತಿಯನ್ನು 2012 ರಲ್ಲಿ ಶಂಕರ್ ಬದರಿಗೇ ನೀಡಿ ಋಣಭಾರ ಕಡಿಮೆ ಮಾಡಿಕೊಂಡಿದ್ದರು. ಆದರೆ ಆ ಮೂಲಕ ಪ್ರಶಸ್ತಿಯನ್ನು ಖುದ್ದು ಶರಣರೇ ಅಪವಿತ್ರಗೊಳಿಸಿದ್ದರು.

ತೊಟ್ಟ ಅವರು ತಾವು ಹೊಕ್ಕ ಮಠವನ್ನು ನಂಬಿಕೆಯ ಸೋಂಕಿಲ್ಲದಂತೆ ಮಾಡಿದರು. ಭಕ್ತರ ಮಾನವೀಯತೆಯ ಮಾತು ಬಿತ್ತುವ ಮೂಲಕ ವ ಬದುಕಿಗೆ ಶರಣರ ವಚನಗಳಿಗೆ ಬದ್ಧತೆಯ ಊರಿದರು. ದಾವಣಗೆರೆಯಿಂದ ಸಂಗಮದವರೆಗೂ ಅವರು ಸದ್ದು ಮಾಡಿದರು. ವೈಚಾರಿಕ ನಿಲುವು ಇಡೀ ಪಂಚಮಸಾಲಿ ದಾಯವೇ ಮುರುಘಾ ಶರಣರ ಕಡೆಗಿನ ಭಕ್ತಿಯನ್ನು ತ್ಯುಂಜಯರೆಡೆಗೆ ಬದಲಾಯಿಸುವಂತೆ ಮಾಡಿತು. ಮುರುಘಾ ಶರಣರಿಗೆ ರುಚಿಸಿದಂತೆ ಕಾಣಲಿಲ್ಲ. ತ್ತಾಗಲೇ ಗುಲ್ಬರ್ಗ, ಬೀದರು, ವಿಜಾಪುರ ಭಾಗದ ಮಸಾಲಿ ಸಮುದಾಯವೇ ಮೃತ್ಯುಂಜಯ ಶರಣರನ್ನೆ ಸಮುದಾಯದ ಜಗದ್ಗುರುವೆಂದು ಸ್ವೀಕರಿಸಿಬಿಟ್ಟಿದ್ದರು. ಗಿಯೇ 28.09.2008ರಲ್ಲಿ ಮೃತ್ಯುಂಜಯರನ್ನು ಕಾವಿಯಲ್ಲೇ ಮಠ ತೊರೆಯುವಂತೆ ಮಾಡಿದರು. ಲೇ ಕೂಡಲಸಂಗಮದಲ್ಲಿ ಮೃತ್ಯುಂಜಯರ ದಲ್ಲಿ ಪಂಚಮಸಾಲಿ ಜಗದ್ಗುರು ಮಠವೊಂದು ತ್ತಿದ್ದು.

ಲ್ಲಿಂದಾಚೆಗೆ ಮುರುಘಾ ಶರಣರು ಕಟ್ಟಿದ್ದ ಮಠಗಳು ಒಂದೊಂದಾಗಿ ಅವರ ಹಿಡಿತದಿಂದ ಹೊರಲು ಬಯಸಿದವು. ಹೊಸದುರ್ಗದ ಕುಂಚಿಟಿಗ ದಾಯದ ಶಾಂತವೀರ ಶರಣರು ಮುರುಘಾ ಶರಣರ ಕಳಚಿಕೊಂಡು ಕುಂಚಿಟಿಗ ಜಗದ್ಗುರುವಾಗಿ ಬಡ್ತಿ ದವರು. ಚಿತ್ರದುರ್ಗದ ಮಾದಾರ ಚೆನ್ನಯ್ಯ ಶರಣರೂ ಗ ಸಮುದಾಯವನ್ನು ಪ್ರತಿನಿಧಿಸುವ ಮೂಲಕ ತ್ತ ತಂದುಕೊಂಡರು.

ನ್ನು ಮೇದಾರ ಕೇತೇಶ್ವರ ಸ್ವಾಮೀಜಿಯದ್ದೇ ಬೇರೆ ಕೇತೇಶ್ವರ ಶರಣರು ಮುರುಘಾ ಶರಣರಿಗಿಂಥಾ ದರು, ಮಾತೆ ಮಹಾದೇವಿಯಿಂದ ದೀಕ್ಷೆ ಪಡೆದು ಯುವ ತತ್ವ-ಶರಣ ಪರಂಪರೆಯ ಆಳವಾದ ಅಧ್ಯಯನ ದ್ದಂತವರು. ಹಾಗೆ ನೋಡಿದರೆ ಮುರುಘಾ ರಿಗಿಂತ ಹೆಚ್ಚು ಜ್ಞಾನ ಪಡೆದವರು. ಈ ಸ್ವಾಮಿಯನ್ನ ಮಹಾದೇವಿ ಅಡ್ಡಾದಿಂದ ಹೈಜಾಕ್ ಮಾಡಿದ ಮೂರ್ತಿ ಶರಣರು ಅವರನ್ನು ಮೇದಾರ ರಿಸಿದ್ದರು. ಅಪಾರ ಜ್ಞಾನ ಸಂಪಾದಿಸಿದ್ದ ಕೇತೇಶ್ವರರು ಘಾ ಶರಣರನ್ನೇ ಪಕ್ಕಕ್ಕಿಟ್ಟು ಬಿಟ್ಟರು. ಮುರುಘಾ ಳೊಳಗಿನ ಈಗೋ ಕೆರಳಿತು. ತನ್ನ ಶಿಷ್ಯರು ತನಗಿಂತ ವಂತರಾಗಿರಬಾರದು ಎಂದು ಬಯಸಿದ ಶರಣರು ಶ್ವರರ ವಿರುದ್ಧ ತಿರುಗಿಬಿದ್ದರು. ಅದೇವೇಳೆಗೆ



ಕೇತೇಶ್ವರರನ್ನು ಮಠದಿಂದ ಹೊರಹಾಕುವ ಯೋಜನೆಗಳೂ ಚುರುಕು ಪಡೆದುಕೊಂಡಿದ್ದವು. ಆದರೆ ಅಷ್ಟರಲ್ಲೇ 'ರೋಗಿ ಬಯಸಿದ್ದು ಹಾಲು ಅನ್ನ, ವೈದ್ಯ ಹೇಳಿದ್ದೂ ಹಾಲು ಅನ್ನ' ಎನ್ನುವಂತೆ ಕೇತೇಶ್ವರ ಸ್ವಾಮೀಜಿ ಡಯಾಬಿಟಿಕ್ ಗ್ಯಾಂಗ್ರೀನ್‌ಗೆ ತುತ್ತಾಗಿ ಶಿವೈಕ್ಯರಾಗಿದ್ದರು.

ಅವರು ಕೊನೆಯುಸಿರೆಳೆಯುವ ಹಲವು ದಿನಗಳ ಮುನ್ನ ಯಡ್ಡಿ ಸರಕಾರ ಅವರ ಮಠಕ್ಕೆ ಎರಡು ಕೋಟಿ ರೂಪಾಯಿ ಅನುದಾನ ನೀಡಿತ್ತು, ಅದರಲ್ಲಿ ಎರಿಟಗ ಎನ್ನುವ 60 ಲಕ್ಷದ ಐಶಾರಾಮಿ ಕಾರು ಖರೀದಿಸಿದ್ದರು. ತಮ್ಮ ಕೊನೇ ದಿನ ಸಮೀಪಿಸುತ್ತಿರುವುದನ್ನು ಮನಗಂಡ ಕೇತೇಶ್ವರ ಸ್ವಾಮಿ ಮಠಕ್ಕೆ ಮಂಜುನಾಥ ಎನ್ನುವ ಪ್ರಾಮಾಣಿಕ ಹುಡುಗನನ್ನು ತಮ್ಮ ನಂತರ ಪೀಠಾಧಿಪತಿಯಾಗಲು ಆಯ್ಕೆ ಮಾಡಿದ್ದರು. ಆದರೆ ಪಟ್ಟ ಕಟ್ಟುವ ಮುನ್ನವೇ ಅವರು ಲಿಂಗೈಕ್ಯರಾಗಿದ್ದರು. ಆಗ ಮುರುಘಾ ಶರಣರು ಮೇದಾರ ಜನಾಂಗದ ಜಿಲ್ಲಾ ಅಧ್ಯಕ್ಷ ಪ್ರಹ್ಲಾದ ಎನ್ನುವ ತಲೆಮಾಸಿದವನನ್ನು ಮಠೀಕರಿಸಿಕೊಂಡು ಮೇದಾರ ಮಠವನ್ನು ತಮ್ಮ ಕಬ್ಜಕ್ಕೆ ತಂದುಕೊಂಡಿದ್ದಲ್ಲದೆ ಕೇತೇಶ್ವರರು ನೇಮಿಸಿದ್ದ ಮರಿಸ್ವಾಮಿ ಮಂಜುನಾಥನನ್ನು ಮಠದಿಂದಲೇ ಹೊರದಬ್ಬಿಬಿಟ್ಟರು.

ಶರಣರ ವಿರುದ್ಧ ಕೋಮುವಾದಿ ಪ್ರತೀಕಾರ

ಹೀಗೆ ಮುರುಘಾ ಶರಣರ ಹಿಡಿತದಿಂದ ಮುಕ್ತವಾಗಿ ಹೊರಬಂದ ಜಾತಿ ಜಗದ್ಗುರುಗಳು ಒಟ್ಟಿಗೇ ಕಲೆತು ಮುರುಘ ಶರಣರಿಗೆ ಆಘಾತ ನೀಡುವ ಯೋಜನೆ ರೂಪಿಸಿಕೊಂಡರು. ಮುರುಘಾ ಶರಣರ ವೈಚಾರಿಕ ವಚನ ಚಳವಳಿಗೆ ಸೆಡ್ಡು ಹೊಡೆಯುವ ಮೂಲಕ ಅವರಿಗೆ ಆಘಾತ ನೀಡಬೇಕೆಂದು ನಿರ್ಧರಿಸಿದ ಮಾದಾರ ಚನ್ನಯ್ಯ ಸ್ವಾಮಿ, ಜಯಮೃತ್ಯುಂಜಯ ಸ್ವಾಮಿ, ಕುಂಚಿಟಿಗರ ಶಾಂತವೀರ ಸ್ವಾಮಿಗಳೆಲ್ಲರೂ ಶರಣ ಮುಖವಾಡ ಕಳಚಿ ತಮ್ಮ ಅಂತರಂಗದ ಕೋಮುವಾದಿ ನೆಲೆಗಟ್ಟಿಗೆ ಬಂದು ಚಿತ್ತಲಾಗಿಬಿಟ್ಟರು.

ಚಿತ್ರದುರ್ಗದ ಯಾದವಾನಂದಮಠದ ಕೃಷ್ಣಯಾದವಾನಂದಸ್ವಾಮಿ ತಮ್ಮ ಮಠದಲ್ಲೇ ಎರಡು ದಿನಗಳ ಕಾಲ ನಡೆಸಿಕೊಟ್ಟ ಹಿಂದೂ ಜಾಗರಣಾ ವೇದಿಕೆಯ ಅಧ್ಯಯನ ಶಿಬಿರವನ್ನು ಸ್ವತಃ ಹೊಸದುರ್ಗದ ಶಾಂತವೀರಸ್ವಾಮಿ ಉದ್ಘಾಟಿಸಿದ್ದರು. ಮುರುಘಾ ಶರಣರು ಹುಟ್ಟುಹಾಕಿದ ಜಾತಿಮಠಗಳ ಪ್ರಭೃತಿಗಳು ಹಿಂದೂ ಮೂಲಭೂತವಾದಿಗಳಾಗಿ ಬೆಳೆಯುವ ಮೂಲಕ ಇಡೀ ಶೂದ್ರ ಸಮುದಾಯವನ್ನೇ ಮೂಲಭೂತವಾದಿಗಳ ತೆಕ್ಕೆಗೆ ತಂದು ನಿಲ್ಲಿಸಿಬಿಟ್ಟರು. ಇದೇ ಶಾಂತವೀರ ಸ್ವಾಮಿ ತಾನು ಹೊಸದುರ್ಗದ ಮಠದ ಪಟ್ಟಕ್ಕೇರುವಾಗ ವೈದಿಕರು, ಪುರೋಹಿತಶಾಹಿಗಳ ಕೃಪಾಶೀರ್ವಾದವಿಲ್ಲದೆ ಯಜ್ಞ ಮಾಡಿಸುವ ಮೂಲಕ ಜಾತಿ ಜಗದ್ಗುರುವಿನ ಪಟ್ಟ ಅಲಂಕರಿಸಿದ್ದರು. ಕೇವಲ ಮುರುಘಾ ಶರಣರಿಗೆ ಸೆಡ್ಡು ಹೊಡೆಯಬೇಕೆನ್ನುವ ಏಕಮಾತ್ರ ಕಾರಣಕ್ಕೆ ದಲಿತ ಮತ್ತು ಅಹಿಂದಾ ಮಠಗಳ ಸ್ವಯಂಘೋಷಿತ ಜಗದ್ಗುರುಗಳು ಹಿಂದೂ ಮೂಲಭೂತವಾದಿಗಳಂತೆ ವರ್ತಿಸುತ್ತಿದ್ದಾರೆ. ಆರ್.ಎಸ್.ಎಸ್.ನ ಗುಣಗಾನ, ಮೋದಿಯ ಆರಾಧನೆ, ಹಿಂದೂ ಜಾಗರಣಾ ವೇದಿಕೆಯಂಥಾ ಮನುವಾದಿಗಳ ಅಧ್ಯಯನ ಶಿಬಿರಗಳನ್ನು ಆಯೋಜಿಸುವ ಮೂಲಕ ತಳ ಸಮುದಾಯಗಳನ್ನು ಮನುವಾದಿಗಳ ಅಮಾನವೀಯ ಜಾತಿವಾದ, ವರ್ಣವಾದದ ಗುಲಾಮರನ್ನಾಗಿಸುತ್ತಿದ್ದಾರೆ.

ಮತ್ತೊಂದು ಕಳವಳಕಾರಿ ಅಂಶವೇನೆಂದರೆ, ಈ ಜಾತಿ ಮಠಗಳೆಲ್ಲ ಒಂದಾಗಿ ನರಹಂತಕ ಮೋದಿಯನ್ನು ಕರೆಸುವ ಜೊತೆಗೆ ಆರ್.ಎಸ್.ಎಸ್.ನ ಭಾಗವತನನ್ನೂ ಕರೆಸುವ ಭರ್ಜರಿ ಪ್ಲಾನ್ ಹಾಕಿದ್ದಾರೆ ಎನ್ನುವ ಆತಂಕಕಾರಿ ಸುದ್ದಿ ಹರಿದಾಡುತ್ತಿದೆ. ಸಿದ್ಧರಾಮಯ್ಯ ಮುಖ್ಯಮಂತ್ರಿಯಾದ ನಂತರ ಮಠಗಳಿಗೆ ಅನುದಾನ ನೀಡುವುದನ್ನು ಕೈಬಿಟ್ಟದ್ದರಿಂದ ಸಿಟ್ಟಿಗೆದ್ದ ಈ ಸ್ವಾಮಿಗಳ ಒಕ್ಕೂಟ ಕೆಪಿಸಿಸಿ ಅಧ್ಯಕ್ಷ ಡಾ|| ಪರಮೇಶ್ವರ್ ಹುಟ್ಟುಹಬ್ಬದಲ್ಲಿ ಅವರ ಮನೆಯಲ್ಲಿ ಪ್ರತ್ಯಕ್ಷವಾಗಿ, 'ಪರಮೇಶ್ವರರಿಗೆ ಕೈಪಾರ್ಟಿಯಿಂದ ಅನ್ಯಾಯವಾಗಿದೆ ಅವರೇ ಮುಖ್ಯಮಂತ್ರಿಯಾಗಬೇಕಿತ್ತು, ಮುಂದೆ ಇವರೇ ಮುಖ್ಯಮಂತ್ರಿಯಾಗಲು ನಾವು ಸ್ವಾಮೀಜಿಗಳು ಬೀದಿಗಿಳಿದು ಹೋರಾಟ ಮಾಡಲು ಸಿದ್ಧ' ಎಂದಿದ್ದರು.

ಮುರುಘಾ ಶರಣರಿಗೆ ಶುರುವಾದ ಐಡೆಂಟಿಟಿ ಹುಚ್ಚು


ಹೀಗೆ ಒಬ್ಬೊಬ್ಬರಾಗಿ ಜಾತಿ ಜಗದ್ಗುರುಗಳು ಮುರುಘಾ ಶರಣರ ಅಧಿಪತ್ಯದಿಂದ ಹೊರಬಂದು ತಮ್ಮದೇ ಸ್ವತಂತ್ರ ಮಠ ಸ್ಥಾಪಿಸಿಕೊಳ್ಳಲು ಶುರು ಮಾಡಿದ್ದು ಮುರುಘಾ ಶರಣರಿಗೆ ಒಂಟಿತನದ ಆತಂಕ ಕಾಡುವಂತೆ ಮಾಡಿತ್ತು, ನಾನೇ ಹುಟ್ಟುಹಾಕಿ, ತಲೆಬೋಳಿಸಿ, ಕಾವಿತೊಡಿಸಿ, ಪೀಠಕ್ಕೇರಿಸಿದ ಜಾತಿಗೊಬ್ಬ ಜಗದ್ಗುರು ಈಗ ಕೋಮುವಾದಿ ಸಖ್ಯದ ಮೂಲಕ ಸೆಡ್ಡು ಹೊಡೆಯುತ್ತಿರುವುದು ಮುರುಘಾ ಶರಣರ ಈಗೋವನ್ನು ಮತ್ತಷ್ಟೂ ಘಾಸಿಗೊಳಿಸಿತ್ತು, ಅಲ್ಲದೆ ಇತ್ತೀಚೆಗೆ ಜಾತ್ಯತೀತವಾಗಿ ಮುರುಘಾಮಠಕ್ಕೆ ಎಡತಾಕುತ್ತಿದ್ದ ಸಕಲ ಜಾತಿಯ ಭಕ್ತರ ಸಂಖ್ಯೆಯೇ ಕಡಿಮೆಯಾಗುತ್ತಾ ಬಂದಿತ್ತು.

ಈ ಎಲ್ಲಾ ಕಾರಣಗಳಿಂದಾಗಿ ಮತ್ತೊಮ್ಮೆ ತನ್ನ ಐಡೆಂಟಿಟಿಯನ್ನು ಮರುಸ್ಥಾಪಿಸುವ ಹಪಾಹಪಿ ಮುರುಘಾ ಶರಣರಿಗೂ ಹುಟ್ಟಿಕೊಂಡಿತ್ತು, ಆಗ ಅವರ ತಲೆಗೆ ಹೊಳೆದದ್ದೇ ಜಂಗಮ ಸ್ವರೂಪಿ ಬಸವಣ್ಣನನ್ನು ಸ್ಥಾವರಗೊಳಿಸುವ ಐಡಿಯ. ಅವರು ಸಿಲುಕಿರುವ ಹಲವಾರು ಸ್ವಯಂಕೃತ ಹತಾಶೆಗಳಿಂದ ಎದ್ದು ಹೊರಬರುವ ಧಾವಂತದಲ್ಲಿ ವೈಚಾರಿಕತೆಯನ್ನೇ ಕಳೆದುಕೊಂಡು 'ಪಬ್ಲಿಸಿಟಿ ಮೋಹ'ಕ್ಕೆ ಬಲಿಯಾದವರಂತೆ ತಮ್ಮ ಇಷ್ಟೂ ದಿನದ ಬೋಧನೆಗೇ ವೈರುಧ್ಯವಾದ ಕಾಯಕಕ್ಕೆ ಮುಂದಾಗಿದ್ದಾರೆ. ಯಾವ ಮುರುಘಾ ಶರಣರು ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ ಎಂದು ಶರಣ ಪರಂಪರೆಯ ಆದರ್ಶಗಳಿಗನುಗುಣವಾಗಿ ಮಠದಲ್ಲಿದ್ದ ದೇವರಮೂರ್ತಿಗಳನ್ನು ಎತ್ತಂಗಡಿ ಮಾಡಿಸಿದ್ದರೋ ಅದೇ ಶರಣರು ಬಸವಣ್ಣನನ್ನು ಸ್ಥಾವರಗೊಳಿಸುವ ಅಪರಾಧಕ್ಕೂ ಕೈಹಾಕಿರುವುದು ಶೋಚನೀಯವಲ್ಲದೆ ಮತ್ತಿನ್ನೇನು.

ಶರಣತತ್ವ, ಚಿಂತನೆಗಳ ಉಳಿವಿಗೋಸ್ಕರವಾದರೂ ಮುರುಘಾ ಶರಣರು ಕೊಂಚ ಎಚ್ಚೆತ್ತುಕೊಳ್ಳಬೇಕಿದೆ. ತಮ್ಮೆಲ್ಲಾ ಈಗೋ, ಪ್ರತಿಷ್ಠೆಗಳನ್ನು ಬದಗಿಟ್ಟು ಸಮುದಾಯದ ಹಿತದೃಷ್ಟಿಯಿಂದ ಶರಣರೆನಿಸಿಕೊಂಡವರು ಕಾರ್ಯಪ್ರವೃತ್ತರಾಗಬೇಕಿದೆ.

■ ಟಿ.ಎನ್.ಷಣ್ಮುಖ

ಅಂತಿಮ ಸತ್ಯವನ್ನು ಅರಸುವವನೇ ಬ್ರಾಹ್ಮಣ



ವಿವಾದಕ್ಕೆ ಹೆಸರಾಗಿದ್ದ ಅನಂತಮೂರ್ತಿ ಹೆಸರಿನಲ್ಲಿ ಮತ್ತೊಂದು ವಿವಾದ ಹುಟ್ಟುಹಾಕುವುದು ಈ ಬರಹದ ಉದ್ದೇಶವಲ್ಲ. ಆದರೆ ತನ್ನ ಜೀವನವನ್ನೆಲ್ಲಾ ವಾಗಿ ವೈದಿಕ ಸಂಪ್ರದಾಯಗಳ ವಿರುದ್ಧ ಬಂಡೇಳಲು ವಿನಿಯೋಗಿಸಿದ ವ್ಯಕ್ತಿಯ ಅಂತಿಮ ಸಂಸ್ಕಾರ ವೈದಿಕ ಸಂಪ್ರದಾಯಗಳ ರೀತ್ಯ ನಡೆಯಬೇಕೆಂಬ ಇಂಗಿತ ಪಡಿಸಿದ್ದುದ್ದರ ಹಿಂದಿನ ಮನೋವ್ಯಾಪಾರವನ್ನು ಇಲ್ಲಿ ಪರಿಗಣಿಸುವುದು ಜಸವೆನಿಸುತ್ತದೆ.

ಭಾರತೀಯ ಸಂಸ್ಕೃತಿ, ಪರಂಪರೆ, ತತ್ವಶಾಸ್ತ್ರದ ಬಗ್ಗೆ ಅಧಿಕಾರವಾಣಿಯಿಂದ ಬಲ್ಲವರಾಗಿದ್ದವರು ಮೈಸೂರು ವಿಶ್ವವಿದ್ಯಾಲಯದ ಮಹಾರಾಜಾ ಕಾಲೇಜಿನ ಪ್ರೊಫೆಸರ್ ಆಗಿದ್ದ ಎಂ.ಹಿರಿಯಣ್ಣ, ಅವರ 'ಎಸೆನ್ಷಿಯಲ್ಸ್ ಆಫ್ ಹಿಂದು ' ಮತ್ತು 'ಔಟ್‌ಲೈನ್ಸ್ ಆಫ್ ಹಿಂದು ಫಿಲಾಸಫಿ' ತತ್ವಶಾಸ್ತ್ರದ ಆಧಾರ ಗ್ರಂಥಗಳೆಂದು ಗಣಿಸಲಾಗಿವೆ. ಡಾಕ್ಟರ್ ರಾಧಾಕೃಷ್ಣನ್ ತಮ್ಮಲ್ಲಿ ಭಾರತೀಯ ತತ್ವಶಾಸ್ತ್ರದ ಬಗ್ಗೆ ಬಯಸಿದ ಪಾಶ್ಚಾತ್ಯ ವಿದ್ವಾಂಸರೊಬ್ಬರೊಡನೆ ತಮಗೆ ತಿಳಿದಷ್ಟು ಹೇಳುವುದಾಗಿಯೂ ಆಳವಾಗಿ ತಿಳಿಯಬೇಕಾದರೆ ಪ್ರೊಫೆಸರ್ ಹಿರಿಯಣ್ಣನವರನ್ನು ಸಂಪರ್ಕಿಸಬೇಕೆಂದೂ ದ್ದರಂತೆ. ಇಂಥ ಹಿರಿಯಣ್ಣನವರು ತಾವಿರುವವರೆಗೂ ತಮ್ಮ ಪೂರ್ವಿಕರ ಕರ್ಮಗಳನ್ನು ಮಾಡಿದರು. ಆದರೆ ತಮಗೆ ಏನೂ ಮಾಡಕೂಡದೆಂದು ತಮ್ಮ ಪತ್ರದಲ್ಲಿ ಬರೆದರು.

ನಾಗೇಶ 'ಪಚಿಸ ಭಾರತ' ಬರೆದ ಮತ್ತು ಅದರ ಮುನ್ನುಡಿಯಲ್ಲಿ ಭಾರತದ ತತ್ವಶಾಸ್ತ್ರ ಮತ್ತು ಪರಂಪರೆ ಬಗ್ಗೆ ಸ್ಥೂಲವಾಗಿ ವಿಶ್ಲೇಷಿಸಿದ ಪ್ರೊಫೆಸರ್ ಎ.ಆರ್.ಕೃಷ್ಣಶಾಸ್ತ್ರಿಗಳು ಸಹ ತಾವು ಪಿತೃಕರ್ಮಗಳನ್ನು ಶ್ರದ್ಧೆಯಿಂದ ಆಚರಿಸಿದರೂ ತಮ್ಮನಂತರ ತಮಗೆ ಅಂತಹದೇನನ್ನೂ ಮಾಡಕೂಡದೆಂದು ಬರೆದರು.

ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಮಾರುಹೋಗಿದ್ದ ಜವಾಹರ್‌ಲಾಲ್ ನೆಹರುರವರು ತಮ್ಮ ಪತ್ನಿ ಕಮಲಾ ನೆಹರುರವರ ಚಿತಾಭಸ್ಮವಿದ್ದ ಸಣ್ಣ ಕರಂಡಕವೊಂದನ್ನು ಕೊನೆಯವರೆವಿಗೂ ತಮ್ಮ ಮೇಜಿನ ಮೇಲಿರಿಸಿಕೊಂಡಿದ್ದರು. ಇದು ಭಾವನಾತ್ಮಕ ಕ್ರಿಯೆ. ಅವರು ತಮ್ಮ ಚಿತಾಭಸ್ಮವನ್ನು ವಿಮಾನದಿಂದ ಭಾರತಾದ್ಯಂತ ಚೆಲ್ಲಬೇಕೆಂದೂ ಬರೆದಿದ್ದರು. ಇಲ್ಲಿ ನಂಬಿಕೆಗಳ ಪ್ರಶ್ನೆ ಬರುವುದಿಲ್ಲ.

ಎಲ್ಲ ಸಂಪ್ರದಾಯಗಳ ವಿರುದ್ಧ ಎಲ್ಲ ವ್ಯವಸ್ಥಿತ ಧರ್ಮಗಳ ವಿರುದ್ಧ ಬಂಡೆದ್ದ ಜೆ. ಕೃಷ್ಣಮೂರ್ತಿಯವರು ತಮ್ಮ ಚಿತಾಭಸ್ಮದ ಒಂದು ಭಾಗ ಕಾಶಿಯಲ್ಲಿ ಗಂಗಾನದಿಯಲ್ಲೂ, ಇನ್ನೊಂದು ಭಾಗ ಸಮುದ್ರದಲ್ಲೂ, ಉಳಿದೊಂದು ಭಾಗ ಹಿಮಾಲಯದಲ್ಲೂ ವಿಸರ್ಜಿತವಾಗಬೇಕೆಂದು ಬರೆದರು. ಅವರು ವಿಶ್ವಮಾನವನಾಗಿದ್ದರೂ ಕೊನೆಯಲ್ಲಿ ತಮ್ಮ ಭಾರತೀಯತೆಯನ್ನು ಮರೆಯಲಾಗಲಿಲ್ಲ.

ವಿಚಾರವಾದಿ ಡಾಕ್ಟರ್ ಎಚ್.ನರಸಿಂಹಯ್ಯನವರು ತಮ್ಮ ಚಿತಾಭಸ್ಮವನ್ನು ನೆಲದಲ್ಲಿ ಹಾಕಿ ಅದರ ಮೇಲೊಂದು ವೃಕ್ಷ ಬೆಳೆಸಬೇಕೆಂದು ಬರೆದರು. ಅವರಿಗೂ ತಮ್ಮ ಚಿತಾಭಸ್ಮವನ್ನು ಕೇವಲ ಕಾರ್ಬನ್, ನೈಟ್ರೋಜನ್ ಇತ್ಯಾದಿ ಧಾತುಗಳ ಮಿಶ್ರಣ ಮಾತ್ರವೆಂದು ಪರಿಗಣಿಸಲಾಗಲಿಲ್ಲ.

ಆದರೆ ವಿಜ್ಞಾನಿ ಸರ್ ಸಿ.ವಿ.ರಾಮನ್ ತಮ್ಮ ನಿಧನದ ನಂತರ 'ಮಂಬೋಜಂಬೋ' ಏನೂ ಇರಕೂಡದೆಂದು ಬರೆದರು. ರಾಮನ್ ಇನ್‌ಸ್ಟಿಟ್ಯೂಟ್‌ನ ವೃಕ್ಷಗಳು ಮಾತ್ರ ಹಾಗೆಯೇ ಉಳಿಯಬೇಕೆಂದು ಮಾತ್ರ ಬಯಸಿದ್ದರು.

ಮಾಧ್ಯಮ ಅಕಾಡೆಮಿ ಅಧ್ಯಕ್ಷರಾಗಿದ್ದ ಪತ್ರಕರ್ತ ಗರುಡನಗಿರಿ ನಾಗರಾಜ್ ತಮ್ಮ ಅವಸಾನದನಂತರ ತಮ್ಮ ದೇಹ ವೈದ್ಯಕೀಯ ಕಾಲೇಜಿಗೆ ಸೇರಬೇಕೆಂದು ಬಯಸಿದ್ದಾರೆ.

ಒಟ್ಟಿನಲ್ಲಿ ಇಲ್ಲೆಲ್ಲ ಸಂಪ್ರದಾಯಗಳಿಗೆ ಮಿಗಿಲಾಗಿ ಭಾವನೆಗಳಿಗೆ ಒತ್ತು ಇರುವುದನ್ನು ಗಮನಿಸಬಹುದು. ಭಾವನೆಗಳಿಲ್ಲದ ಮನುಷ್ಯನಿಲ್ಲ. ಅನಂತಮೂರ್ತಿ ಸಹ ತಮ್ಮ ಕಡೆಗಾಲದಲ್ಲಿ ತಮ್ಮ ಮೇಲಿನ ಅತ್ಯಂತ ದಟ್ಟ ಪ್ರಭಾವವಾಗಿದ್ದ ಮಧ್ವಮತದಿಂದ ಬೇರೆಯಾಗಿರಕೂಡದೆಂದು ಬಯಸಿದ್ದರೆ ಅದೊಂದು ಭಾವನಾತ್ಮಕ ಸೆಳೆತವೆಂದು ಪರಿಗಣಿಸಬಹುದೇ ವಿನಃ ಇನ್ನೇನೂ ಅಲ್ಲ. ತಮ್ಮ ಅಂತ್ಯಸಂಸ್ಕಾರ ತಮ್ಮ ಹುಟ್ಟೂರಿನಲ್ಲಿ ನಡೆಯಬೇಕೆಂದು ಅವರು ಬಯಸಿದ್ದರು. ಇದಕ್ಕೂ ಅವರ ವಿಚಾರವಾದಕ್ಕೂ ಅಥವಾ ಅವರಲ್ಲಿದ್ದಿರಬಹುದಾದ ಬ್ರಾಹ್ಮಣಿಕೆಗೂ ಸಂಬಂಧ ಕಲ್ಪಿಸುವುದು ಅಸಮಂಜಸವೆನಿಸುತ್ತದೆ. ಆ ಇಷ್ಟಕ್ಕೂ, ಬ್ರಹ್ಮಜ್ಞಾನವನ್ನು ಅಂದರೆ ಅಂತಿಮ ಸತ್ಯವನ್ನು ಅರಸುವವನು ಬ್ರಾಹ್ಮಣ. ಆ ದೃಷ್ಟಿಯಿಂದ ಅನಂತಮೂರ್ತಿ ಮಹಾಬ್ರಾಹ್ಮಣರೇ ಆಗಿದ್ದರು. ಅಂತಹವರು ಏನೇ ಮಾಡಿದರೂ ಕೇವಲ ಸಂಪ್ರದಾಯನಿಷ್ಠ ವೈದಿಕ ಪರಂಪರೆಯಿಂದ ಎಂದಿಗೂ ಮುಕ್ತರೇ.

■ ಸಿ. ಸೀತಾರಾಮ್, ಬೆಂಗಳೂರು

ನಾಗಮಂಗಲ

ಡಿವೈಎಸ್ಪಿ ಸವಿತಾ ಎತ್ತಂಗಡಿಗೆ ಮರಳು ಮಾಫಿಯಾ ಸ್ಕೆಚ್


ಮಂಡ್ಯ ಜಿಲ್ಲೆಯ ಸದಾ ಬರಪೀಡಿತ ತಾಲ್ಲೂಕೆಂದೇ ಖ್ಯಾತಿಯಾದ ನಾಗಮಂಗಲದಲ್ಲಿ ಅಕ್ರಮ ಮರಳುಗಾರಿಕೆ ಹಾಗೂ ಕಲ್ಲುಗಣಿಗಾರಿಕೆ ಎಗ್ಗಿಲ್ಲದೆ ನಡೆಯುತ್ತಿದೆ. ಇವೆರಡೂ ದಂಧೆಗಳು ಅವ್ಯಾಹತವಾಗಿ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ, ಲೋಕೋಪಯೋಗಿ ಇಲಾಖೆ, ತಾಲ್ಲೂಕು ಆಡಳಿತ ಕಣ್ಮುಚ್ಚಿ ಕುಳಿತಿದೆ. ಮರಳು ಹಾಗೂ ಕಲ್ಲು ಮಾಫಿಯಾದ ಡಾನ್‌ಗಳು ಕೊಟ್ಟ ಭರ್ಜರಿ ತಾಂಬೂಲವನ್ನು ಬಾಯಿಗಿಟ್ಟುಕೊಂಡು ಮೆಲ್ಲುತ್ತಾ ತಮಗೇನೂ ಗೊತ್ತೇ ಇಲ್ಲದಂತೆ ಪೊಲೀಸರು ಹಾಗೂ ಅಧಿಕಾರಿಗಳು ನಿಷ್ಕ್ರಿಯರಾಗಿದ್ದಾರೆ. ಮರಳು ಮಾಫಿಯಾದ ಹೊಡೆತಕ್ಕೆ ಕೆರೆ-ಕಟ್ಟೆ, ಹಳ್ಳ-ಕೊಳ್ಳ ನೀರಿಲ್ಲದೆ ಒಣಗುತ್ತಿದ್ದರೆ, ಅಕ್ರಮ ಕಲ್ಲುಗಣಿಗಾರಿಕೆಯ ಬಗೆತಕ್ಕೆ ಬೆಟ್ಟ-ಗುಡ್ಡಗಳೇ ಕರಗಿಹೋಗುತ್ತಿವೆ.

ಮಾಡಿಸುತ್ತಾ ಎಂದು ಮರಳು ಮಾಫಿಯಾ ಡಾನ್‌ಗಳ ಪಕ್ಕ ಕೂತು ಗೋಳಾಡುತ್ತಿದ್ದಾರೆ.

ಅಕ್ರಮ ಮರಳು ಸಾಗಾಣಿಕೆಯ ಅಬ್ಬರ

ಕಳೆದ 10-12 ವರ್ಷಗಳಿಂದ ನಾಗಮಂಗಲ ತಾಲ್ಲೂಕಿನಲ್ಲಿ ಮರಳು ಗಣಿಗಾರಿಕೆ ನಡೆಯುತ್ತಿದೆ. ಅಕ್ರಮ ಮರಳಿನಲ್ಲಿ ಶೇ.90ರಷ್ಟು ಭಾಗ ಬೆಂಗಳೂರಿಗೆ ಹೋಗುತ್ತದೆ. ಬೆಂಗಳೂರಿನಲ್ಲಿ ಒಂದು ಲಾರಿ ಲೋಡ್‌ಗೆ 30ರಿಂದ 35 ಸಾವಿರ ಹಣ ಸಿಗುವುದರಿಂದ ಮರಳು ದಂಧೆಕೋರರು ತಾಲ್ಲೂಕಿನ ಕೆರೆ-ಕಟ್ಟೆ, ಹಳ್ಳ-ಕೊಳ್ಳಗಳಲ್ಲಿ ಒಂಚೂರು ಮರಳು ಬಿಡದಂತೆ ಬಗೆದು ಬಿಟ್ಟಿದ್ದಾರೆ. ಉತ್ತಮ ಗುಣಮಟ್ಟದ ಮರಳು ಸಿಗುವುದು ಕಡಿಮೆಯಾದ ನಂತರ ಅವರು





ಆರೋಪಿಗಳಾದ ಮಧು- ಲೋಕೇಶ್

ಹಾಲಿ ಶಾಸಕ ಚಲುವರಾಯಸ್ವಾಮಿ ಹಾಗೂ ಮಾಜಿ ಶಾಸಕ ಸುರೇಶ್‌ಗೌಡರ ರಾಜಕಾರಣಕ್ಕೆ ಅಕ್ರಮ ಮರಳು ಹಾಗೂ ಕಲ್ಲುಗಣಿ ದಂಧೆಕೋರರ ಅಗತ್ಯವಿರುವುದರಿಂದ ಅವರ ಶ್ರೀರಕ್ಷೆಯಲ್ಲಿ ನಾಗಮಂಗಲದಲ್ಲಿ ಪ್ರಾಕೃತಿಕ ಸಂಪತ್ತು ಎರ್ರಾಬಿರ್ರಿ ಲೂಟಿಯಾಗುತ್ತಿದೆ. ಬೋಗಾದಿ, ಕೊರವನಗುಂಡಿ ಗ್ರಾ.ಪಂ. ವ್ಯಾಪ್ತಿಯಲ್ಲೇ ಅತಿ ಹೆಚ್ಚು ಮರಳಿನ ದಂಧೆ ನಡೆಯುತ್ತಿದೆ. ಫಿಲ್ಟರ್ ಮರಳು ದಂಧೆಯ ಕಬಂಧ ಬಾಹುಗಳು ಇಲ್ಲಿ ಅತಿ ಹೆಚ್ಚು, ಅರಕೆರೆ, ಕೆಲಗೆರೆ ಕೆರೆ, ಪಾಲಕೆರೆ, ನಾಗಮಂಗಲಕ್ಕೆ ಕುಡಿಯುವ ನೀರೊದಗಿಸುವ ಸೂಳೆಕೆರೆ ವ್ಯಾಪ್ತಿಯಲ್ಲಿ ಮರಳುಗಾರಿಕೆ ನಡೆಯುತ್ತಿದೆ. ಬೆಳ್ಳೂರು ಹೋಬಳಿ ವೀರ ವೈಷ್ಣವಿ ನದಿ ಪಾತ್ರದ ಚಿಕ್ಕಜಟಕ, ಕಾಳಿಂಗನಹಳ್ಳಿ, ಮೈಲಾರಪಟ್ಟಣ, ಬಿಂಡಿಗನವಿಲೆ, ಹೊನ್ನಾವರ ಪಂಚಾಯಿತಿ ವ್ಯಾಪ್ತಿ ದೇವಲಾಪುರ ಹೋಬಳಿಯ ಚೊಟ್ಟನಹಳ್ಳಿ, ಗೊಲ್ಲರಹಟ್ಟಿ, ಅರಕೆರೆ ತುಪ್ಪದ ಮಡು, ಕದಬಳ್ಳಿ, ಲಾಳನಕೆರೆ ಪಂಚಾಯಿತಿ ವ್ಯಾಪ್ತಿ ಹೊಣಕೆರೆ ಹೋಬಳಿಯ ಕಳ್ಳಿಗುಂದಿ, ಗಿಡುವಿನಹೊಸಳ್ಳಿ, ಕೆಸುವಿನಕಟ್ಟೆ, ಕೊರವನಗುಂಡಿ, ಚಿಕ್ಕವೀರನ ಕೊಪ್ಪಲು, ದಡಗ, ಕಸಬಾಹೋಬಳಿಯಲ್ಲಿ ಅಕ್ರಮ ಮರಳುಗಾರಿಕೆ ಭರ್ಜರಿಯಾಗಿ ನಡೆಯುತ್ತಿದೆ.

ಡಿವೈಎಸ್ಪಿ ಸವಿತಾ ಎತ್ತಂಗಡಿಗೆ ಸ್ಕೆಚ್

ಉಡುಪಿಯಲ್ಲಿ ಪ್ರೊಬೇಷನರಿ ಅವಧಿ ಮುಗಿಸಿ 20 ದಿನಗಳ ಹಿಂದಷ್ಟೇ ನಾಗಮಂಗಲಕ್ಕೆ ಬಂದಿರುವ ಡಿವೈಎಸ್ಪಿ ಸವಿತಾ ಹೂಗಾರ್ ಇಲ್ಲಿರುವ ಅಕ್ರಮ ಮರಳುಗಾರಿಕೆ ಹಾಗೂ ಕಲ್ಲುಗಣಿಗಾರಿಕೆಯನ್ನು ಮಟ್ಟ ಹಾಕುವ ಕೆಲಸಕ್ಕೆ ಕೈ ಹಾಕಿದ್ದರು. ಮರಳು ಮಾಫಿಯಾದ ಬಗ್ಗೆ ಮಾಹಿತಿ ಕಲೆ ಹಾಕಿದ ಸವಿತಾ ಹೂಗಾರ್ ವಾರದ ಹಿಂದಷ್ಟೇ ಅಕ್ರಮ ಮರಳು ದಂಧೆಯ ಮೇಲೆ ಮುರಕೊಂಡು ಬಿದ್ದಿದ್ದರು. ಡಿವೈಎಸ್ಪಿ ಸವಿತಾ ಕೊಟ್ಟ ಹೊಡೆತಕ್ಕೆ ಮರಳು ಮಾಫಿಯಾದ ಕಿರಾತಕರು ತತ್ತರಿಸಿಹೋಗಿದ್ದರು. ಬಂದ 20 ದಿನಕ್ಕೇ ತಮ್ಮ ಬುಡಕ್ಕೆ ಬೆಂಕಿ ಇಟ್ಟ ಸವಿತಾರ ಮೇಲೆ ಲಾರಿ ಹತ್ತಿಸುವ ಮೂಲಕ ಅವರನ್ನೇ ತಮ್ಮ ದಾರಿಯಿಂದ ಹಿಂದೆ ಸರಿಸಲು ಸ್ಕೆಚ್ ಹಾಕಿದ್ದರೆಂದರೆ ಮರಳು ಮಾಫಿಯಾ ಡಾನ್‌ಗಳ ಅಟ್ಟಹಾಸ ಅದಿನ್ನೆಂತದ್ದಿರಬೇಡ. ಮರಳು 'ಮಾಫಿಯಾದ ಸ್ಕೆಚ್‌ನಿಂದ ಜಸ್ಟ್‌ಮಿಸ್ ಆದ ಸವಿತಾರನ್ನು ಎತ್ತಂಗಡಿ ಮಾಡಿಸಲು ಈಗ ಡಾನ್‌ಗಳು ಸಜ್ಜಾಗಿದ್ದು, ಎಷ್ಟೇ ಖರ್ಚಾದರೂ ಸರಿಯೇ ಎತ್ತಂಗಡಿ ಮಾಡಿಸಿಯೇ ಸಿದ್ಧ ಎಂದು ಅಬ್ಬರಿಸಿ ಬೊಬ್ಬಿರಿಯುತ್ತಿದ್ದಾರೆ. ಮರಳು ಮಾಫಿಯಾದ ಡಾನ್‌ಗಳು ಕೊಟ್ಟ ಎಂಜಲನ್ನೇ ಪ್ರಸಾದ ಎಂದು ಕಣ್ಣಿಗೊತ್ತಿಕೊಂಡಿರುವ ನಾಗಮಂಗಲ ಪೊಲೀಸರು ಮಂತ್ಲಿ ತಪ್ಪಿಹೋಗುವ ಭೀತಿಯಲ್ಲಿ ಹೇಗಾದರೂ ಸರಿ ಆಕೆಯನ್ನು ಎತ್ತಂಗಡಿ

ಕಂಡುಕೊಂಡಿರೋದು ಫಿಲ್ಟರ್ ಮರಳಿನ ದಂಧೆಯನ್ನು. ಮಣ್ಣಿಗೆ ನೀರು ಹಾಕಿ ಜರಡಿ ಹಿಡಿದಾಗ ಬರುವುದೇ ಫಿಲ್ಟರ್ ಮರಳು. ಅತ್ಯಾಧುನಿಕ ಯಂತ್ರಗಳ ಮೂಲಕ ಫಿಲ್ಟರ್ ಮರಳನ್ನು ಬೆಂಗಳೂರಿಗೆ ಸಾಗಿಸಿ ಕೋಟ್ಯಾಂತರ ರೊಕ್ಕ ಬಾಚುತ್ತಿದ್ದಾರೆ. ತಾವು ಕೊಡುವ ಮರಳಿನಿಂದ ಯಾರ ಮನೆ ಬೇಕಾದರೂ ಬಿದ್ದುಹೋಗಲಿ ನಮಗೆ ಹಣ ಸಿಕ್ಕರೆ ಸಾಕು ಎನ್ನುವ ನೀಚರು ಕಾರು-ಬಂಗಲೆ ಎಂದು ಐಷರಾಮಿ ಜೀವನ ನಡೆಸುತ್ತಾ ಗರಿಗರಿ ಬಟ್ಟೆ ಹಾಕಿಕೊಂಡು ರಾಜಕಾರಣಿಗಳ ಗೆಟಪ್ಪಿನಲ್ಲಿ ಶಾಸಕ ಚಲುವರಾಯಸ್ವಾಮಿ ಹಾಗೂ ಮಾಜಿ ಶಾಸಕ ಸುರೇಶ್‌ಗೌಡರ ಹಿಂದೆ ಠಳಾಯಿಸುತ್ತಿದ್ದಾರೆ.

ಮರಳು ಮಾಫಿಯಾದ ಡಾನ್‌ಗಳು

ತಾಲ್ಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಮರಳು ದಂಧೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್‌ನ ನಾಯಕರದ್ದೇ ಕಾರುಬಾರು. ಅವರಿಗೆಲ್ಲಾ ಶಾಸಕ ಚಲುವರಾಯಸ್ವಾಮಿ ಹಾಗೂ ಮಾಜಿ ಶಾಸಕ ಸುರೇಶ್‌ಗೌಡರದ್ದೇ ಕೃಪಾಕಟಾಕ್ಷ. ಹಾಗಾಗಿ ಮರಳು ಲೂಟಿಕೋರರು ಯಾರ ಭಯವೂ ಇಲ್ಲದೆ ಲೂಟಿಯಲ್ಲಿ ತೊಡಗಿದ್ದಾರೆ. ಇನ್ನು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರವೇ ಅಸ್ತಿತ್ವದಲ್ಲಿರುವುದರಿಂದ ಮಾಜಿ ಶಾಸಕ ಸುರೇಶ್‌ಗೌಡನ ಆರ್ಭಟವೂ ಜೋರಾಗಿದೆ.

ತಾಲ್ಲೂಕಿನ ಹೊಣಕೆರೆ ಹೋಬಳಿಯ ಬೋಗಾದಿ, ಕಳ್ಳಿಗುಂದಿ, ಗೊಲ್ಲರಹಳ್ಳಿ ಮತ್ತು ಕೊರವನ ಗುಂಡಿಯಲ್ಲಿ ಫಿಲ್ಟರ್ ಮರಳಿನದ್ದೇ ಅಬ್ಬರ. ಇಲ್ಲಿನ ಹಳ್ಳ-ಕೊಳ್ಳಗಳಲ್ಲಿದ್ದ ಮರಳನ್ನು ಒಂಚೂರು ಬಿಡದೆ ದೋಚಲಾಗಿದೆ. ಕೊರವನಗುಂಡಿ ಗ್ರಾಮದವನೇ ಆದ ಜೆಡಿಎಸ್‌ನ ತಾ.ಪಂ.ಮಾಜಿ ಅಧ್ಯಕ್ಷ, ಹಾಲಿ ಸದಸ್ಯ ದೇವರಾಜು ಮರಳಿನ ದಂಧೆಯಲ್ಲಿ ಸಾಕಷ್ಟು ದುಡಿದಿದ್ದಾನೆ. ಈಗ ತನ್ನ ದಂಧೆಯನ್ನು ತಮ್ಮಂದಿರಿಗೆ ವಹಿಸಿ ಅವರ ರಕ್ಷಕನಾಗಿ ರಾಜಕಾರಣಿಯ ಗೆಟಪ್ಪಿನಲ್ಲಿ ಶಾಸಕ ಚಲುವರಾಯಸ್ವಾಮಿ ಹಿಂದೆ ನಿಂತು ಅಬ್ಬರಿಸುತ್ತಿದ್ದಾನೆ. ದಳದ ಮತ್ತೋರ್ವ ಪುಢಾರಿ ಗೆಜ್ಜೆ ಹೊಸಹಳ್ಳಿ ಲೋಕೇಶ್, ಕಂದಹಳ್ಳಿ ಲೋಕೇಶ್,



ಮಾಚನಾಯಕನಹಳ್ಳಿ ಬೋರೆಗೌಡ ಹಾಗೂ ಆತನ ಅಣ್ಣ ಜಾಕಿಶಿವ ಅಕ್ರಮ ಮರಳು ಸಾಗಾಟದಿಂದ ದಿವಿನಾಗಿಯೇ ದುಡ್ಡು ಮಾಡಿದ್ದಾರೆ.

ಇನ್ನು ಕಾಂಗ್ರೆಸ್ ಪಕ್ಷದ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಬಸವೇಗೌಡನದ್ದೂ ಮರಳು ದಂಧೆಯಲ್ಲಿ ಎತ್ತಿದ ಕೈ. ಸಿಎಂ ಸಿದ್ದರಾಮಯ್ಯನವರ ಜಾತಿಗೆ ಸೇರಿದ್ದನ್ನೇ ನೆಪಮಾಡಿಕೊಂಡು ಮರಳುದಂಧೆಯಲ್ಲಿ ತೊಡಗಿರುವ ಬಸವೇಗೌಡನಿಗೆ ಅಕ್ರಮ ಮರಳು ದಂಧೆಯ ಆಳ-ಅಗಲಗಳೆಲ್ಲ ಗೊತ್ತು. ಪಿಡಬ್ಲ್ಯೂಡಿ, ಅರಣ್ಯ ಇಲಾಖೆ, ಪೊಲೀಸ್ ಇಲಾಖೆ ಹಾಗೂ ತಾಲ್ಲೂಕು ಅಧಿಕಾರಿಗಳಿಗೆ ಮಂತ್ಲಿ ಫಿಕ್ಸ್ ಮಾಡಿಕೊಂಡು ಭರ್ಜರಿ ಮರಳು ದಂಧೆ ನಡೆಸುತ್ತಿರುವ ಬಸವೇಗೌಡ ಇಂದು ಹಲವು ಕೋಟಿಗೆ ತೂಗುತ್ತಾನೆ. ಮರಳುದಂಧೆಯ ಜೊತೆಗೆ ಇಟ್ಟಿಗೆ, ಬಡ್ಡಿ ವ್ಯವಹಾರ ಮಾಡಿಕೊಂಡು ಮತ್ತಷ್ಟು ಆದಾಯದ ದಾರಿ ಕಂಡುಕೊಂಡಿದ್ದಾನೆ. ಮರಳು ದಂಧೆಯಲ್ಲಿರುವ ಹಲವು ಕಾಂಗ್ರೆಸ್ ಮುಖಂಡರು ಸಿಎಂ ಸಿದ್ದರಾಮಯ್ಯನವರ ಹೆಸರು ಹೇಳಿಕೊಂಡೇ ಪೊಲೀಸರಿಗೆ ಟಾರ್ಚರ್ ನೀಡುತ್ತಿದ್ದಾರೆ.

ದೊಡ್ಡ ಜಟಕಾದ ಸತೀಶ್ ಹಾಗೂ ರವೀಂದ್ರನದ್ದೂ ಇ
ಅಕ್ರಮ ಮರಳು ದಂಧೆಯೇ.

ಅಕ್ರಮ ಮರಳುಗಾರಿಕೆಯ ಆರ್ಭಟ

ಕಳೆದ ಎರಡು ವರ್ಷಗಳಿಂದೀಚೆಗೆ ತಾಲ್ಲೂಕಿ
ಅಕ್ರಮ ಮರಳುಗಾರಿಕೆಯ ಆರ್ಭಟ ಸಾಕಷ್ಟು ಜೋರಾಗಿ
ಮರಳುಮಾಫಿಯಾ ತಾಲ್ಲೂಕಿನಲ್ಲಿ ತನ್ನದೇ ಆದ ನೆಟವ
ಹೊಂದಿದೆ. ಪ್ರತಿ ಪೊಲೀಸ್ ಸ್ಟೇಷನ್ ಮುಂದೆಯ
ಒಂದೆರಡು ಇಂಡಿಕಾ ಕಾರು ನಿಂತಿರುತ್ತವೆ. ಮರ
ದಂಧೆಕೋರರೊಂದಿಗೆ ಅಡ್ಜಸ್ಟ್ ಆಗದ ಎಸ್‌ಐ, ಸಿಪಿ
ಡಿವೈಎಸ್ಪಿ ವಾಹನವನ್ನು ಫಾಲೋ ಮಾಡಿ, ಯಾವ
ಹೋಗುತ್ತದೆ ಎಂಬ ಮಾಹಿತಿಯನ್ನು ಮರಳು ಮಾಫಿಯ
ಡಾನ್‌ಗಳಿಗೆ ತಿಳಿಸುವುದೇ ಇಂಡಿಕಾ ಕಾರಿನಲ್ಲಿರುವ
ಕೆಲಸ. ಒಂದು ವೇಳೆ ಪೊಲೀಸರ ವಾಹನ ದಂಧೆ ನಡೆಯು
ಸ್ಥಳಗಳಿಗೆ ಹೋಗುವ ಸೂಚನೆ ಸಿಗುತ್ತಿದ್ದಂತೆ ದಂಧೆಕೋರ
ಮಾಹಿತಿ ತಿಳಿಸಿ ಅವರೆಲ್ಲಾ ಅಲ್ಲಿಂದ ತಪ್ಪಿಸಿಕೊಳ್ಳುವ
ಮಾಡಲಾಗುತ್ತದೆ.

ಇನ್ನು ಮರಳು ದಂಧೆಕೋರರಿಗೆ ಪೊಲೀ
ಇಲಾಖೆಯಲ್ಲೇ ಹಲವು ಮಂದಿ ಸ್ನೇಹಿತರಿದ್ದಾರೆ. ಮರ
ಮಾಫಿಯಾದ ಡಾನ್‌ಗಳು ಕೊಟ್ಟ ಪ್ರಸಾದಕ್ಕೆ ನಿಯತ್ತಾಗಿರು
ಇವರು ದಾಳಿಗೂ ಮುನ್ನವೇ ಮಾಹಿತಿ ನಿ
ದಂಧೆಕೋರರು ತಪ್ಪಿಸಿಕೊಳ್ಳುವಂತೆ ಮಾಡಿ ಖ

ತೀರಿಸುತ್ತಾರೆ. ಒಟ್ಟಾರೆ ಮರಳು ಮಾಫಿಯಾ ತನ್ನ
ಆದ ಭರ್ಜರಿ ನೆಟ್‌ವರ್ಕ್ ಮಾಡಿಕೊಂಡಿದ್ದು ಪೊಲೀ
ಇಲಾಖೆ, ಲೋಕೋಪಯೋಗಿ ಇಲಾಖೆ, ಅರಣ್ಯ ಇಲಾ
ಕಂದಾಯ ಇಲಾಖೆ ಎಲ್ಲವೂ ನಿಷ್ಕ್ರಿಯವಾಗಿದೆಯೆಂ
ಹೇಳಬಹುದು.

ಅಕ್ರಮ ಮರಳುಗಾರಿಕೆ ನಡೆಸುವವರ ಜೊತ
ಚೆನ್ನಾಗಿದ್ದರಷ್ಟೇ ಪೊಲೀಸರಿಗೆ ಕ್ಷೇಮ. ಇಲ್ಲದಿದ್ದರೆ ಅವರ
ಬಗ್ಗಿಸುವ ಕೆಲಸ ಮಾಡಲಾಗುತ್ತದೆ. ಹಿಂದೆ ಸರ್ಕ
ಇನ್ಸ್‌ಪೆಕ್ಟರ್ ಆಗಿದ್ದ ಟಿ.ಡಿ.ರಾಜು ಫಿಲ್ಟರ್ ದಂಧೆ ನಡೆಯು
ಬೋಗಾದಿಗೆ ದಾಳಿ ಮಾಡಿದ್ದರು. ಸುತ್ತಲೂ ದಟ್ಟವಾ
ಮರಗಳಿಂದ ಆವೃತ್ತವಾಗಿರುವ ಬೋಗಾದಿ ಎಂಬ
ನಡೆಯುವ ಫಿಲ್ಟರ್ ಮರಳಿನ ದಂಧೆ ಜಾಗಕ್ಕೆ ಅ
ಸುಲಭವಾಗಿ ಪೊಲೀಸರು ಎಂಟ್ರಿಯಾಗಲು ಸಾಧ್ಯವಿ
ಆದರೂ ಸಿಪಿಐ ಟಿ.ಡಿ.ರಾಜು ಮರಳಿನ ಅಡ್ಡೆಗೆ ನುಗ್ಗಿದ್ದ
ಅಲ್ಲಿಂದ ದಂಧೆಕೋರರು ಟಿ.ಡಿ.ರಾಜುಗೆ ಹೆದರದೆ ಅ
ಮೇಲೆ ಹಲ್ಲೆ ನಡೆಸಲು ಮುಂದಾದರು. ಕಡೆಗೆ ಟಿ.ಡಿ.ರಾ
ಗನ್ ತೋರಿಸಿ ಅಲ್ಲಿಂದ ಹೊರಬರಬೇಕಾಗಿತ್ತು. ಇನ್ನೊ










ಬಿಂಡಿಗನವಿಲೆ ಪೊಲೀಸರು ದಾಳಿ ಮಾಡಿದ
ದಂಧೆಕೋರರು ಪೊಲೀಸರನ್ನೇ ಬೆದರಿಸಿ ಓಡಿಸಿದ್ದರೆಂ
ಅಕ್ರಮ ಮರಳು ಮಾಫಿಯಾ ತಾಲ್ಲೂಕಿನಲ್ಲಿ ಯಾವ
ಬಲಿತಿದೆ ಎಂಬುದು ಗೊತ್ತಾಗುತ್ತದೆ.

ಸವಿತ ಹೂಗಾರ್ ಮೇಲೆ ಅಟ್ಯಾಕ್

ತಾಲ್ಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಮರ
ದಂಧೆಯನ್ನು ಮಟ್ಟಹಾಕಲು ನಿಂತ ಸವಿತ ಹೂಗಾ
ಬಂದ ಪ್ರಾರಂಭದಲ್ಲೇ ಅಕ್ರಮ ಮರಳು ದಂಧೆ ನಡೆಯು
ಹೊಣಕೆರೆ ಹೋಬಳಿಯ ಶೆಟ್ಟಿಹಳ್ಳಿಗೆ ಒಂದು ಬ
ಹಾಗೂ ದೇವಲಾಪುರ ವ್ಯಾಪ್ತಿಯಲ್ಲಿ ಎರಡು ಬಾರಿ ದ



ದಂಧೆಕೋರರಿಗೆ ಹೊಡೆತ ನೀಡಿದ್ದರು. ಇದಾಗಿ ದಿನಗಳಲ್ಲೇ ಅರಕೆರೆ ಬಳಿ ಅಕ್ರಮವಾಗಿ ಮರಳು ಸುತ್ತಿದ್ದ ಯೋಗೇಶ್ ಎಂಬ ದಂಧೆಕೋರನ ಲಾರಿಯನ್ನು ಯಲು ಹೋದಾಗ ಆತನ ಶಿಷ್ಯರಾದ ಡ್ರೈವರ್ ಮಧು ಲೋಕೇಶ್ ಲಾರಿ ನಿಲ್ಲಿಸದೇ ಪರಾರಿಯಾಗಲು ಸಿದ್ದರು. ಸವಿತ ತಮ್ಮ ಕಾರಿನಲ್ಲಿ ಅವರನ್ನು ಬೆನ್ನಟ್ಟಿದಾಗ ಯಿಂದ ಪೊಲೀಸ್ ಕಾರಿಗೇ ಗುದ್ದಿಸಿ ಸವಿತಾರನ್ನು ಮಾಡಲು ಯತ್ನಿಸಿದ್ದರು. ಕೊನೆಗೂ ಲಾರಿ ಮಾಲೀಕ ಗೇಶ್ ಹಾಗೂ ಆತನ ಶಿಷ್ಯ ಮಧು, ಲೋಕೇಶ್ ರೌಡಿ ಶೀಟ್ ತೆರೆದು ಜೈಲಿಗೆ ಗದುಮುವ ಲಕ ಮರಳು ಮಾಫಿಯಾ ಡಾನ್‌ಗಳಿಗೆ ಎಚ್ಚರಿಕೆ ದ್ದಾರೆ.

ಡಿವೈಎಸ್ಪಿ ಮೇಲೆ ನಡೆದ ಹತ್ಯೆ ಯತ್ನದ ನಂತರ ಸೂರು ದಕ್ಷಿಣ ವಲಯ ಐಜಿಪಿ ಬಿಜಯ್‌ಕುಮಾರ್ ಹಾಗೂ ಎಸ್ಪಿ ಭೂಷಣ್ ಜಿ.ಬೊರಸೆ ನಾಗಮಂಗಲಕ್ಕೆ ಡಿವೈಎಸ್ಪಿ ಸವಿತಾರಿಗೆ ಧೈರ್ಯ ತುಂಬಿ ಮರಳು ಮಟ್ಟಹಾಕುವಂತೆ ಬೆನ್ನು ತಟ್ಟಿದ್ದಾರೆ. ಆದರೂ ಾರಿಗೆ ತನ್ನ ಕೈಕೆಳಗಿನ ಅಧಿಕಾರಿಗಳೇ ಸಾಥ್ ನೀಡುತ್ತಿಲ್ಲ. ಬೋಗಾದಿಯೊಂದರಲ್ಲೇ ದಿನನಿತ್ಯ 50ರಿಂದ 60 ಗಳು ಬೆಂಗಳೂರು-ಮೈಲಾರಪಟ್ಟಣ ರಸ್ತೆಯ ಮೂಲಕ ಗಳೂರು ಸೇರುತ್ತವೆ. ನಾಗಮಂಗಲದ ಗ್ರಾಮಾಂತರ ಗೂ ಟೌನ್ ಸಿಪಿಐ ಆಫೀಸಿನ ಮುಂಭಾಗ ಹೋಗುವ ಗಳನ್ನು ತಡೆದರೆ ಸಾಕು, ದಿನನಿತ್ಯ ಲಕ್ಷಾಂತರ ಮೌಲ್ಯದ ಮರಳು ಲೂಟಿ ನಿಲ್ಲುತ್ತದೆ. ಡಿವೈಎಸ್ಪಿ ಸವಿತಾರವರು ಕೈ ಕೆಳಗಿನ ಅಧಿಕಾರಿಗಳನ್ನು ನಿರ್ದಾಕ್ಷಿಣ್ಯವಾಗಿ ಕೊಂಡರೂ ದಿನನಿತ್ಯ ಲಕ್ಷಾಂತರ ರೂಗಳ ಅಕ್ರಮ ಳಿನ ಲೂಟಿ ತಪ್ಪುತ್ತದೆ.

ಸರ್ಕಲ್ ಇನ್ಸ್‌ಪೆಕ್ಟರ್ ವಸಂತ್ ಈ ಹಿಂದೆ ಮಂಗಲದಲ್ಲಿ ಪಿಎಸ್‌ಐ ಆಗಿದ್ದಾಗ ಅಕ್ರಮ ಮರಳು ಧೆಕೋರರು ಹಾಗೂ ಕಾನೂನು ಭಕ್ಷಕರ ಮೇಲೆ ಗಿಬಿದ್ದು ಕೇಸು ಹಾಕಿಸಿ ಜೈಲಿಗೆ ಅಟ್ಟಿ ದಕ್ಷ ಅಧಿಕಾರಿ ಸಿದ್ದರು. ಆದರೆ ಈಗ ಅದೇ ದಂಧೆಕೋರರ ಜೊತೆ ಆಗಿ ತಮ್ಮ ಹೆಸರು ಕೆಡಿಸಿಕೊಂಡಿದ್ದಾರೆ ಎಂಬುದಾಗಿ ಲೀಸ್ ಮೂಲಗಳೇ ಹೇಳುತ್ತಿವೆ. ಪ್ರತಿ ರಾತ್ರಿ ಇವರ ಸೆಯ ಮುಂದೆಯೇ ನೂರಾರು ಲಾರಿಗಳಲ್ಲಿ ಅಕ್ರಮ ರಳು ಬೆಂಗಳೂರಿಗೆ ಹೋಗುತ್ತಿದ್ದರೂ ಸುಮ್ಮನಿರುವ ಐ ವಸಂತ್ ಮೇಲೆ ಇಂತ ಗುಮಾನಿ ಮೂಡುವುದರಲ್ಲಿ ಶಯವೇನೂ ಇಲ್ಲ. ಡಿವೈಎಸ್ಪಿ ಸವಿತಾ ಹೂಗಾರ್ ದ ಮೇಲಷ್ಟೆ ಮರಳುಗಳ್ಳರ ಮೇಲೆ ದಾಳಿ ಯುತ್ತದೆಂದರೆ ಅದಕ್ಕೂ ಮುನ್ನ ಗಪ್‌ಚುಪ್ ಇದ್ದವರ ೀಗ್ಯತೆ ಎಂತದ್ದು ಎಂಬುದು ಗೊತ್ತಾಗುತ್ತದೆ.

ಸಿಪಿಐ ವಸಂತ್, ಎಸ್‌ಐಗಳಾದ ಹರೀಶ್‌ಕುಮಾರ್, ರಾಜು ಹಾಗೂ ಬೆಳ್ಳೂರು ಠಾಣೆಯ ಎಸ್‌ಐ ನಿರಂಜನ್ ರಳು ದಂಧೆಕೋರರನ್ನು ಒದ್ದು ಜೈಲಿಗೆ ಕಳುಹಿಸದಿರುವ ದಿಸ ಮರ್ಮ ನಾಗಮಂಗಲದಲ್ಲಿ ಜಗಜ್ಜಾಹೀರಾಗಿದೆ.

ನಾಗಮಂಗಲದಲ್ಲಿ ನಡೆಯುತ್ತಿರುವ ಅಕ್ರಮ ದಂಧೆಯ ರೋಸಿಹೋದ ಜನರೇ ಐಜಿಪಿಗೆ ದೂರು ಕೊಟ್ಟ ತರ ಮಂಡ್ಯ ಡಿವೈಎಸ್ಪಿಯಾಗಿದ್ದ ಶೋಭಾರಾಣಿ ಒಂದು ರಿ ದಾಳಿ ನಡೆಸಿ 25ಕ್ಕೂ ಅಧಿಕ ಲಾರಿಗಳನ್ನು ವಡಿಸಿಕೊಂಡಿದ್ದರು. ಆದರೆ ನಾಗಮಂಗಲ ಪೊಲೀಸರು ರಳು ದಂಧೆಕೋರರನ್ನು ಹಿಡಿಯುವುದಿರಲಿ ಅತ್ತ ಹಾಕಿಯೂ ಮಲಗುವುದಿಲ್ಲ.

ಇದಿಷ್ಟು ಮರಳು ದಂಧೆಕೋರರ ಕಥೆಯಾದರೆ ಲ್ಲೂಕಿನಲ್ಲಿ ನಡೆಯುತ್ತಿರುವ ಅಕ್ರಮ ಕಲ್ಲುಗಣಿಕಾರಿಯದ್ದೇ ಕೊಂದು ಎಪಿಸೋಡ್ ಆಗುತ್ತದೆ. ಅಕ್ರಮ ಮರಳು ಗೂ ಕಲ್ಲುಗಣಿ ದಂಧೆಕೋರರ ಹಿಡಿತದಲ್ಲಿರುವ ಗಮಂಗಲ ತಾಲ್ಲೂಕನ್ನು ಮುಕ್ತಗೊಳಿಸಲು ಎಸ್ಪಿ ಭೂಷಣ್ ಬೊರಸೆ ಕಟ್ಟುನಿಟ್ಟಾಗಿ ನಾಗಮಂಗಲ ಲೀಸರಿಗೆ ಎಚ್ಚರಿಕೆ ನೀಡಬೇಕಾಗಿದೆ. ಡಿವೈಎಸ್ಪಿ ಸವಿತಾ ಹೂಗಾರ್ ಎತ್ತಂಗಡಿಗೆ ವ್ಯವಸ್ಥಿತ ಸಂಚು ನಡೆಯುತ್ತಿದ್ದು ದರ ವಿರುದ್ಧ ನಾಗಮಂಗಲದ ನಾಗರಿಕರು ತಿರುಗಿಬೀಳ ಕಾಗಿದೆ. ಡಿವೈಎಸ್ಪಿ ಸವಿತಾ ಹೂಗಾರ್ ತನ್ನ ಕೈ ಕೆಳಗಿನ ಅಧಿಕಾರಿಗಳನ್ನು ಹತೋಟಿಗೆ ತೆಗೆದುಕೊಂಡು ಅಕ್ರಮ ಮರಳು ಹಾಗೂ ಕಲ್ಲುಗಣಿಗಾರಿಕೆಯ ಮೇಲೆ ಬೀಳದಿದ್ದರೆ ಸೃಷ್ಟಿಕ ಸಂಪತ್ತಿನ ಲೂಟಿಯಿಂದಾಗಿ ನಾಗಮಂಗಲ ಶೀಘ್ರವಾಗಿ ಬರಪೀಡಿತ ತಾಲ್ಲೂಕಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

■ ಮಂಡ್ಯ ನಾಗೇಶ್

ಬ್ರಾಹ್ಮಣರು ಸರಿಹೋದರೆ ದೇಶವೇ ಸರಿಹೋದಂತೆ!

ಥೂತ್ತೇರಿ

ಯಾಹೂ

'ಬ್ರಾಹ್ಮಣರೆಲ್ಲ ಒಳ್ಳೆಯವರಾದರೆ ಎಷ್ಟು ಚೆನ್ನಾಗಿರುತ್ತದೆ" ಎಂದು ಅದ್ಯಾವನೋ ಜಾತಿ ಸಾಹಿತಿ ಹೇಳಿದ ಮಾತು ಕುವೆಂಪು ವಿಶ್ವವಿದ್ಯಾನಿಲಯದ ಬ್ರಾಹ್ಮಣ ವಿದ್ವಾಂಸರಿಗೆ ತಲುಪಿದೆಯಂತಲ್ಲಾ. ಇದನ್ನು ಕೇಳಿ ಕೆಂಡಾಮಂಡಲವಾದ ವಿಪ್ರೋತ್ತಮರು ಕೂಡಲೇ ಬ್ರಾಹ್ಮಣರೇ ತುಂಬಿರುವ ಪತ್ರಿಕೆಗೆ ಲೇಖನ ಬರೆದು ತಮ್ಮಲ್ಲಿರುವ ಒಳ್ಳೆಯವರ ಪರಸಂಟೇಜ್ ನೀಡಿದ್ದಾರಂತಲ್ಲಾ. "ಸದರಿ ಬ್ರಾಹ್ಮಣದ್ವೇಷಿಯ ವ್ಯಾಖ್ಯಾನದ ಪ್ರಕಾರ ದೆಹಲಿ ಆಳಿದ ಮುಸ್ಲಿಂ ದೊರೆಗಳ ಆಸ್ಥಾನದಲ್ಲಿದ್ದವರಲ್ಲಿ ಬಹಳ ಜನ ಬ್ರಾಹ್ಮಣರೆ. ಟಿಪ್ಪು ಸುಲ್ತಾನನ ಮಂತ್ರಿ ಮಂಡಲದಲ್ಲಿ ಇದ್ದವರೆಲ್ಲಾ ಅವರೆ. ನೆಪಕ್ಕೆ ಮೂರು ಜನ ಸಾಬರಿದ್ದರು ಅಷ್ಟೆ. ಆದರೂ ಇಂದು ಮುಸ್ಲಿಂ ದ್ವೇಷಿ ಚೆಡ್ಡಿಗಳಲ್ಲಿ ಬ್ರಾಹ್ಮಣರೇ ಹೆಚ್ಚು. ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ ಎಂದು ಹೇಳಿದ ಕುವೆಂಪುರವರನ್ನೆ ದೇಶಬಿಟ್ಟು ಹೋಗಿ ಎಂದ ಪುರೋಹಿತ ಶಾಹಿಗಳೆಲ್ಲಾ ಬ್ರಾಹ್ಮಣರೇ ಆಗಿದ್ದರು. ಈ ಆಧುನಿಕ ತಂತ್ರಜ್ಞಾನದ ಆವಿಷ್ಕಾರದ ಯುಗದಲ್ಲಿ ಬೆಳಗಾಯ್ತೆಂದರೆ ಟಿವಿಯಲ್ಲಿ ಕುಳಿತು ಮಾತನಾಡುವ ಫ್ಯಾನ್ಸಿ ಡ್ರೆಸ್ಸಿನ ಭವಿಷ್ಯರೆಲ್ಲಾ ಬ್ರಾಹ್ಮಣರೆ. ಇವರ ಗುರುವಾದ ಪೇಜಾವರ ಬ್ರಾಹ್ಮಣ. ಜೊತೆಗೆ ಅವರ ಮಠದಲ್ಲಿ ಸಹಪಂಕ್ತಿ ಭೋಜನ ವಿಲ್ಲ. ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಡೆಸ್ನಾನ ಆರೇಂಜು ಮಾಡುವವರೆಲ್ಲಾ ಬ್ರಾಹ್ಮಣರೆ. ಸಿಗಂದೂರು ದೇವಿ ಬಗ್ಗೆ ಸುಳ್ಳು ಸುದ್ದಿ ಹರಡಿ ಹುಂಡಿ ತುಂಬಿಸಿ ಕೊಳ್ಳುತ್ತಿರುವವರೆಲ್ಲಾ ಬ್ರಾಹ್ಮಣರೆ. ಇತ್ತೀಚೆಗೆ ಸನ್ಯಾಸಿಗಳ ಲೋಕವೇ ಬೆಚ್ಚಿ ಬೀಳುವಂತಹ ಕೃತ್ಯವೆಸಗಿರುವ ರಾಘವೇಶ್ವರ ಸ್ವಾಮಿಯೂ ಬ್ರಾಹ್ಮಣರೆ" ಎಂದರಂತಲ್ಲಾ. ಅಚ್ಚರಿ ಎಂದರೆ ಬ್ರಾಹ್ಮಣರು ಒಳ್ಳೆಯವರಾಗಬೇಕೆಂದ ಕೂಡಲೇ ಸಿಟ್ಟು ಮಾಡಿಕೊಂಡಿರುವ ವಿದ್ವಾಂಸರ ಕುಲ ಶೋಧಿಸಿದರೆ, ಅವರೂ ಕೂಡ ರಾಘವನ ಸಂಬಂಧಿಯಾಗಬಹುದಂತಲ್ಲಾ, ಥೂತ್ತೇರಿ!

****

ಈ ಸಮಾಜದ ಅನಿಷ್ಟಗಳಿಗೆಲ್ಲಾ ಬ್ರಾಹ್ಮಣರೇ ಕಾರಣ ಎಂಬುದು ಎಷ್ಟು ಸರಿ ಎಂಬ ವ್ಯಾಖ್ಯಾನಕ್ಕೆ ನಮ್ಮ ದನಿಯೂ ಸೇರುತ್ತದೆ. ಕಾರಣ ನೀವಲ್ಲ. ಆದರೆ ನೀವೇ ಕಾರಣ ವೆಂಬುದಕ್ಕೆ ಇತಿಹಾಸದಲ್ಲಿ ದಾಖಲೆಗಳೇ ನಮಗೆ ಸಿಗುತ್ತವೆ. ಬ್ರಾಹ್ಮಣರು ದ್ವೇಷ ಮಾಡಿದ ಅನಂತಮೂರ್ತಿಯವರು ಹೇಳಿದಂತೆ "ಜಾತಿವಾದಿಯಾಗಿ ಜಾತಿಯ ಅನಿಷ್ಟಗಳ ಬಗ್ಗೆ ಮಾತನಾಡುವ ಹಕ್ಕು ದಲಿತನಿಗೆ ನೂರು ಪರಸೆಂಟಿದ್ದರೆ, ಬ್ರಾಹ್ಮಣನಿಗೆ ಒಂದು ಪರಸೆಂಟೂ ಇಲ್ಲ." ಇನ್ನುಳಿದ ಶ್ರೇಣೀಕರಣದ ಜಾತಿಗಳಿಗೆ ಅವರ ಶ್ರೇಣಿಗಳಂತೆ ಪರಸೆಂಟೇಜುಗಳೂ ಇವೆಯಂತಲ್ಲಾ. ಹಾಗೆಯೇ ನೀವಿರುವ ಪರಸಂಟೇಜಿಗೆ ಒಳ್ಳೆಯವರನ್ನ ಆಯ್ದು ಗುಡ್ಡೆ ಹಾಕಿದ್ದಾದರೆ, ಕಪಟ ಬ್ರಾಹ್ಮಣರ ಪರಸಂಟೇಜು ಉಳಿದ ಜಾತಿಗಳಿಗೆ ಹೋಲಿಸಿದರೆ ಬೆಚ್ಚಿ ಬೀಳಿಸುವಂತಿದೆಯಂತಲ್ಲಾ. ಎಲ್ಲ ಜಾತಿಗಳಂತೆ ನಮ್ಮಲ್ಲೂ ಎಲ್ಲಾ ವೆರೈಟಿ ಜನಗಳೂ ಇದ್ದಾರೆ ಎನ್ನುವಂತಿಲ್ಲಾ. ಶತಮಾನಗಳಿಂದ ನೀವೇ ಹೇಳಿಕೊಂಡು ಬಂದಂತೆ ಎಲ್ಲಾ ಜಾತಿಗಿಂತ ನೀವು ಶ್ರೇಷ್ಠರು. ದೇವರ ತಲೆಯಿಂದ ಬಂದವರು. ಆದ್ದರಿಂದ ನಿಮ್ಮ ವೃತ್ತಿ ಶ್ರೇಷ್ಠವಾದ ವೃತ್ತಿ. ಅದಕ್ಕೇ ಶ್ರೇಷ್ಠಜಾತಿಯಾದ ನೀವು ಕನಿಷ್ಠ ಬಾಳಿಗೆ ತೊಡಗಿದ್ದೀರಿ. ವಂಚಕರಾಗಿದ್ದೀರಿ. ಸಾಮಾನ್ಯನ ಮೆದುಳಿಗೆ ಮೂಢನಂಬಿಕೆ ತುಂಬುವವರಾಗಿದ್ದೀರಿ. ಇದೆಲ್ಲವನ್ನು ಬಿಟ್ಟು, ಬಸವಣ್ಣ ಹೇಳಿದಂತೆ ಅಂತರಂಗ ಶುದ್ಧರಾಗಿರಿ. ಆಗ ಬಹಿರಂಗ ತಾನೇತಾನಾಗಿ ಶುದ್ಧಿಗೊಳ್ಳುತ್ತದೆ. ಅಂದರೆ ನೀವು ಒಳ್ಳೆಯವರಾದರೆ ಈ ದೇಶಕ್ಕೂ ಒಳ್ಳೆಯದಾಗುತ್ತದೆ. ಈ ಅರ್ಥದಲ್ಲೇ ಬ್ರಾಹ್ಮಣರು ಒಳ್ಳೆಯ ವರಾದರೆ ಭೂಲೋಕಕ್ಕೂ ಒಳ್ಳೆಯದಾಗುತ್ತದೆಂದು ಬ್ರಾಹ್ಮಣ ಜಾತಿ ದ್ವೇಷಿಸದವರ ವ್ಯಾಖ್ಯಾನವಾಗಿದೆಯಂತಲ್ಲಾ, ಥೂತ್ತೇರಿ!!!

****

ಬೆಲ್ಜಿಯಂನಲ್ಲಿ ಕುಳಿತು ಭಾರತದ ಬ್ರಾಹ್ಮಣರ ಬಗ್ಗೆ ಯೋಚಿಸಿ, ತನ್ನ ವಿಶಿಷ್ಟ ಸಂಶೋಧನೆಯ ಲಹರಿಯನ್ನು ಹರಿಬಿಡುವ ಬಾಲಗಂಗಾಧರನಿಗೆ ತಲೆಯೊಪ್ಪಿಸಿದ ಕುವೆಂಪು ವಿ.ವಿ.ಯ ಕೆಲ ವಿದ್ವಾಂಸರು "ಜಾತಿಗಳನ್ನು ನಿರಾಕರಿಸಿದ್ದೇವೆ" ಎಂದು ಹೇಳುತ್ತಲೇ ಬ್ರಾಹ್ಮಣರನ್ನು ಟೀಕಿಸಿದ ಕೂಡಲೇ ಸಿಟ್ಟು ಮಾಡಿಕೊಳ್ಳುವುದೆಂದರೆ ತಾವಿನ್ನೂ ಬ್ರಾಹ್ಮಣ್ಯವನ್ನು ಬಿಟ್ಟಿಲ್ಲ ಎಂದರ್ಥವಲ್ಲವೆ. "ಅನಂತಮೂರ್ತಿಯವರು ಎಷ್ಟೇ ಬ್ರಾಹ್ಮಣ್ಯವನ್ನು ಜರಿದು ಭಾಷಣ ಮಾಡಿ, ಕೃತಿಗಳನ್ನು ಬರೆದರೂ ಕೂಡ ಅವರ ಸಮಕಾಲೀನ ಬರಹಗಾರರೆಲ್ಲಾ 'ಜಾಣ ಬ್ರಾಹ್ಮಣ', 'ಚಾಣಾಕ್ಯ ಬ್ರಾಹ್ಮಣ' ಎಂದು ವ್ಯಾಖ್ಯಾನಿಸಿದ ಇತಿಹಾಸ ನಮ್ಮ ಮುಂದಿರುವಾಗ, ನಾವ್ಯಾಕೆ ಬ್ರಾಹ್ಮಣ್ಯ ಬಿಡಬೇಕು? ಅಂತಹ ಅನಿವಾರ್ಯತೆ ನಮಗೇನು ಬಂದಿದೆ? ನಾವು ಬ್ರಾಹ್ಮಣರಾಗಿ ಹುಟ್ಟಿದ್ದೇವೆ. ಹಾಗೇ ಬದುಕುತ್ತೇವೆ. ಹಾಗೆಯೇ ಸಾಯುತ್ತೇವೆ ಎಂಬ ತೀರ್ಮಾನಕ್ಕೆ ಬರುತ್ತಿರುವ ಸದರಿ ವಿದ್ವಾಂಸರ ಆತ್ಮಹತ್ಯಾತ್ಮಕ ನಿರ್ಧಾರವನ್ನು ಗೌರವಿಸಿ, ಸಂತಾಪ ಸಭೆ ನಡೆಸಿ, ನಮ್ಮ ಎಂದಿನ ಜಾತ್ಯತೀತ ಜಗಳವನ್ನು ಮುಂದುವರಿಸೋಣ" ಎಂದು ಕುವೆಂಪು ವಿ.ವಿ. ವಿದ್ವಾಂಸರನ್ನು ಕೆಣಕಿದ ಸಾಹಿತಿಗಳ ತೀರ್ಮಾನವಾಗಿದೆಯಂತಲ್ಲಾ, ಥೂತ್ತೇರಿ!!

****

ಹಾಗೆ ನೋಡಿದರೆ ದೇಶದಲ್ಲಿ ಅರೆಬರೆ ಚೆಡ್ಡಿಗಳಂತೆ ವರ್ತಿಸುತ್ತಿದ್ದವರು ಪೂರ್ಣ ಚೆಡ್ಡಿಗಳಾಗಿರುವುದು; ಹಾಗೆಯೇ ಬ್ರಾಹ್ಮಣ್ಯವನ್ನು ಟೀಕಿಸುತ್ತ ಶೂದ್ರರ ಮೆಚ್ಚುಗೆ ಪಡೆಯುತ್ತಿದ್ದ ಬ್ರಾ ಲೇಖಕರೆಲ್ಲಾ ಪೂರ್ಣ ಪುರೋಹಿತಶಾಹಿ ಲೇಖಕರಾಗಿ ಚರ್ಮದೊಳಗಿನ ಜನಿವಾರ ತೆಗೆದು ಚರ್ಮದ ಮೇಲೆಯೇ ಹಾಕಿಕೊಂಡಿರುವುದು ಮೋದಿ ದೆಹಲಿ ಗದ್ದುಗೆ ಹಿಡಿದನಂತರ ಎದ್ದು ಕಾಣುತ್ತಿದೆಯಂತಲ್ಲಾ, ಆದರೇನು ಮಾಡುವುದು, ಇಳಿಹೊತ್ತಿನಲ್ಲಿ ಖಾಕಿ ಚೆಡ್ಡಿ ತೊಟ್ಟು ಬಿದಿರುದೊಣ್ಣೆ ಹಿಡಿದು ಕಂಡವರ ಜಾಗದಲ್ಲಿ ಕವಾಯತು ನಡೆಸಲು ಬ್ರಾಹ್ಮಣರ ಹುಡುಗರು ಬರುತ್ತಿಲ್ಲವಂತೆ. ಅವೆಲ್ಲಾ ಇಂಟರ್‌ನೆಟ್ ತೆರೆದುಕೊಂಡು ಪ್ರಪಂಚದ ಸಾಬರು ಏನು ಮಾಡುತ್ತಿದ್ದಾರೆ, ಲವ್ ಜೆಹಾದ್‌ನಲ್ಲಿ ಯಾವ ಜಾತಿ ಹುಡುಗಿಯರಿದ್ದಾರೆ, ಜಗತ್ತಿನ ಯಾವ ಸಾಹಿತ್ಯದಲ್ಲಿ ಮುಸ್ಲಿಮರ ಅನಾಹುತ ಕುರಿತ ಲೇಖನಗಳಿವೆ ಎಂದು ಹುಡುಕುತ್ತ, ಬಿಡುವು ಸಿಕ್ಕಾಗ ನೀಲಿಚಿತ್ರ ನೋಡುತ್ತ ಕುಳಿತುಬಿಟ್ಟವೆಯಂತಲ್ಲಾ. ಇದರಿಂದೆಲ್ಲ ಹಿರಿಯ ಚೆಡ್ಡಿವೀರರು ನಿರಾಶೆಗೊಳ್ಳದೆ ತಮ್ಮ ಮೂಲ ಅಜೆಂಡಾದಂತೆ ಮಕ್ಕಳ ಮನಸ್ಸನ್ನು ಮತೀಯವಾಗಿ ಬದಲಿಸುವ ಹಠದಿಂದ ಸ್ಲಂ ಹುಡುಗರಿಗೆ ಚಟ ಹತ್ತಿಸುವಂತಹ ಚಾಕಲೇಟ್ ಕೊಟ್ಟು, ಆಟ ಆಡಿಸುತ್ತ, ಮುಸ್ಲಿಂ ವಿರೋಧಿ ಬೀಜ ಬಿತ್ತುವುದರ ಜೊತೆಗೆ, ಮೋದಿ ಮಂತ್ರವನ್ನು ಹೇಳಿಕೊಡುತ್ತಿದ್ದಾರಂತಲ್ಲಾ, ಥೂತ್ತೇರಿ!!! ■



ಕುಲಗುರುಗಳು "ಕುಲೆ" ಗುರುಗಳಾಗಿದ್ದಾರೆ



ಶಿವಮೊಗ್ಗ ಜಿಲ್ಲೆಯ ಒಬ್ಬ ಆಯುರ್ವೇದ ಪಂಡಿತ ಸಂಸಾರಿಯಾಗಿದ್ದರೂ ಕಾವಿ ತೊಟ್ಟು ಉಡುಪಿಗೆ ವಲಸೆ ಬಂದು ಈಗ ತಾನು ಬಂಟ (ನಾಡವ) ಜನಾಂಗಕ್ಕೆ ಕುಲಗುರು ಎಂದು ತಾನೇ ಘೋಷಿಸಿಕೊಳ್ಳುವ ಪ್ರಯತ್ನ ನಡೆಸುತ್ತಿದ್ದಾನೆ. ಹಾಗಾಗಿ ಕರಾವಳಿಯ ಬಂಟ/ ನಾಡವ ಜನಾಂಗಕ್ಕೆ ಕುಲಗುರು ಬೇಕೋ ಬೇಡವೋ ಎನ್ನುವ ವಿವಾದ ಬಿಸಿಯೇರುತ್ತಿದೆ.

ಈ ಜನಾಂಗದ ಬಹುಸಂಖ್ಯಾತ ಜನರು ಕುಲಗುರು ಅವಶ್ಯಕತೆ ಇಲ್ಲವೆಂದರೂ ಕೆಲವರು ಕುಲಗುರು ಅಥವಾ ಕಾವಿಧಾರಿಗಳಾಗಿ ಆಶ್ರಮ ಸ್ಥಾಪಿಸಲು ಆತುರದಲ್ಲಿರುವುದಕ್ಕೆ ಮೂಲಕಾರಣ ಈ ಜನಾಂಗದ ಧನಿಕರಲ್ಲಿ ಸ್ವಾಮೀಜಿಗಳ ಮತ್ತು ಪುರೋಹಿತರ ಕಾಲಿಗೆ ಕಣ್ಣು ಮುಚ್ಚಿ ದಂಡಿಯಾಗಿ ಕಪ್ಪು ಹಣ ಸುರಿಯುವ ಪ್ರವೃತ್ತಿ.

ಬಂಟರು ಮುಂಬೈ, ಪುಣೆ, ಬೆಂಗಳೂರು, ಕೊಲ್ಲಿ ದೇಶಗಳಿಗೆ ವಲಸೆ ಹೋಗಿ ಅಲ್ಲಿ ಎಂತೆಂತಹದ್ದೋ ಕೆಲಸಗಳನ್ನು ಮಾಡಿ ಹಣ ಗಳಿಸುತ್ತಾರೆ. ಇದರಿಂದಾಗಿ ನಂತರ ಅವರ ಗಂಡಸರಲ್ಲಿ ಪಾಪಪ್ರಜ್ಞೆ ಕಾಡುತ್ತದೆ ಮತ್ತು ಹೆಂಗಸರಲ್ಲಿ ವಿಪರೀತ ಅಭದ್ರತೆ ಕಾಡಲು ಶುರುವಾಗುತ್ತದೆ. ಈ ಮಾನಸಿಕ ಒತ್ತಡಗಳನ್ನು ಹಾಗೂ ಪಾಪಪ್ರಜ್ಞೆಯನ್ನು ಹೋಗಲಾಡಿಸಲು ಅವರು ಆಗಾಗ ತಮ್ಮ ತವರಿಗೆ ಬಂದು ದೇವರ ಹೆಸರಲ್ಲಿ ಬೇಕಾಬಿಟ್ಟಿ ಖರ್ಚು ಮಾಡುತ್ತಾರೆ. ಅರೆಸಾಕ್ಷರರನ್ನು ಮಾತ್ರವಲ್ಲ, ವಿದ್ಯಾವಂತ ಬಂಟರನ್ನೂ ದೇವರ ಹೆಸರಲ್ಲಿ ಪೆದ್ದು ಮಾಡುವುದು ಅತೀ ಸುಲಭ ಎಂದು ವೈದಿಕರೇ ಮಾತನಾಡಿಕೊಳ್ಳುತ್ತಾರೆ.

ತುಳುನಾಡಿನ ಪ್ರತಿಯೊಂದು ಹಳ್ಳಿಯಲ್ಲೂ ಆಗುತ್ತಿರುವ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಮುಕ್ಕಾಲು ಪಾಲು ಹಣ ಕೇವಲ ಮುಂಬೈ ಬಂಟರ ಡ್ಯಾನ್ಸ್-ಬಾರ್, ಹುಕ್ಕಾ-ಬಾರ್ ಮತ್ತು ಭೂಗತ ಜಗತ್ತಿನಿಂದಲೇ ಬರುತ್ತಿರುವುದು. ಇಂತಹ ಭಾರೀ ಹಣ ಈಗ ಬ್ರಾಹ್ಮಣ ಅರ್ಚಕರ ಅಥವಾ ವೈದಿಕ ಸ್ವಾಮೀಜಿಗಳ ಜೇಬಿಗೆ ಹೋಗುತ್ತಿದೆ. ಆ ಹಣವನ್ನು ತಮ್ಮ ಕಡೆ ತಿರುಗಿಸುವ ತಂತ್ರದ ಭಾಗವೇ ಬಂಟರ ಕುಲಗುರು ಪೀಠ.

ಇನ್ನು ಕರ್ನಾಟಕದಲ್ಲಿ ಬಹಳಷ್ಟು ಸ್ವಾಮೀಜಿಗಳು ಭ್ರಷ್ಟ ರಾಜಕಾರಣಿಗಳಿಗೆ ಸ್ವಿಸ್ ಬ್ಯಾಂಕ್ ಆಗಿದ್ದುಕೊಂಡು ಭರಪೂರ ಕಮಿಷನ್ ಗಳಿಸುತ್ತಿರುವುದು ಗುಟ್ಟಿನ ವಿಷಯವೇನಲ್ಲ. ಹಾಗಾಗಿ ಸಾಮಾನ್ಯ ತುಳುವರು ಹೇಳುವುದೇನೆಂದರೆ ಕೆಲವು ಕುಲಗುರುಗಳು "ಕುಲೆ" ಗುರುಗಳಾಗಿದ್ದಾರೆ ! (ತುಳುವಿನಲ್ಲಿ ಕುಲೆ ಎಂದರೆ ಪಿಶಾಚಿ). ಇತ್ತೀಚೆಗೆ ಹೊಸ್ನಾವರದ ಒಂದು ಜನಾಂಗದ ಸ್ವಾಮಿಗಳು 'ಜನನಾಂಗದ' ಸ್ವಾಮಿಗಳಾದ ಆರೋಪ ಹೊತ್ತ ಮೇಲೆ ಹೆಚ್ಚಿನವರಿಗೆ ತಮ್ಮ ಜನಾಂಗಕ್ಕೊಂದು ಕುಲಗುರು ಬೇಕೆಂದು ಅನಿಸುವುದೇ ಇಲ್ಲ!

- ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಹೋರಿಯಂತೆ ಹೊಕ್ಕ ಇಕ್ಕಿಸಿಕೊಂಡ ರಕ್ಕ!





ನಟಿ ರಂಜಿತಾ

ಅತ್ಯಾಚಾರಿಯನ್ನೇ ಹಿಡಿದು ಆತನ ಮೇಲೆ ಅತ್ಯಾಚಾರವೆಸಗಿದರೆ ಹೇಗಿರುತ್ತೆ?

ಹೆಣ್ಣುಬಾಕ ನಿತ್ಯಾನಂದನ ಮೇಲೆ ವಿಕ್ಟೋರಿಯಾ ವೈದ್ಯರ ತಂಡ ನಡೆಸಿದ ಪರೀಕ್ಷೆ ಆತನ ಮೇಲೆ ವಿಧಿ ಎಸಗಿದ ಅತ್ಯಾಚಾರವಲ್ಲದೆ ಮತ್ತೇನಿಲ್ಲ!

Potency test ಅಂದರೆ ಪುರುಷತ್ವ ಪರೀಕ್ಷೆಯ ತೋಡಿದ ಹಳ್ಳಕ್ಕೆ ತಾನೇ ಬಿದ್ದಿದ್ದಾನೆ ನಿತ್ಯಾನಂದ. ಕೊಟ್ಟ ಏಟು ಹೇಗಿತ್ತೆಂದರೆ; ಅವಮಾನ ತಾಳದೆ 'ತಾನು



ಆರತಿ ರಾವ್

ತಮಿಳುನಾಡಿನ ತಿರುವಣ್ಣಾಮಲೈಗೆ ಶಿಫ್ಟ್ ಆಗ್ತೀನಿ, ಬಿಡದಿಯ ಸಹವಾಸವೇ ಬೇಡ, ನನಗೆ ಶಾಂತಿ ನೆಮ್ಮದಿ ಬೇಕು, ಅದು ತಿರುವಣ್ಣಾಮಲೈ ಆಶ್ರಮದಲ್ಲೇ ಸಿಗುತ್ತದೆ, ಇಲ್ಲಿದ್ದರೆ ಇನ್ನಷ್ಟು ಅವಮಾನ ಜೊತೆಗೆ ಸಮಸ್ಯೆ ಬೇರೆ, ಇನ್ನು ಮುಂದೆ ನಾನು ತಮಿಳುನಾಡಿನಲ್ಲಿ ಇದ್ದುಕೊಂಡೇ ಕಾನೂನು ಹೋರಾಟ ಮಾಡ್ತೀನಿ...' ಎಂದೆಲ್ಲ ಇಡ ಒಡೆಸಿಕೊಂಡ ಹೋರಿಯಂತೆ ನಿತ್ಯಾನಂದ ಕೀರಲುವುದಕ್ಕೂ ಕಾರಣವಿದೆ.

ಅದು ರೇಪಿಸ್ಟ್‌ನನ್ನೇ ಹಿಡಿದು ವಿಧಿ ರೇಪುಗೈದ ರೀತಿ. ಸೆಪ್ಟೆಂಬರ್ 8ರ ಸೋಮವಾರ ಬೆಳಗ್ಗೆಯಿಂದ ರಾತ್ರಿತನಕ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಆತ ಎದುರಿಸಿದ ಪಜೀತಿಯಿತ್ತಲ್ಲ; ಬಹುಶಃ ದೇವರು-ಧರ್ಮದ ಹೆಸರಲ್ಲಿ ತಾನು ತಿಂದು ತೇಗಿದ ಮುಗ್ಧ ಮಹಿಳೆಯರೆಲ್ಲರ ಆರ್ತನಾದವೂ ಒಟ್ಟೊಟ್ಟಿಗೆ ಆವರಿಸಿಕೊಂಡು ಹೀಯಾಳಿಸಿದಂತಾಗಿರಬೇಕು! ತಾನು ಮಾಡಿದ ಪಾಪ ತನ್ನನ್ನೇ ಹಿಡಿದು ಹಿಂಸಿಸಿದ್ದರ ಆಘಾತದಿಂದ ಸದ್ಯ ಆತ ಹೊರಬರಲಾರ. ಹುಸಿನಗುತ್ತಾ ವೀರಾವೇಶದಿಂದಲೇ ವಿಕ್ಟೋರಿಯಾ ಆಸ್ಪತ್ರೆ ಹೊಕ್ಕ ಸ್ವಾಮೀಜಿಗೆ ತಾನು ಸತ್ತ ಹೆಣದಂತೆ ಗಾಲಿ ಕುರ್ಚಿಯಲ್ಲಿ ದೈನೇಸಿಯಾಗಿ ಹೊರಬರಲಿದ್ದೇನೆಂಬ ನಿರೀಕ್ಷೆ ತಾನೇ ಎಲ್ಲಿತ್ತು?

ಬಟ್ಟೆ ಬಿಚ್ಚಿಸಿ...!

ಸೋಮವಾರದ ಘಟನಾವಳಿಗಳನ್ನೇ ನೋಡಿ. ಬಿಡದಿ ಆಶ್ರಮದೆದುರು ನಿತ್ಯಾನಂದ ಹೊರಬರುವುದನ್ನೇ ಕಿಕ್ಕಿರಿದು ಕಾಯುತ್ತಿದ್ದ ಟೀವಿ ವರದಿಗಾರರು, ಕ್ಯಾಮರಾಮನ್‌ಗಳನ್ನು ಆತ ಸಲೀಸಾಗಿಯೇ ಯಾಮಾರಿಸಿದ್ದ. ತನ್ನಂತೆ ವೇಷ ಧರಿಸಿದ್ದ ನಕಲಿಯೊಬ್ಬನನ್ನು ತಲೆಗೆ ಶಲ್ಯ ಸುತ್ತಿಕೊಂಡಂತೆ ಕಾರಲ್ಲಿ ಕೂಡ್ರಿಸಿ ಮೀಡಿಯಾ ಗುಂಪಿನೆದುರು ಹಾದುಹೋಗುವಂತೆ ಮಾಡಿ ಅದನ್ನು ಮೀಡಿಯಾಗಳು ಹಿಂಬಾಲಿಸಿ ಮೋಸ ಹೋದಂತೆಯೇ ತಾನು ಸದ್ದಿಲ್ಲದೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಪ್ರತ್ಯಕ್ಷನಾಗಿದ್ದ. ಆದರೆ ನಿತ್ಯನ ಚಾಲು ಗೊತ್ತಿದ್ದ ಮೀಡಿಯಾಗಳ ಮತ್ತೊಂದು ತಂಡ ತಲೆ ಓಡಿಸಿಯೇ ವಿಕ್ಟೋರಿಯಾ ಆವರಣದಲ್ಲಿ ಹೊಂಚಿ ಕುಳಿತಿತ್ತು. ಮೀಡಿಯಾಗಳನ್ನು ಯಾಮಾರಿಸಿದ ಹಮ್ಮಿನಲ್ಲಿ ಹಲ್ಲು ಕಿರಿಯುತ್ತಲೇ ವಿಕ್ಟೋರಿಯಾ ಹೊಕ್ಕ ನಿತ್ಯ ಕ್ಯಾಮೆರಾಗಳ ಕಣ್ಣು ತಪ್ಪಿಸಲಾಗಲೇ ಇಲ್ಲ.

ಅಲ್ಲಿಂದಾಚೆಗೆ ನಡೆದದ್ದು ಅಕ್ಷರಶಃ ನಿತ್ಯನ ಪಾಲಿಗೆ ನಾಯಿಪಾಡಾಗಿತ್ತು. ಬೆಂಗಳೂರು ಮೆಡಿಕಲ್ ಕಾಲೇಜಿನ ಡೀನ್ ಮತ್ತು ಫೊರೆನ್ಸಿಕ್ ವಿಭಾಗದ ಡೈರೆಕ್ಟರ್ ದೇವದಾಸ್ ಖುದ್ದು ಹಾಜರಿದ್ದು ಒಂದು ಡಜನ್ ಡಾಕ್ಟರುಗಳ ನೇತೃತ್ವ ವಹಿಸಿದ್ದರು. ವಿಕ್ಟೋರಿಯಾ ಆಸ್ಪತ್ರೆಯ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ದುರ್ಗಣ್ಣ ಉಪಾಯವಾಗಿಯೇ 'ಯಥಾವತ್ತು ನಿಯಮಾವಳಿ' ಎಂದು ಒಪ್ಪಿಗೆ ಪತ್ರಕ್ಕೆ ನಿತ್ಯಾನಂದನಿಂದ ಸಹಿ ಪಡೆದರು. ಬಹುಶಃ ಸಹಿ ಹಾಕುವ ಹೊತ್ತಿಗೆ ತಾನು ಪಡಬಾರದ ಪಜೀತಿಗೆ ತನ್ನನ್ನು ಒಡ್ಡಿಕೊಳ್ಳುತ್ತಿದ್ದೇನೆಂದು ಆತನಿಗೆಲ್ಲಿ ಗೊತ್ತಿತ್ತು?

ಒಮ್ಮೆ ಒಪ್ಪಿಗೆ ಪತ್ರಕ್ಕೆ ಸಹಿ ಹಾಕಿ ತನ್ನನ್ನು ಸರ್ಕಾರಿ ವೈದ್ಯರ ವಶಕ್ಕೆ ಒಪ್ಪಿಸಿಕೊಂಡನೆಂದರೆ ಆ ನಂತರ ಹೆಚ್ಚೂಕಮ್ಮಿ ಆತ ಡಾಕ್ಟರುಗಳ ಕೈಗೊಂಬೆಯಾದಂತೆಯೇ ಲೆಕ್ಕ. ಬಂಧಿಯೊಬ್ಬನನ್ನು ಪೊಲೀಸರು ನಡೆಸಿಕೊಳ್ಳುವುದಕ್ಕಿಂತಲೂ ಹೀನಗತಿಯದು. ಪುರುಷತ್ವ ಪರೀಕ್ಷೆಯೆಂದರೆ ಅದು ಭಾಗಶಃ ಪುರುಷನೊಬ್ಬನ ಮೇಲೆ ನಡೆಸುವ ಕಾನೂನುಬದ್ಧ ಅತ್ಯಾಚಾರವೆ. ಮೊದಲನೇ ಹಂತವಾಗಿ ಜನರಲ್ ಫಿಜಿಷಿಯನ್ ಒಬ್ಬರು ವ್ಯಕ್ತಿ ದೈಹಿಕವಾಗಿ ಆರೋಗ್ಯವಾಗಿದ್ದಾನಾ ಇಲ್ಲವಾ ಎಂಬುದನ್ನು ಪರೀಕ್ಷಿಸುತ್ತಾರೆ. ಆ ಪ್ರಕಾರವೇ ವಿಕ್ಟೋರಿಯಾದ ಮೆಡಿಕಲ್ ಸೂಪರಿಂಟೆಂಡೆಂಟ್ ಡಾ. ದುರ್ಗಣ್ಣನವರ ತಂಡ ನಿತ್ಯಾನಂದನ ಬಟ್ಟೆ ಬಿಚ್ಚಿಸಿದೆ.

'ಕೈ' ಪಜೀತಿ

ಹಾಗೆ ವಿವಸ್ತ್ರಗೊಳಿಸಿದ ನಿತ್ಯಾನಂದನನ್ನು ಡಾ. ದುರ್ಗಣ್ಣನವರ ತಂಡ ಯಾವ ಪರಿ ಪಜೀತಿಗೊಡ್ಡಿದೆಯೆಂದರೆ ಮೊದಲು ಶಿಶ್ನಕ್ಕೆ ಕೈಹಾಕಿ ಅದು ದೇಹದ ಗಾತ್ರಕ್ಕೆ ತಕ್ಕುದಾಗಿದೆಯೆ ಎಂದು ಪರೀಕ್ಷಿಸಿದೆ. ಆ ನಂತರ ಎದೆ ತೊಟ್ಟುಗಳನ್ನು ಹಿಡಿದೆಳೆದು ಅದು ಕೂಡ ಆಳ್ತನಕ್ಕೆ ಲಾಯಕ್ಕಾದದ್ದೇ ಎಂದು ಪರಿಶೀಲಿಸಿದೆ. ನಂತರದ್ದು ವೃಷಣ ಪರೀಕ್ಷೆ. ವೃಷಣದ ಎರಡೂ ಬೀಜಗಳನ್ನು ಮುಟ್ಟಿ ಸಮಗಾತ್ರ, ಸಮಮಟ್ಟವನ್ನು ತಡಕಾಡುತ್ತಾರೆ. ತಾನೊಬ್ಬ ದೇವಮಾನವ, ಧರ್ಮಗುರು, ಸ್ವಾಮೀಜಿ ಎಂದೆಲ್ಲ ಕರೆಸಿಕೊಳ್ಳುವ ಆಸಾಮಿಯೊಬ್ಬ ಅಕ್ಷರಶಃ ಮಿಕದಂತೆ ಮುಟ್ಟಬಾರದ ಜಾಗಕ್ಕೆಲ್ಲಾ ಡಾಕ್ಟರುಗಳಿಂದ 'ಕೈ' ಶಿಕ್ಷೆ ಎದುರಿಸುವ ಪಜೀತಿಯಿದೆಯಲ್ಲ; ನಿತ್ಯಾನಂದ ಇದೊಂದಕ್ಕೇ ಕುಸಿದುಹೋಗಿದ್ದ!

ಇಷ್ಟೆಲ್ಲ ಪರೀಕ್ಷೆಗಳಿಂದ ವಿಕ್ಟೋರಿಯಾ ವೈದ್ಯರ ತಂಡಕ್ಕೆ ಒಂದಂತೂ ಸ್ಪಷ್ಟವಾಗಿತ್ತು, ಅದು ನಿತ್ಯಾ ದೈಹಿಕವಾಗಿ ಓರ್ವ ಆರೋಗ್ಯವಂತ ಪುರುಷ ಎಂಬುದು. Uro

ತಮಿಳುನಾಡಿಗೆ ಪರಾರಿ, ರಂಜಿತಾಳೂ ಜೊತೇರಿ

'ನನಗೆ ಶಾಂತಿ ಬೇಕು ನೆಮ್ಮದಿ ಬೇಕು, ಅದಕ್ಕೇ ತಮಿಳುನಾಡಿನ ತಿರುವಣ್ಣಾಮಲೈ ಆಶ್ರಮಕ್ಕೆ ನಾನು ಶಿಫ್ಟ್ ಆಗ್ತಿದ್ದೀನಿ...' ಎಂದೆಲ್ಲಾ ಘೋಷಿಸಿದ ನಿತ್ಯಾನಂದನಿಗೆ ಬಿಡದಿಯಲ್ಲಿನ್ನು ತನ್ನ ಆಟ ನಡೆಯುವುದಿಲ್ಲ ಎಂಬುದು ಖಾತರಿಗೊಂಡಂತಿದೆ.



ಸಣ್ಣಪುಟ್ಟ ವಿಷಯಕ್ಕೂ ಟೀವಿ ಕ್ಯಾಮರಾಮನ್‌ಗಳು ಮುತ್ತಿಗೆ ಹಾಕುತ್ತಾರೆ. ಸಾಲದ್ದಕ್ಕೆ ಸಿಐಡಿ ಪೊಲೀಸರ ಸರ್ಪಗಾವಲು ಬೇರೆ. ಬಿಡದಿ ಪೊಲೀಸರಿಗೂ ನಿತ್ಯಾನಂದನ ಪಜೀತಿಗಳು ದೊಡ್ಡ ತಲೆನೋವಾಗಿಬಿಟ್ಟಿದೆ. ಪ್ರತಿನಿತ್ಯ ಒಂದಲ್ಲ ಒಂದು ಸಂಘಟನೆಗಳ ಮುಖಂಡರು ಹೋಗಿ ಇಲ್ಲಸಲ್ಲದ ಬೇಡಿಕೆಯಿಡುತ್ತಾರೆ. ಇಲ್ಲೇ ಇದ್ದರೆ ಪದೇಪದೇ ಪೊಲೀಸರು ಬಂದು ವಿಚಾರಣೆ, ತನಿಖೆ, ಆ ದಾಖಲೆ-ಈ ದಾಖಲೆ ಎಂದೆಲ್ಲಾ ಪೀಡಿಸುತ್ತಾರೆ. ಇಲ್ಲೇ ಇದ್ದೂ ಆರತಿ ರಾವ್ ರೇಪ್ ಪ್ರಕರಣದ ವಿಚಾರಣೆಗೆ ಹೋಗದಿದ್ದರೆ ಮತ್ತೆ ಕೋರ್ಟ್ ವಾರಂಟು ಎಂದೆಲ್ಲ ತಲೆ ಕೊಡಬೇಕು. ವಕೀಲ ಸಿ.ವಿ. ನಾಗೇಶ್ ಬಿಟ್ಟರೆ ಸರ್ಕಾರದ ಮಟ್ಟದಲ್ಲಿ ತನ್ನನ್ನು ಬೆಂಬಲಿಸುವವರೂ ಇಲ್ಲ.



ಆದರೆ ತಮಿಳುನಾಡಿನಲ್ಲಿದ್ದರೆ ಪರಿಸ್ಥಿತಿ ಹೀಗಿಲ್ಲ. ಅಮ್ಮ ಜಯಲಲಿತಾ ಏನಿಲ್ಲವೆಂದರೂ ತನಗೆ ತೊಂದರೆಯನ್ನಂತೂ ಕೊಡುವುದಿಲ್ಲ. ಕರ್ನಾಟಕದಲ್ಲಿದ್ದು ಪದೇ ಪದೇ ಪೊಲೀಸ್ ಕಾಟ, ಸಾರ್ವಜನಿಕ ಅಪಮಾನ, ಮೀಡಿಯಾಗಳ ಕಿರುಕುಳ ಅನುಭವಿಸುವುದಕ್ಕಿಂತಲೂ ದೂರದ ತಮಿಳುನಾಡಿನಲ್ಲಿರುವುದೇ ಕ್ಷೇಮ ಎಂಬ ನಿರ್ಧಾರಕ್ಕೆ ಬಂದಿದ್ದಾನೆ ನಿತ್ಯಾನಂದ. ಹೇಗೂ ಪುರುಷತ್ವ ಪರೀಕ್ಷೆಯ ಅವಮಾನ ಬೇರೆ ಜನಕ್ಕೆ ಬಿಟ್ಟಿ ಮನರಂಜನೆ ನೀಡಿರುವುದರಿಂದ ಕನಿಷ್ಠ ಜನ ಅದನ್ನು ಮರೆಯುವವರೆಗಾದರೂ ಯಾರ ಕಣ್ಣಿಗೂ ಬೀಳದೇ ಇರುವ ಹುನ್ನಾರ ನಿತ್ಯಾನಂದನದ್ದು.

ಸದ್ಯಕ್ಕಂತೂ ನಿತ್ಯಾ ತಮಿಳುನಾಡಿಗೆ ಪರಾರಿಯಾಗಿದ್ದಾನೆ. ಮಧುರೈ ಆಧೀನಂ ಆಶ್ರಮದಿಂದ ಭಕ್ತರೇ ಒದ್ದೋಡಿಸಿದಂತೆ ಬಿಡದಿ ಆಶ್ರಮದಿಂದಲೂ ಪೊಲೀಸರು ಲಾತಾ ಕೊಟ್ಟಂತಾಗಿದೆ. ತಮಾಷೆಯೆಂದರೆ ನಿತ್ಯಾನಂದನ ಜೊತೆ ಪ್ರಾಣಸಖಿ ರಂಜಿತಾಳೂ ತಿರುವಣ್ಣಾಮಲೈ ಆಶ್ರಮಕ್ಕೆ ಕಾಲಿಡುತ್ತಿದ್ದಾಳೆ. ಇನ್ನೆಂಥಾ ಮನರಂಜನೆ ಕಾದಿದೆಯೋ...?

...ಮುದ ವೀರ್ಯ ಪರೀಕ್ಷೆ ಬೆನ್ನು ಬಿಡದ ನಿತ್ಯಪರೀಕ್ಷೆ

...ಕ್ಟೋರಿಯಾ ಆಸ್ಪತ್ರೆಯ ತಜ್ಞರು ಏನೇ ಒತ್ತಡ ಹೇರಿದರೂ ವೀರ್ಯ ಪರೀಕ್ಷೆಗೆ ಒಪ್ಪದ ನಿತ್ಯಾನಂದನನ್ನು ಮತ್ತೆ ...ವ ಪರೀಕ್ಷೆಗೆ ಎಳೆಯುತ್ತಾರಾ? ಈ ಬಾರಿ ಪೊಲೀಸರೇ ಹೆಡೆಮುರಿ ಕಟ್ಟಿ ತಂದು ಆಸ್ಪತ್ರೆಯ ವೈದ್ಯರಿಗೊಪ್ಪಿಸ...? ಹಾಗೆ ಪೊಲೀಸರು ಎಳೆದು ತಂದವನಿಗೆ ವಿಕ್ಟೋರಿಯಾ ಡಾಕ್ಟರ್‌ಗಳು ಜಬರ್‌ದಸ್ತಿ ಕಾಮೋತ್ತೇಜಕ ...ೀರ್ಯ ಎಳೆಯುತ್ತಾರಾ?

...ವತಿ ಮೊನ್ನೆ ನಡೆದ ಪುರುಷತ್ವ ಪರೀಕ್ಷೆಯಲ್ಲಿ ನಿತ್ಯಾನಂದ ವೀರ್ಯ ಪರೀಕ್ಷೆಗೆ ಬಿಲ್‌ಕುಲ್ ಒಪ್ಪಲೇ ಇಲ್ಲ. ...ಸನ್ಯಾಸಿಯಾದ್ದರಿಂದ ತನ್ನ ವೀರ್ಯ ಸೆಳೆದರೆ ಅದು ತನ್ನ ಧಾರ್ಮಿಕ ಸ್ವಾತಂತ್ರ್ಯ ಮತ್ತು ಮೂಲಭೂತ ಹಕ್ಕಿನ ...ಹರಣವಾಗುತ್ತದೆ ಎಂದೇ ಡಾಕ್ಟರ್‌ಗಳನ್ನು ಬೆದರಿಸಿದ್ದ. ಆತನ ಕೂಗಾಟ, ಕೊಸರಾಟಕ್ಕೆ ಹೆದರಿದ ಡಾಕ್ಟರ್‌ಗಳು ...ರೀಕ್ಷೆಯನ್ನು ಅರ್ಧಕ್ಕೆ ಕೈಬಿಟ್ಟು ಬೇರೆಲ್ಲ ಪರೀಕ್ಷೆಗಳನ್ನೂ ಮುಗಿಸಿದ್ದಾರೆ. ಆ ಪ್ರಕಾರ ನಿತ್ಯಾನಂದ ಸಂಭೋಗ ...ವುಳ್ಳ ಪಕ್ಕಾ ಗಂಡಸೆಂಬುದಂತೂ ಸಾಬೀತಾಗಿದೆ.

...ಮ್ಮೆ ಕೋರ್ಟು ಅಥವಾ ತನಿಖಾಧಿಕಾರಿ ವೀರ್ಯಪರೀಕ್ಷೆ ಕಡ್ಡಾಯ ಎಂದು ಬಿಟ್ಟರೆ ಆಗ ಪೊಲೀಸರಿಗೆ ...ರಿಯೇ ಇಲ್ಲ. ಬಲವಂತವಾಗಿ ಎಳೆದುತಂದು ಕೈಕಾಲು ಕಟ್ಟಿ ಸೂಜಿ ಚುಚ್ಚಲೇಬೇಕು. ಏಕೆಂದರೆ ನಿತ್ಯಾನಂದ ...ದೃಷ್ಟಿಯಲ್ಲಿ ಯಕಶ್ಚಿತ್ ಕ್ರಿಮಿನಲ್. ಆತನ ಮೇಲಿರುವುದು ಅತ್ಯಾಚಾರದ ಕೇಸು. ರೇಪ್ ಆರೋಪಿಯೊಬ್ಬನನ್ನು ...ಯಾದರೂ ಪರೀಕ್ಷೆ ಮಾಡುವ ಅಧಿಕಾರ ಕಾನೂನಿಗಿದೆ, ಪೊಲೀಸರಿಗೂ ಇದೆ. ಏನಾಗುತ್ತೋ ನೋಡಬೇಕು.




...ಕ್ಟೋರಿಯಾ ಆಸ್ಪತ್ರೆ

ಪರದೆಯ ಶೃಂಗಾರ ದೃಶ್ಯಾವಳಿಯನ್ನು ನೋಡುತ್ತಿದ್ದಂತೆಯೇ ಬಳಕುತ್ತಲೇ ಬಂದ ನರ್ಸ್ ಒಬ್ಬರು ಆತನ ಸೊಂಟದ ಕೆಳಕ್ಕೆ ಕೈ ಇಟ್ಟು ಸೂಜಿಯೊಂದನ್ನು ಚುಚ್ಚಿ ಬಿಟ್ಟರು.

ವೀರ್ಯ ಪರೀಕ್ಷೆಯಲ್ಲಿ

ಅದು **Pataverine** ಎಂಬ ಕಾಮೋತ್ತೇಜಕ ಇಂಜಕ್ಷನ್! ಸಾಮಾನ್ಯವಾಗಿ ಇದನ್ನು ಪುರುಷತ್ವ ಪರೀಕ್ಷೆಯಲ್ಲಿ ಜನನಾಂಗದ ನಿಮಿರುವಿಕೆಗೆಂದು ನೀಡಲಾಗುತ್ತದೆ. ಇದರ ಹೊರತಾಗಿಯೂ **protoglandin** ಎಂಬ ಪರ್ಯಾಯ ಚುಚ್ಚುಮದ್ದನ್ನೂ ಬಳಸಲಾಗುತ್ತದೆ. ನೀಡಿದ ಕೆಲವೇ ನಿಮಿಷಗಳಲ್ಲಿ ಮರ್ಮಾಂಗ ಉದ್ರೇಕಗೊಳ್ಳುತ್ತದೆ. ಖಾವಿ ವಸ್ತ್ರ ಕಿತ್ತು ಮೆಡಿಕಲ್ ಗೌನ್ ಒಂದನ್ನು ತೊಟ್ಟು ಅಕ್ಷರಶಃ ನಿರ್ವಾಣಾವಸ್ಥೆಯಲ್ಲಿದ್ದ ನಿತ್ಯಾನಂದನಿಗೆ ಎಂಥಾ ಪಜೀತಿಯೆಂದರೆ ಇರುವಂತಿಲ್ಲ ಇದ್ದು ಅನುಭವಿಸುವಂತಿಲ್ಲ.

ಇನ್ನು ಕೆಲವೇ ಕ್ಷಣಗಳಲ್ಲಿ **vibrator** ಅಳವಡಿಸಿ ತನ್ನ ವೀರ್ಯ ಸಂಗ್ರಹಿಸಲಾಗುತ್ತದೆ ಎಂಬುದು ಗೊತ್ತಾಗುತ್ತಿದ್ದಂತೆಯೇ ನಿತ್ಯಾನಂದ ಹುಚ್ಚನಂತೆ ಚೀರಾಡಿಬಿಟ್ಟ. 'ನೋ ಐ ಡೋಂಟ್ ವಾಂಟ್ ದಿಸ್. ಇಟ್ ಈಸ್ ಅಗೇಯ್ನ್‌ಸ್ಟ್ ಟು ಮೈ ಇಂಟಗ್ರಿಟಿ, ಡೋಂಟ್ ಡೂ ದಿಸ್...' ಎಂದೆಲ್ಲ ಕಿರುಚಿಕೊಂಡ. ಆತನ ಹುಚ್ಚಾಟ ನೋಡಿದ ಡಾಕ್ಟರ್‌ಗಳು ದಿಕ್ಕುತೋಚದೆ ನಿಂತುಬಿಟ್ಟರು. ಅಷ್ಟಕ್ಕೂ ವ್ಯಕ್ತಿಯೇ ಆರೋಗ್ಯವಾಗಿದ್ದಾನೆ ಎಂದಮೇಲೆ ದೈಹಿಕವಾಗಿ ಎಲ್ಲಾ ಅಂಗಾಂಗಗಳೂ ಸರಿಯಾಗಿವೆ ಎಂದಮೇಲೆ ವೀರ್ಯದ ಫಲವತ್ತತೆಯ ಪ್ರಶ್ನೆಯೇ ಮುಖ್ಯವಾಗುವುದಿಲ್ಲ.

ಅಲ್ಲಿಗೆ ನಿತ್ಯಾನಂದನ ವೀರ್ಯ ಸಂಗ್ರಹವನ್ನು ಕೈಬಿಟ್ಟ ವೈದ್ಯರ ತಂಡ ಅತೀಮುಖ್ಯ ಪರೀಕ್ಷೆಯೊಂದಕ್ಕೆ ಮುಂದಾಯಿತು. ಅದು ಹಿಂಬದಿಯಿಂದ **ultra sound** ಪೈಪ್ ತುರುಕಿಸಿ ಅಡ್ರಿನಲ್ ಗ್ಲಾಂಡ್, ಮೂತ್ರಪಿಂಡಗಳು, ಮೂತ್ರನಾಳ ಇತ್ಯಾದಿ **urogenital system** ಸರಿಯಾಗಿ ಕಾರ್ಯ ನಿರ್ವಹಿಸುತ್ತವೆಯಾ ಎಂದು ಪರೀಕ್ಷಿಸುವ ವಿಧಾನ. ಉದರದರ್ಶಕ ಎಂಡೋಸ್ಕೋಪಿಯ ಹಾಗೆಯೇ ಗುದನಾಳದೊಳಗೊಂದು ಪೈಪು ತುರುಕಲಾಗುತ್ತದೆ. ಒಳಗಿನ ಅಂಗಾಂಗಗಳು, ಹಾರ್ಮೋನುಗಳ ಉತ್ಪತ್ತಿ, ಅಲ್ಲಿಂದ ಜನನಾಂಗಕ್ಕೆ ರಕ್ತ ಚಲನೆ ಇತ್ಯಾದಿಗಳನ್ನೆಲ್ಲ ಸೂಕ್ಷ್ಮವಾಗಿ ಆ ದರ್ಶಕ ಪರೀಕ್ಷಿಸುತ್ತದೆ.




ಡಾ. ದೇವದಾಸ್ ಡಾ. ದುರ್ಗಣ್ಣ

...al **System** ಸಹಜವಾಗಿದೆಯಾ ಎಂಬುದು ...ನ ಪರೀಕ್ಷೆ. ವಿಕ್ಟೋರಿಯಾ ಆಸ್ಪತ್ರೆಯ ನೆಫ್ರೋ...ಜಿ ವಿಭಾಗದ ಮುಖ್ಯಸ್ಥ ಡಾ. ಚಂದ್ರಶೇಖರ್ ...ಮತ್ತು ಜನರಲ್ ಫಿಜಿಷಿಯನ್ ಡಾ. ವೀರಣ್ಣ...! ನಿತ್ಯಾನಂದನನ್ನು ಒಪ್ಪಿಸಲಾಯಿತು. ಅವರು ...ು ನಿತ್ಯನ ರಕ್ತ ಪಡೆದರು. ಇಸಿಜಿ ಮಾಡಲಾಯಿತು. ...ವನ್ನು ಪಡೆದು ಅದನ್ನೂ ಪರೀಕ್ಷೆಗೆ ಕಳಿಸಲಾಯ್ತು. ...ದೈತ್ಯ ಸ್ಕ್ಯಾನರ್ ಒಂದರ ಒಳಕ್ಕೆ ಮಲಗಿಸಿ ...ದೇಹವನ್ನೇ ಸ್ಕ್ಯಾನ್ ಮಾಡಲಾಯಿತು.

...ಗೆ ಇಡೀ ದೇಹದ ಪರೀಕ್ಷೆಯ ನಂತರದ್ದು ನೆಫ್ರೋ...ಜಿ ಇಲಾಖೆಯ ಮತ್ತೊಬ್ಬ ಮುಖ್ಯಸ್ಥ ಡಾ. ...ಶೇಖರ್ ರತ್ಕಲ್‌ರ ಸರದಿ. ನರದೌರ್ಬಲ್ಯವಿದೆಯಾ, ...ಎಷ್ಟು ರಕ್ತ ಪೂರೈಕೆಯಾಗುತ್ತಾ ಇತ್ಯಾದಿಗಳನ್ನು ...ಷ್ಟೆ ಹೊತ್ತಿಗೆ ನಿತ್ಯಾನಂದನ ಜಂಘಾಬಲವೇ ...ಹೋಗಿತ್ತು. ಅದೇ ಹೊತ್ತಿಗೆ ಬೆಂಗಳೂರು ...ಯ ಕಾಲೇಜಿನ ಮನೋವೈದ್ಯಕೀಯ ವಿಭಾಗದ ...ಸ್ಥ ಡಾ. ಹೆಚ್. ಚಂದ್ರಶೇಖರ್ ಮತ್ತು ಖ್ಯಾತ ...ಸ್ತ್ರಜ್ಞೆ ಡಾ. ಶರಣ್‌ರತ್ ಬರೋಬ್ಬರಿ 42 ಪುಟಗಳ ...ಯೊಂದನ್ನು ಹಿಡಿದು ನಿಂತಿದ್ದರು.

...ಕಿದ ಪ್ರಶ್ನೆಗಳಾದರೂ ಎಂಥಾದ್ದು? ಹೆಣ್ಣಿನ ಧ್ವನಿ ...ಗ ನಿಮಗೆ ಏನೆನಿಸುತ್ತದೆ? ನೀವು ಗಂಡಾ ಹೆಣ್ಣಾ? ...ಬೆತ್ತಲೆ ದೇಹ ನೋಡುವ ಬಯಕೆ ಇಲ್ವಾ? ...ನಿಮಗೆ ಹೆಂಗಸರು ಬರುತ್ತಾರಾ? ಯಾವತ್ತಾದರೂ ...ಮೈಥುನ ಮಾಡಿಕೊಂಡಿದ್ದೀರಾ? ಸಿಲ್ಕ್‌ಸ್ಮಿತಾ ಬಗ್ಗೆ ...ಅಭಿಪ್ರಾಯ ಏನು? ಇತ್ಯಾದಿ ಒಂದರಮೇಲೊಂದು ...ಕ ಪ್ರಶ್ನೆಗಳನ್ನೆಸೆಯುತ್ತಿದ್ದರೆ ನಿತ್ಯಾನಂದ 'ಶಾಂತಂ ...' ಎಂದು ಉಗುಳು ನುಂಗುತ್ತಿದ್ದ.

...ದಲೇ ಬಾಲಿ ಹೊಟ್ಟೆಯಲ್ಲಿ ಬರುವಂತೆ ವೈದ್ಯರು ...ದ್ದರಿಂದ ನಿತ್ಯಾ ಸುಸ್ತು ಎಂದು ನಟಿಸತೊಡಗಿದ. ...ಡಾಕ್ಟರುಗಳು ಬಿಡಬೇಕಲ್ಲ, ಮುಂದಿನದ್ದು ವೀರ್ಯ ...ಅದಕ್ಕೆಂದೇ ವಿಶೇಷ ಕೊಠಡಿಯೊಂದು ಸಜ್ಜಾಗಿತ್ತು, ...ಳಕ್ಕೆ ನಿತ್ಯಾನಂದನನ್ನು ಕರೆದೊಯ್ದರೆ ಅದರ ತುಂಬಾ ...ಯೋಜ್ ಬೆತ್ತಲೆ ಚಿತ್ರಗಳು!

...ಕಿಗೆ ... ಮಾಡೆಲ್‌ಗಳ ಬೆತ್ತಲೆ ... ಇದ್ದವು. ಕೊಠಡಿಯಲ್ಲಿ ವಿಶಾಲ ಪರದೆಯ ಎಲ್‌ಸಿಡಿ ...ಒಂದನ್ನು ಇಡಲಾಗಿತ್ತು, ಅದರ ಎದುರು ಇಟ್ಟಿದ್ದ ...ಮೇಲೆ ನಿತ್ಯನನ್ನು ಕೂರಿಸಲಾಯಿತು. ಟೀವಿ 'ಆನ್' ...ತ್ತಿದ್ದಂತೆಯೇ ಶೃಂಗಾರವಾದ ಕಾಮಕೇಳಿಯ ...ಗಳು ಟೀವಿ ಪರದೆಯ ಮೇಲೆ ಮೂಡಿಬಂದವು. ...ದ ಕಣ್ಣುಗಳೇ ... ಏಚಿತ್ರ, ಯೋಗದ ... [illegible]



ಇದ್ದ ಡಾ. ದುರ್ಗಣ್ಣ 'ಯಾಕೆ, ನೋಡಿಬಿಟ್ಟರೆ ಎಲ್ಲಿ **Tempt** ಆಗಿಬಿಡ್ತೀನೋ ಅನ್ನೋ ಭಯಾನಾ? ನೀವು ಗಂಡಸೇ ಅಲ್ಲ ಅಂದಮೇಲೆ ಅದನ್ನು ನೋಡೋದಕ್ಕೆ ಭಯವೇಕೆ? ಇದು ಮೆಡಿಕಲ್ ಟೆಸ್ಟ್. ನೀವು ಅದನ್ನು ನೋಡದೆ ಹೋದರೆ ಪರೀಕ್ಷೆ ಅಪೂರ್ಣವಾಗುತ್ತೆ. **Dont hide. Try it...'** ಎಂದರು. ನಿತ್ಯಾನಂದ ಟೀವಿ


ತನ್ನನ್ನು ಹಿಂಬದಿಯಿಂದ ಯಮಯಾತನೆಗೀಡು ಮಾಡಿದ್ದೇ ತಡ, ನಿತ್ಯಾನಂದ ಅಬ್ಬಬ್ಬೋ ಎಂದು ಬೊಬ್ಬೆಯಿಟ್ಟ. ಡಾ. ದೇವರಾಜ್ ಮತ್ತು ದುರ್ಗಣ್ಣ ಆತನನ್ನು ಎಷ್ಟೇ ಸಮಾಧಾನ ಮಾಡಿದರೂ ಪುಟ್ಟ ಮಗುವಿನಂತೆ ಚೀರಾಡುತ್ತಲೇ ಇದ್ದ. ತನ್ನನ್ನು ಈ ಗತಿಗೆ ತಂದವರಿಗೆ ಶಾಪ ಹಾಕಿದ. ಅದೇನೋ ಸಂಸ್ಕೃತದಲ್ಲಿ ಮಂತ್ರ ಹೇಳಿದ್ದೇ ಲಟಿಕೆ ಮುರಿದ. ನಡುನಡುವೆ ಯಾರನ್ನೋ ಬೈದಂತೆ ಕ್ಯಾಕರಿಸಿ ಉಗಿಯುತ್ತಿದ್ದ. ಅಯ್ಯೋ ಅಮ್ಮಾ ಎಂದು ಎದೆ ಹಿಡಿದುಕೊಂಡ. ಹೋಗಿದ್ದೇ ಗೋಡೆಗೆ ತಲೆಚಚ್ಚಿಕೊಳ್ಳಲೆತ್ನಿಸಿದ. ಹುಷಾರಾದ ವಿಕ್ಟೋರಿಯಾ ಸಿಬ್ಬಂದಿ ಆತನನ್ನು ಗಾಲಿ ಕುರ್ಚಿಯೊಂದರಲ್ಲಿ ಕೂರಿಸಿ ಮತ್ತೊಂದು ಕೋಣೆಗೆ ಕರೆತಂದರೆ ಅಲ್ಲಿ ಎದೆ ಹಿಡಿದುಕೊಂಡಿದ್ದೇ ನಿತ್ಯಾನಂದ ಏದುಸಿರು ಬಿಡತೊಡಗಿದ.

ಅಲ್ಲಿಗೆ ಒಂದು ಹಂತದ ಆತನ ಪುರುಷತ್ವ ಪರೀಕ್ಷೆ ಮುಗಿದಂತಾಗಿತ್ತು. ಅವಮಾನ, ಅಸಹನೆ, ಮುಜುಗರ, ಪಜೀತಿಯಿಂದಾಗಿ ನಿತ್ಯನ ಅಂತಃಸತ್ವವೇ ಉಡುಗಿಹೋಗಿತ್ತು. ಅಕ್ಷರಶಃ ಹೆಣದಂತೆ ಗಾಲಿ ಕುರ್ಚಿಯಲ್ಲಿ ಕುಸಿದುಕುಳಿತಿದ್ದ. ಅದೇನು ಕರ್ಮವೋ ಹಾಗೆ ನಿತ್ರಾಣನಾಗಿ ಬಿದ್ದಿದ್ದ ಗಾಲಿ ಕುರ್ಚಿಯಲ್ಲೇ ಆತನನ್ನು ವಿಕ್ಟೋರಿಯಾ ಆಸ್ಪತ್ರೆಯ ಹೊರಗೆ ತರಲಾಯಿತು. ಆ ದೃಶ್ಯವನ್ನೇ ಕಾದು ಕೂತಿದ್ದ ಟೀವಿ ಕ್ಯಾಮರಾಮನ್‌ಗಳು ಯಥಾವತ್ತು ಚಿತ್ರಿಸಿಕೊಂಡರು. ಹುಸಿನಗೆ ಬೀರುತ್ತ, ಎದೆಯುಬ್ಬಿಸಿ ದೌಲತ್ತು ಹೊಡೆಯುತ್ತಿದ್ದ ನಿತ್ಯಾನಂದನನ್ನು ಅಕ್ಷರಶಃ ಅರೆಜೀವದ ದುರ್ಗತಿಯಲ್ಲಿ ಜನ ನೋಡುತ್ತಿದ್ದರು.

ಭಕ್ತಗಣ ದುರಂಧರ, ಅಲ್ಪಮತಿ ಕನ್ಯಾವಲ್ಲಭ, ಅಗಣಿತ ಸಂಪತ್ ರತ್ನಾಕರ, ತಂತ್ರಕಾಮ ನಿಪುಣ, ಸಕಲರೋಗ ನಿವಾರಕ ಇತ್ಯಾದಿ ಬಿರುದಾಂಕಿತ ನಿತ್ಯಾನಂದ ತಾನು ಗಂಡೇ ಅಲ್ಲ, ಮುಗ್ಧ ಹುಡುಗ, ತನಗೆ ಲೈಂಗಿಕತೆಯ ಹಂಗೇ ಇಲ್ಲ ಎಂದು ಸೃಷ್ಟಿಸಿದ್ದ ನಕಲಿ ಪ್ರಮಾಣ ಪತ್ರವೇ ಆತನ ದುರ್ಗತಿಗೆ ಕಾರಣವಾಗಿತ್ತು. ತಾನೇ ಮಾಡಿಕೊಂಡ ಪಜೀತಿಗೆ ದಂಡ ಕಟ್ಟಬೇಕಾಯಿತು. ಈಗ ಬಾಯಿ ಬಡಿದುಕೊಂಡು ಏನು ಪ್ರಯೋಜನ?

ಮಾನ ಮೂರು ಕಾಸಿಗೆ ... ಮಾಡಿದ ... ಕಳ್ಳಾಟವಾಡಲು ಹೋಗಿ ... ...!

ರಾ. ಸೋಮನಾಥ್



ಕಾರ್ಪೋರೇಟ್ ತೆರಿಗೆ ಕಳ್ಳರು!!

ತೆರಿಗೆ ವ್ಯವಹಾರದ ವಿವರಗಳಿಗೆ ಹೋಗುವ ಮುನ್ನ ಒಂದು ವಿಶೇಷ ಘಟನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಇಲ್ಲಿಗೆ ಕೆಲವು ವರ್ಷಗಳ ಹಿಂದೆ ಕೊಲ್ಕತ್ತಾ ಮಹಾನಗರದ ಜನನಿಬಿಡ ಚೌರಂಘೀ ಪ್ರದೇಶದ ಮುಖ್ಯರಸ್ತೆಯಲ್ಲಿ ಒಂದು ಸಿನಿಮೀಯ ಘಟನೆ ನಡೆಯಿತು. ಅಲ್ಲಿ ನಾನಾ ಕಾರ್ಪೋರೇಟ್ ಕಂಪನಿಗಳು ನೆಲೆಸಿರುವ ಒಂದು ಕಚೇರಿ ಸಂಕೀರ್ಣವಿದೆ. ಅಂದು ಬೆಳಗ್ಗೆ 10ರ ಸುಮಾರಿನಲ್ಲಿ ಆ ರಸ್ತೆಯಲ್ಲಿ ಸಾಗುತ್ತಿದ್ದ ದಾರಿಹೋಕರಿಗೆ ಅದೃಷ್ಟ ದೇವತೆ ಒಲಿದು ಬಂದಿತ್ತು. ಆ ಕಚೇರಿ ಸಂಕೀರ್ಣದ ಮಹಡಿಯ ಕಿಟಕಿಗಳಿಂದ ನೋಟಿನ ಕಂತೆಗಳು ಉದುರತೊಡಗಿದವು. ಆಶ್ಚರ್ಯಭರಿತರಾದ ಮಂದಿ ಕೈಗೆ ಸಿಕ್ಕಷ್ಟು ಬಾಚಿಕೊಳ್ಳ ತೊಡಗಿದರು. ಬಾಚಿದಷ್ಟೂ ನೋಟುಗಳು ಉದುರುತ್ತಲೇ ಇದ್ದವು. ಪರಿಣಾಮವಾಗಿ ನೂಕುನುಗ್ಗಲು ಉಂಟಾಯ್ತು.


ಕೊನೆಗೆ ಪೊಲೀಸ್ ಪಡೆಯನ್ನು ರವಾನಿಸಿ ಜನಜಂಗುಳಿಯನ್ನು ನಿಯಂತ್ರಿಸಿ, ನೋಟು ಉದುರುತ್ತಿದ್ದ ಪ್ರದೇಶವನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ಪೊಲೀಸರ ಪ್ರವೇಶವಾಗುವ ಮೊದಲೇ ನೋಟಿನ ಕಂತೆಗಳನ್ನು ಬಾಚಿಕೊಂಡಿದ್ದ ಅದೃಷ್ಟಶಾಲಿಗಳು ಅಲ್ಲಿಂದ ಪೇರಿ ಕಿತ್ತಿದ್ದರು.

ಅಂದು ನಡೆದದ್ದಿಷ್ಟು. ಸುಳ್ಳು ಲೆಕ್ಕಗಳ ಮೂಲಕ ತೆರಿಗೆ ವಂಚಿಸಿ ಲೆಕ್ಕಕ್ಕೆ ಸಿಗದ ಕೋಟಿಗಟ್ಟಲೆ ಹಣವನ್ನು ತಮ್ಮ ಕಚೇರಿಗಳಲ್ಲಿ ದಾಸ್ತಾನು ಮಾಡಿಕೊಂಡಿದ್ದರು. ಆ ಖಚಿತ ಮಾಹಿತಿ ಮೇರೆಗೆ ಆದಾಯ ತೆರಿಗೆ ಅಧಿಕಾರಿಗಳ ತಂಡ ಆ ಕಚೇರಿ ಸಂಕೀರ್ಣಕ್ಕೆ ದಾಳಿಯಿಟ್ಟಿತ್ತು. ಹೇಗೂ ಕಳ್ಳ ಹಣವನ್ನು ಕಳೆದುಕೊಳ್ಳಲೇಬೇಕು. ಕ್ರಿಮಿನಲ್ ಕೇಸಿನಿಂದಾದರೂ ತಪ್ಪಿಸಿಕೊಳ್ಳೋಣವೆಂದು ಆ ಕಂಪನಿಯ ಅಧಿಕಾರಿಗಳು ನೋಟಿನ ಕಂತೆಗಳನ್ನು ಕಿಟಕಿಯಿಂದ ತೂರಿದ್ದರು.

ತೆರಿಗೆ ವಂಚನೆಯ ಮಹಾಸಾಗರದಲ್ಲಿ ಮೇಲಿನ ಘಟನೆ ಕೇವಲ ಒಂದು ಹನಿಯಷ್ಟೆ. ಇಡೀ ದೇಶದ ಗಮನ







ಸೆಳೆದಿದ್ದ ಈ ವಿಲಕ್ಷಣ ಕೇಸಿನಲ್ಲಿ ಇದುವರೆಗೆ ಯಾರಿಗಾದರೂ ಶಿಕ್ಷೆಯಾದ ಸುಳಿವೇ ಇಲ್ಲ. ಇದು ಈ ದೇಶದ ಜಾಯಮಾನ.

ಅಭಿವೃದ್ಧಿ ಯೋಜನೆಗಳು ಕಾರ್ಯಗತವಾಗಬೇಕಾದರೆ ಸರ್ಕಾರದ ಬೊಕ್ಕಸ ಸದೃಢವಾಗಿರಬೇಕು. ಬೊಕ್ಕಸ ಸದೃಢವಾಗಿರಬೇಕೆಂದರೆ ದೇಶದಲ್ಲಿ ತೆರಿಗೆ ಸಂಗ್ರಹ ಸಮರ್ಪಕವಾಗಿರಬೇಕು. ದೇಶದಲ್ಲಿ ವಹಿವಾಟು ನಡೆಸಿ ಲಾಭ ಮಾಡಿಕೊಳ್ಳುವ ಕಂಪನಿಗಳಿಂದ ಹಾಗೂ ವ್ಯಕ್ತಿಗಳಿಂದ ತೆರಿಗೆ ಸಂಗ್ರಹ ಮಾಡುವ ವ್ಯವಸ್ಥೆಯನ್ನು ರೂಪಿಸಿರುವುದು ಈ ಕಾರಣಕ್ಕಾಗಿಯೇ.

ಈ ತೆರಿಗೆಯ ವಿಚಾರಕ್ಕೆ ಸಂಬಂಧಿಸಿದಂತೆ ಜನಸಾಮಾನ್ಯರಲ್ಲಿ ಭಾರೀ ಮೂಢನಂಬಿಕೆಯೊಂದಿದೆ. ದೊಡ್ಡ ದೊಡ್ಡ ಕಂಪನಿಗಳು ಸರ್ಕಾರಕ್ಕೆ ಕಟ್ಟಬೇಕಾದ ತೆರಿಗೆಯನ್ನು ಬಹಳ ಶ್ರದ್ಧೆ ಮತ್ತು ಶಿಸ್ತಿನಿಂದ ಕಟ್ಟುತ್ತಾರೆ ಎಂಬುದು ಒಂದು ರೀತಿಯ ಆಧುನಿಕ ಮೂಢನಂಬಿಕೆ. ಆದರೆ ವಸ್ತುಸ್ಥಿತಿ ಬೇರೆಯೇ ಇದೆ.

ಇತ್ತೀಚೆಗೆ ಹಣಕಾಸು ಸಚಿವಾಲಯ ಹೊರಡಿಸಿರುವ ಅಂಕಿಸಂಖ್ಯೆಗಳು ಒಂದು ಅಂಶವನ್ನು ವಿವಾದಕ್ಕೆಡೆಯಿಲ್ಲದಂತೆ ರುಜುವಾತುಪಡಿಸಿವೆ. ಏನೆಂದರೆ ಬಿಡಿಬಿಡಿ ವ್ಯಕ್ತಿಗಳಿಂದ ವಸೂಲಿ ಮಾಡುತ್ತಿರುವ ತೆರಿಗೆಯ ಪ್ರಮಾಣದ ದರಕ್ಕಿಂತಲೂ ಕಾರ್ಪೋರೇಟ್ ಕಂಪನಿಗಳಿಂದ ವಸೂಲಿಯಾಗುತ್ತಿರುವ ತೆರಿಗೆಯ ದರ ಭಾರೀ ಹಿಂದುಳಿದಿದೆ.

ಕೇಂದ್ರದ ಹಣಕಾಸು ಸಚಿವಾಲಯದ ಪ್ರಕಾರ 2013-14ನೇ ಆರ್ಥಿಕ ವರ್ಷದಲ್ಲಿ ವ್ಯಕ್ತಿಗತ ಕಾರ್ಪೋರೇಟ್ ತೆರಿಗೆಯ ಬೆಳವಣಿಗೆ ಶೇಕಡ 20.51ರಷ್ಟು ಏರಿಕೆ ಕಂಡಿದೆ. ಆದರೆ ಇದೇ ಅವಧಿಯಲ್ಲಿ ಕಾರ್ಪೋರೇಟ್ ತೆರಿಗೆ ಸಂಗ್ರಹದ ಬೆಳವಣಿಗೆಯ ದರ ಕೇವಲ 10.76ರಷ್ಟು. ಅಂದರೆ ವ್ಯಕ್ತಿಗತ ತೆರಿಗೆಯ ದರದ ಅರ್ಧಕ್ಕೆ ಕುಸಿದಿದೆ.

ಹಾಗೆ ನೋಡಿದರೆ ಒಟ್ಟು ರಾಷ್ಟ್ರೀಯ ಉತ್ಪನ್ನ(ಜಿಡಿಪಿ)ದ ಅಭಿವೃದ್ಧಿ ದರ ಶೇಕಡ 12.3 ಎಂದು ಅಂದಾಜಿಸಲಾಗಿ... ಕಾರ್ಪೋರೇಟ್‌ಗಳು ಪಾವತಿಸಿದ ತೆರಿಗೆ ಜಿಡಿಪಿಗಿಂತಲ... ಹಿಂದುಳಿದಿದೆ.

ದಿನಬೆಳಗಾದರೆ ಮಾಧ್ಯಮಗಳಲ್ಲಿ ಭಾರತದ ಕಂಪನಿಗ... ಸಾವಿರಾರು ಕೋಟಿ ಲಾಭ ಮಾಡಿರುವ ಸುದ್ದಿ... ಮಹಾಪೂರವೇ ಹರಿಯುತ್ತಿದೆ. ಅಂಬಾನಿ, ಟಾಟಾ, ಬಿ... ಅದಾನಿ, ಎಸ್ಸಾರ್, ಜಿಂದಾಲ್ ಮುಂತಾದ ಕಂಪನಿ... ಬಂಡವಾಳ ದ್ವಿಗುಣಗೊಳ್ಳುತ್ತಾ ಸಾಗುತ್ತಿದೆ. "ನಮ್ಮ... ಕಂಪನಿಗಳು ವಿದೇಶೀ ಕಂಪನಿಗಳನ್ನು ಸ್ವಾಧೀನಪಡಿಸಿಕೊಂ... ಸುದ್ದಿಗಳು, ಭಾರೀ ಗುತ್ತಿಗೆಗಳನ್ನು ಗಿಟ್ಟಿಸಿಕೊಂಡ ಸುದ್ದಿಗಳ... ಬಿತ್ತರಿಸಿ ಮಾಧ್ಯಮಗಳು ಸಂಭ್ರಮ ಆಚರಿಸುತ್ತವೆ.

ಆಯಾ ಕಂಪನಿ ಅಥವಾ ವ್ಯಕ್ತಿ ಗಳಿಸುವ ಆದಾಯ... ಅನುಗುಣವಾಗಿ ತೆರಿಗೆ ಸಂಗ್ರಹ ನೀತಿಯಿರಬೇಕೆಂಬು... ಕಾಮನ್‌ಸೆನ್ಸ್‌ನ ಸಂಗತಿ. ಆದರೆ ಅನಾದಿಯಿಂದಲ... ಭಾರತದ ನೀತಿ ಎಲ್ಲ ಕಾಮನ್‌ಸೆನ್ಸ್‌ಗಳಿಗೂ ತದ್ವಿರು...

ವ್ಯಕ್ತಿಗತ ತೆರಿಗೆದಾರರು ಹಾಗೂ ಕಾರ್ಪೋರೇ... ಕಂಪನಿಗಳಿಗೆ ತೆರಿಗೆ ವಿಧಿಸುವಾಗ ನಮ್ಮ ದೇಶದಲ್ಲಿ ವಿಭಿ... ಮಾನದಂಡಗಳನ್ನು ಅಳವಡಿಸಲಾಗುತ್ತಿದೆ. ವ್ಯಕ್ತಿಗತ ತೆರಿಗೆ... ಬಹುಪಾಲು ವೇತನಗಳಿಂದ ಸಂಗ್ರಹವಾಗುವಂಥದ್ದು. ... ತೆರಿಗೆಯನ್ನು ಸಂಬಳ ವಿತರಣೆಯಾಗುವ ಹಂತದ... ಕಡಿತಗೊಳಿಸಿ ಸರ್ಕಾರದ ಬೊಕ್ಕಸಕ್ಕೆ ಸೇರಿಸಲಾಗುತ್ತದೆ...

ಆದರೆ ಕಾರ್ಪೋರೇಟ್ ತೆರಿಗೆಗಳ ಸಂಗತಿ ಹಾಗ... ಈ ತೆರಿಗೆ ಪಾವತಿಸುವ ಸ್ವಾತಂತ್ರ್ಯ ಕಂಪನಿಗಳದ್ದೇ. ಎ... ರೀತಿಯ ಖರ್ಚುವೆಚ್ಚಗಳನ್ನು ಕಳೆದು ಬರುವ ನಿವ್ವ... ಲಾಭದಲ್ಲಿ ಇಂತಿಷ್ಟು ಶೇಕಡ ತೆರಿಗೆ ಪಾವತಿಸಿದ... ಮುಗಿದಂತೆ.

ಈ ನೆಲದ ಸಂಪನ್ಮೂಲ, ಮಾರುಕಟ್ಟೆ, ಮಾನ... ಶ್ರಮ ಎಲ್ಲವನ್ನೂ ಬಳಸಿಕೊಂಡು ಸಾವಿರಾರು ಕೋಟಿಗಳ... ಬಾಚಿಕೊಳ್ಳುತ್ತಿರುವ ಕಾರ್ಪೋರೇಟ್ ಧಣಿಗಳಿಗೆ, ಇದ... ಪ್ರತಿಯಾಗಿ ಕನಿಷ್ಠ ಪ್ರಮಾಣದ ತೆರಿಗೆ ಕಟ್ಟಬೇಕೆಂದರ... ಪ್ರಾಣಸಂಕಟ. ಹೀಗಾಗಿ ತೆರಿಗೆ ವಂಚಿಸಲು ನಾನಾ ...

ಕಪ್ಪು ಹಣಕ್ಕೆ ಯಾವ ಗಡಿ?

ವಿದೇಶಗಳಲ್ಲಿ ಭಾರತೀಯರು ಬಚ್ಚಿಟ್ಟಿರುವ ಕಪ್ಪುಹಣದ ಬಗ್ಗೆ ಇತ್ತೀಚಿನ ಕೆಲವು ವರ್ಷಗಳಲ್ಲಿ ಪದೇಪದೇ ಸುದ್ದಿಯಾಗುತ್ತಿದೆ. ಈಗಿನ ಪ್ರಧಾನಿ ನರೇಂದ್ರ ಮೋದಿ ಅಂಡ್ ಕಂಪನಿ ತಾವು ಅಧಿಕಾರಕ್ಕೆ ಬಂದರೆ ವಿದೇಶಗಳಲ್ಲಿರುವ ಕಪ್ಪುಹಣವನ್ನು ವಾಪಸ್ ಭಾರತಕ್ಕೆ ತರುವುದಾಗಿ ಬೊಗಳೆ ಬಿಟ್ಟದ್ದೇ ಬಿಟ್ಟದ್ದು.

ಆ ಬೊಗಳೆ ಮಾತುಗಳನ್ನು ಪಕ್ಕಕ್ಕಿಟ್ಟು ವಾಸ್ತವಾಂಶಗಳನ್ನು ಪರಿಶೀಲಿಸೋಣ.

ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿಗಾಗಿ ಸಂಘಟನೆ (ಒಇಸಿಡಿ)ಯಲ್ಲಿ ಭಾರತವನ್ನೂ ಒಳಗೊಂಡು 34 ಸದಸ್ಯ ರಾಷ್ಟ್ರಗಳಿವೆ. ಒಇಸಿಡಿ ಸಂಸ್ಥೆಯಲ್ಲಿ ಒಪ್ಪಿತ ನಿಯಮಾವಳಿ ಪ್ರಕಾರ, ಈ ದೇಶಗಳ ನಡುವಿನ ಆರ್ಥಿಕ ವಹಿವಾಟು ಹಾಗೂ ತೆರಿಗೆ ಪಾವತಿಗೆ ಸಂಬಂಧಿಸಿದ ಮಾಹಿತಿಗಳನ್ನು ಕಾಲಕಾಲಕ್ಕೆ ವಿನಿಮಯ ಮಾಡಿಕೊಳ್ಳಲಾಗುತ್ತಿದೆ.

2013-14ನೇ ಸಾಲಿನ ವ್ಯವಹಾರಗಳಿಗೆ ಸಂಬಂಧಿಸಿದ ಮಾಹಿತಿ ಇತ್ತೀಚೆಗೆ ಭಾರತ ಸರ್ಕಾರದ ಆರ್ಥಿಕ ಸಚಿವಾಲಯ ತಲುಪಿದೆ. ಆ ಮಾಹಿತಿ ಪ್ರಕಾರ ಕಳೆದ ಆರ್ಥಿಕ ವರ್ಷವೊಂದರಲ್ಲಿ 24,085 ತೆರಿಗೆ ವಂಚನೆ ಪ್ರಕರಣಗಳು ವಿವಿಧ ವಿದೇಶಿ ನೆಲಗಳಲ್ಲಿ ಪತ್ತೆಯಾಗಿವೆ.

10,372 ಪ್ರಕರಣಗಳು ನ್ಯೂಜಿಲ್ಯಾಂಡ್ ಬಂದರಲ್ಲೇ ಪತ್ತೆಯಾಗಿವೆ. ಉಳಿದಂತೆ ಸ್ವಿಸ್ - 4169, ಇಂಗ್ಲೆಂಡ್ - 3164, ಸ್ವೀಡನ್ - 2404, ಡೆನ್ಮಾರ್ಕ್ - 2145, ಫಿನ್‌ಲ್ಯಾಂಡ್ - 685, ಪೋರ್ಚುಗಲ್ - 625, ಜಪಾನ್ - 440 ... ಪಟ್ಟಿ ಹೀಗೆ ಮುಂದುವರೆಯುತ್ತದೆ.

ಈಗ ನಮ್ಮ ಮುಂದೆ ಇರುವ ಪ್ರಶ್ನೆಯಿಷ್ಟೆ. ಬೂಸಿ ಬಸ್ವಾ ಮೋದಿ ಈ ಮಾಹಿತಿಯನ್ನು ಆಧರಿಸಿ ಸೂಕ್ತ ತನಿಖೆ ನಡೆಸಿ ಬಡ ಭಾರತೀಯರ ಬೆವರಿನ ಫಲವನ್ನು ಬೊಕ್ಕಸ ಸೇರಿಸುವ ಕೆಲಸ ಮಾಡುತ್ತಾರೋ? ಅಥವಾ ಮಾಮೂಲಿಯಂತೆ ಕಳ್ಳರ ಕೂಟದ ಬಹುಪರಾಕಿನೊಂದಿಗೆ ಭ್ರಷ್ಟಾಚಾರದ ವಿರುದ್ಧ ತಮ್ಮ ಹೋರಾಟವನ್ನು ಟಿವಿ, ಪೇಪರ್‌ಗಳಲ್ಲಿ ಮುಂದುವರೆಸುತ್ತಾರೋ?

ಕಾರ್ಪೋರೇಟ್ ಸ್ವತ್ತಾದ ಸರ್ಕಾರಿ ಬ್ಯಾಂಕುಗಳ...

ಅಖಿಲ ಭಾರತ ಬ್ಯಾಂಕ್ ನೌಕರರ ಸಂಘ (AIBEA) ಕೆಲವು ತಿಂಗಳ ಹಿಂದೆ ಒಂದು ಪಟ್ಟಿ ಬಿಡುಗ... ಮಾಡಿದೆ. ಅದು ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲ ಮರುಪಾವತಿ ಮಾಡದೆ ಸಾವಿರಾರು ಕೋಟಿ ನ... ಉಂಟು ಮಾಡಿರುವ ಹತ್ತು ಭಾರಿ ಕಾರ್ಪೋರೇಟ್ ಕಂಪನಿಗಳ ಪಟ್ಟಿ.

1.	ಕಿಂಗ್‌ಫಿಷರ್ ಏರ್‌ಲೈನ್ಸ್	-	2673 ಕೋಟಿ
2.	ವಿನ್‌ಸಮ್ ಡೈಮಂಡ್ ಅಂಡ್ ಜ್ಯುವೆಲರಿ	-	26[illegible] ಕೋಟಿ
3.	ಎಲೆಕ್ಟ್ರೋಥರ್ಮ್ ಇಂಡಿಯಾ ಲಿ.	-	2211 ಕೋಟಿ.
4.	ಝೂಮ್ ಡೆವಲಪರ್ಸ್ ಪ್ರೈ ಲಿ	-	1810 ಕೋಟಿ
5.	ಸ್ಟರ್ಲಿಂಗ್ ಬಯೋ-ಟೆಕ್ ಲಿ	-	1732 ಕೋಟಿ
6.	ಎಸ್.ಕುಮಾರ್ಸ್ ನೇಷನ್‌ವೈಡ್	-	1692 ಕೋಟಿ
7.	ಸೂರ್ಯ ವಿನಾಯಕ ಇಂಡಸ್ಟ್ರೀಸ್	-	1446 ಕೋಟಿ
8.	ಕಾರ್ಪೋರೇಟ್ ಇಸ್ಪಾಟ್ ಅಲಾಯ್ಸ್	-	1360 ಕೋಟಿ
9.	ಫಾರ್‌ಎವರ್ ಪ್ರೀಸಿಯಸ್ ಜ್ಯುವೆಲರಿ	-	1254 ಕೋಟಿ
10.	ಸ್ಟೆರ್ಲಿಂಗ್ ಆಯಿಲ್ ರಿಸೋರ್ಸಸ್	-	1197 ಕೋಟಿ

ವಾಸ್ತವದಲ್ಲಿ ಇಂಥಾ ಒಂದು ಪಟ್ಟಿಯನ್ನು ಬ್ಯಾಂಕುಗಳ ಆಡಳಿತ ಮಂಡಳಿಯೇ ಸಿದ್ಧಪಡಿಸಬೇಕಾಗಿತ್ತು, ಆದರೆ ಬ್ಯಾಂಕುಗಳ ನೌಕರರ ಸಂಘ ಇಂಥದೊಂದು ಪಟ್ಟಿ ಬಿಡುಗಡೆ ಮಾಡಬೇಕಾಗಿ ಬಂದಿದ್ದು ವಿಪರ್ಯಾಸವೇ ... ಅಂದಹಾಗೆ ಈ ಪಟ್ಟಿಯ ಪ್ರಕಾರ ಕೇವಲ 50 ಕಾರ್ಪೋರೇಟ್ ಗ್ರಾಹಕರು ಬ್ಯಾಂಕುಗಳಿಗೆ 40,000 ಕೋ... ನಷ್ಟವುಂಟುಮಾಡಿದ್ದಾರೆ.

ಬೆಳೆ ಸಾಲವೆಂದೋ ಬಾವಿ ತೋಡಿಸಲೆಂದೋ ಸಾಲ ಕೇಳಲು ಹೋದ ರೈತರನ್ನು ನಮ್ಮ ಬ್ಯಾಂಕುಗಳು ಯ... ರೀತಿ ನಡೆಸಿಕೊಳ್ಳುತ್ತಿವೆ? ಮನೆ ಕಟ್ಟಲಿಕ್ಕೆಂದೋ ಅಥವಾ ಸಣ್ಣ ಪುಟ್ಟ ವ್ಯಾಪಾರ ಮಾಡಲೆಂದೋ ಸಾಲ ಕೇಳ... ಹೋಗುವ ಮಧ್ಯಮ ವರ್ಗದವರ ಬಗ್ಗೆ ಬ್ಯಾಂಕಿನ ಅಧಿಕಾರಿಗಳ ಧೋರಣೆ ಹೇಗಿರುತ್ತದೆ? ಒಂದುವೇಳೆ ... ಪಡೆದು ಯಾವುದೇ ಕಾರಣಕ್ಕೆ ಅದನ್ನು ತೀರಿಸಲಾಗದೆ ಹೋದರೆ ಬ್ಯಾಂಕುಗಳು ಯಾವ ರೀತಿಯ ಕ್ರಮಕ್ಕೆಗೊಳ್ಳುತ್ತ... ಯಾವುದೇ ಮುಲಾಜಿಲ್ಲದೆ ಬಡಪಾಯಿಗಳ ಆಸ್ತಿಯ ಜೊತೆ ಮಾನ ಮರ್ಯಾದೆಯನ್ನೂ ಹರಾಜು ಹಾಕುತ್ತವೆ ತಾ...

ಆದರೆ ಇಂಥಾ ನೀತಿ ಕಾರ್ಪೋರೇಟ್ ಕಂಪನಿಗಳಿಗೆ ಅನ್ವಯಿಸುವುದಿಲ್ಲ. ಎಲ್ಲ ನಿಯಮಗಳನ್ನು ಗಾಳಿಗೆ ತ... ಸಾವಿರಾರು ಕೋಟಿಗಳನ್ನು ಅವರ ಬಾಯಿಗೆ ಹಾಕಿದ ಬ್ಯಾಂಕುಗಳು, ಆ ಸಾಲವನ್ನು ವಸೂಲಿ ಮಾಡುವ ಗೋಜಿ... ಹೋಗುತ್ತಿಲ್ಲ ಎಂಬುದು ಒಂದು ವಿಚಿತ್ರ ಸತ್ಯ.

ವಿದೇಶಿ ಮುಸುಕಿನಲ್ಲಿ ಕಳ್ಳ ಹಣ

010ರ ಏಪ್ರಿಲ್‌ನಿಂದ 2013ರ ಮಾರ್ಚ್‌ವರೆಗಿನ ಮೂರು ವರ್ಷಗಳಲ್ಲಿ 8,78,962 ಕೋಟಿ ವಿದೇಶಿ ವಾಳ ಹೂಡಿಕೆಯಾಗಿದೆಯೆಂದರೆ ಹೊರದೇಶಗಳಿಂದ ಎಷ್ಟೊಂದು ಭಾರೀ ಪ್ರಮಾಣದ ಬಂಡವಾಳ ಹರಿದು ದೆ ಊಹಿಸಿಕೊಳ್ಳಿ.

ದೇಶದ ಅಭಿವೃದ್ಧಿಗಾಗಿ ವಿದೇಶಿ ಬಂಡವಾಳವನ್ನು ಆಕರ್ಷಿಸಬೇಕು ಎಂಬುದು ಈಗ ಚಲಾವಣೆಯಲ್ಲಿರುವ ಪ್ರಮುಖ ಆರ್ಥಿಕ ನೀತಿ. ಆದ್ದರಿಂದ ಇಂಥಾ ಹಣವನ್ನು ಆಕರ್ಷಿಸುವುದೇ ತಮ್ಮ ಸಾಧನೆಯೆಂಬಂತೆ ರಗಳು ಕೊಚ್ಚಿಕೊಳ್ಳುತ್ತಿವೆ.

ಆದರೆ ವಾಸ್ತವ ಸ್ಥಿತಿ ಬೇರೆಯೇ ಇದ್ದು ವಿದೇಶಿ ಬಂಡವಾಳದ ಹೆಸರಿನಲ್ಲಿ ಘನಘೋರ ದಂಧೆಯೇ ನಡೆಯುತ್ತಿದೆ. ಇತ್ತೀಚೆಗೆ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ಅಂಕಿ-ಅಂಶಗಳ ಪ್ರಕಾರ ಈ ಅವಧಿಯಲ್ಲಿ ಅಮೆರಿಕದಿಂದ ಬಂಡವಾಳ 50,615 ಕೋಟಿಗಳು, ಅಂದರೆ ಒಟ್ಟು ವಿದೇಶಿ ಬಂಡವಾಳದ ಶೇಕಡ 6ರಷ್ಟು ಮಾತ್ರ. ಷಸ್ ಎಂಬ ಪುಟ್ಟ ದ್ವೀಪ ರಾಷ್ಟ್ರದಿಂದ ಬಂದ ಹೂಡಿಕೆ ಬರೋಬ್ಬರಿ 3,33,979 ಕೋಟಿಗಳು! ಇದು ಈ ಯ ಒಟ್ಟು ವಿದೇಶಿ ಬಂಡವಾಳದ ಶೇಕಡ 38ರಷ್ಟು. 2001ರಿಂದ 2011ರ ನಡುವಿನ ಒಂದು ದಶಕವನ್ನು ಗೆ ತೆಗೆದುಕೊಂಡರೆ ಈ ಪ್ರಮಾಣ ಶೇ 41.8 ರಷ್ಟು!

ಪಾಲಿ ಮಾರಿಷಸ್, ಸಿಪ್ರಸ್, ಹಾಂಗ್‌ಕಾಂಗ್, ಸಿಂಗಾಪುರ, ಯುನೈಟೆಡ್ ಅರಬ್ ಎಮಿರೇಟ್ಸ್ ಮುಂತಾದ ದು ದೇಶಗಳೊಂದಿಗೆ ಪರಸ್ಪರ ಬಂಡವಾಳ ಹೂಡಿಕೆಯನ್ನು ಉತ್ತೇಜಿಸಲು ನಾನಾ ತೆರಿಗೆ ರಿಯಾಯಿತಿ ಒಪ್ಪಂದಗಳು ಯುಲ್ಲಿವೆ. ಹೀಗಾಗಿ ಮಾರಿಷಸ್‌ನಿಂದ ಒಳಬರುವ ಬಂಡವಾಳಕ್ಕೆ ಭಾರತದಲ್ಲಿ ಹೆಚ್ಚುವರಿ ತೆರಿಗೆ ಕಟ್ಟಬೇಕಿಲ್ಲ. ಶದ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳು ಹಾಗೂ ಅಕ್ರಮ ದಂಧೆಗಳಲ್ಲಿ ತೊಡಗಿರುವ ಉದ್ಯಮಿಗಳು ತಮ್ಮ ಹಣವನ್ನು ಮರುಹೂಡಿಕೆ ಮಾಡಲು ಇಂಥಾ ವಾಮಮಾರ್ಗವನ್ನು ಸಂಶೋಧಿಸಿದ್ದಾರೆ. ತೆರಿಗೆ ತಪ್ಪಿಸುವ ಉದ್ದೇಶದಿಂದ ವಿದೇಶಿ ಕಂಪನಿಗಳೂ ಕೂಡ ಮಾರಿಷಸ್ ಎಂಬ ಕಳ್ಳದಾರಿಯ ಮೂಲಕ ಭಾರತ ಪ್ರವೇಶಿಸುತ್ತಿದ್ದಾರೆ.

ಮಾರಿಷಸ್‌ನಂಥಾ ದೇಶಗಳಲ್ಲಿ ಒಂದು ಬೇನಾಮಿ ಕಂಪನಿ ನೋಂದಾಯಿಸುವುದು, ತಮ್ಮ ಬಳಿಯಿರುವ ಹಣವನ್ನು ಆ ಕಂಪನಿಯಲ್ಲಿ ತೊಡಗಿಸುವುದು, ಅಲ್ಲಿಂದ ಆ ಹಣ ಮತ್ತೆ ಭಾರತಕ್ಕೆ ವಿದೇಶಿ ಬಂಡವಾಳವೆಂಬ ಪಟ್ಟಿಯೊಂದಿಗೆ ರಾಜಾರೋಷವಾಗಿ ವಾಪಸ್ ತಂದು ರಾಜಮರ್ಯಾದೆಯೊಂದಿಗೆ ಭಾರತದ ಷೇರು ಮಾರುಕಟ್ಟೆಯಲ್ಲೋ ವಾ ಪಾಲುದಾರಿಕೆ ವ್ಯವಹಾರಗಳಲ್ಲೋ ಹೂಡಿಕೆ ಮಾಡಿ ಮತ್ತೆ ಸೂಪರ್ ಲಾಭ ಪಡೆಯುವುದು. ಈ ಗೋಲ್‌ಮಾಲ್ ಹಾರವನ್ನು 'ರೌಂಡ್ ಟ್ರಿಪ್ಪಿಂಗ್' ಎಂದು ಕರೆಯಲಾಗುತ್ತದೆ.

ರಿಸರ್ವ್ ಬ್ಯಾಂಕ್ ಇತ್ತೀಚೆಗೆ ನಡೆಸಿದ ಒಂದು ಅಧ್ಯಯನದ ಪ್ರಕಾರ ಕಪ್ಪು ಹಣದ ಪ್ರಮಾಣ ದೇಶದ ಜಿಡಿಪಿಯ ದಷ್ಟಾಗಿದೆಯಂತೆ. ಹೀಗೆ ಕಪ್ಪುಹಣ ತೀರಾ ಹೆಚ್ಚಾಗಲು ಪ್ರಮುಖ ಕಾರಣ ಲೆಕ್ಕಕ್ಕೆ ಸಿಗದ ದಂಧೆಗಳು ತವಾಗಿರುವುದು. ಗಣಿಗಾರಿಕೆ, ರಿಯಲ್ ಎಸ್ಟೇಟ್, ಖಾಸಗಿ ಶಿಕ್ಷಣ ಸಂಸ್ಥೆಗಳ ಕ್ಯಾಪಿಟೇಷನ್, ಮೂಲ ರ್ಯ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಭಾರೀ ಕಾಮಗಾರಿಗಳ ಅವ್ಯವಹಾರ, ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ಸುವ ದಂಧೆ ಮುಂತಾದೆಡೆಗಳಲ್ಲಿ ಭಾರೀ ಪ್ರಮಾಣದ ಕಪ್ಪುಹಣ ಶೇಖರಣೆಯಾಗುತ್ತಿರುವುದು ಸೂರ್ಯ ಸತ್ಯ. ಬೆಕ್ಕಿಗೆ ಗಂಟೆ ಕಟ್ಟುವವರ್‍ಯಾರೂ ಸದ್ಯಕ್ಕೆ ಕಾಣುತ್ತಿಲ್ಲ.

ರ್ಗಗಳನ್ನು ಕಂಡುಕೊಂಡಿದ್ದಾರೆ. ಕಂಪನಿ ತೆರಿಗೆ ನೆಯ ಬಗ್ಗೆ ಅಧ್ಯಯನ ನಡೆಸಿರುವ ತಜ್ಞರು ಹೇಳುವ ಕಾರ್ಪೊರೇಟ್ ಕಂಪನಿಗಳು ತೆರಿಗೆ ವಂಚಿಸಲು ವಾಮಮಾರ್ಗಗಳನ್ನು ಅನುಸರಿಸುತ್ತಿದ್ದಾರೆ.

1) ಲೆಕ್ಕಪತ್ರದಲ್ಲಿ ವೆಚ್ಚಗಳನ್ನು ಅತಿಯಾಗಿ ತೋರಿಸುವ ಳಕ ಲಾಭದ ಪ್ರಮಾಣವನ್ನು ಕಡಿಮೆ ತೋರಿಸುವುದು

2) ಮಾರಾಟ ಇತ್ಯಾದಿಗಳ ಮೂಲಕ ತಮಗೆ ಬರುವ ಯದ ಮೊತ್ತವನ್ನು ಕಡಿಮೆ ದಾಖಲಿಸುವುದು

3) ದಾಸ್ತಾನು ಮೌಲ್ಯವನ್ನು ಕಡಿತಗೊಳಿಸುವುದು

4) ತಮ್ಮ ಆದಾಯವನ್ನು ರಿಯಲ್ ಎಸ್ಟೇಟ್, ಷೇರು ರುಕಟ್ಟೆ ಮುಂತಾದವುಗಳಲ್ಲಿ ತೊಡಗಿಸಿ ಯಂತ್ರಗಳ ದಿಯಿಂದೋ, ರಿಪೇರಿಯಿಂದೋ ಲೆಕ್ಕ ತೋರಿಸುವುದು


ದಿ ತಂತ್ರಗಳ ಬಳಕೆ ಭಾರತದ ಕಂಪನಿ ವಲಯದಲ್ಲಿ ಕವಾಗಿದೆ.

ಕೆಲವು ಉದಾಹರಣೆಗಳನ್ನು ನೋಡೋಣ.

ಪ್ರಧಾನಿ ನರೇಂದ್ರ ಮೋದಿಯ ಅತ್ಯಂತ ವಲಯದಲ್ಲಿರುವ ಉದ್ಯಮಿಗಳಲ್ಲಿ ಗೌತಮ್ ಅದಾನಿಯೂ ಒಬ್ಬ. ಈತ ಕಳೆದ ತಿಂಗಳು ನಮ್ಮ ಉಡುಪಿ ಜಿಲ್ಲೆಯಲ್ಲಿ ಉಷ್ಣ ವಿದ್ಯುತ್ ಸ್ಥಾವರವೊಂದನ್ನು 6000 ಕೋಟಿಗಳಿಗೆ ಖರೀದಿಸಿ ಕರ್ನಾಟಕದಲ್ಲೂ ಸುದ್ದಿ ಮಾಡಿದ್ದ. ಹೀಗೆ ರಾಜಕಾರಣಿಗಳು, ಭ್ರಷ್ಟ ಅಧಿಕಾರಿಗಳ ಕೂಟದೊಂದಿಗೆ ಶಾಮೀಲಾಗಿ ದೇಶವಿದೇಶಗಳಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಿಸುತ್ತಿರುವ ಈ ಆಸಾಮಿ ತೆರಿಗೆ ವಂಚಿಸಿರುವ ಪ್ರಕರಣಗಳಿಗೆ ಲೆಕ್ಕವಿಲ್ಲ. ತೀರಾ ಇತ್ತೀಚೆಗೆ ಸುಮಾರು 600 ಕೋಟಿ ಮೊತ್ತದ ಸುಳ್ಳು ಇನ್‌ವಾಯ್ಸ್ ಸೃಷ್ಟಿಯ ಪ್ರಕರಣದಲ್ಲಿ ಸಿಬಿಐ ನೋಟಿಸ್ ಜಾರಿ ಮಾಡಿ, ತನಿಖೆ ಆರಂಭಿಸಿದೆ. ತಮ್ಮದೇ ಬೇನಾಮಿ ಕಂಪನಿಗೆ ಲಾಭದ ಹಣ ವರ್ಗಾವಣೆ ಮಾಡಿ, ಬೇರೊಂದು ಮಾರ್ಗದಲ್ಲಿ ಮರುಹೂಡಿಕೆ ಮಾಡುವ ಭಾರೀ ಷಡ್ಯಂತ್ರವೇ ಇದರ ಹಿಂದಿದೆ ಎಂಬುದು ಸಿಬಿಐನ ಗುಮಾನಿ.

ಅದಾನಿ ಗ್ರೂಪ್‌ನ ಈ ಅಕ್ರಮ ಪತ್ತೆಯಾದ ಹಿನ್ನೆಲೆಯಲ್ಲಿ ಕಳೆದ ಆಗಸ್ಟ್ 11ನೇ ತಾರೀಕು ಸಿಬಿಐ ನಿರ್ದೇಶಕರಾಗಿರುವ ರಂಜಿತ್ ಸಿನ್ಹಾ ಹಣಕಾಸು ಸಚಿವ ಅರುಣ್ ಜೈಟ್ಲಿಯವರಿಗೆ ಈ ಬಗ್ಗೆ ಒಂದು ಪತ್ರ ಬರೆದಿದ್ದಾರೆ. ಸಿನ್ಹಾ ಪ್ರಕಾರ ಇದು ಕೇವಲ ಒಂದು

ಅರುಣ್ ಜೇಟ್ಲಿ



ಉದಾಹರಣೆ ಮಾತ್ರವಾಗಿದ್ದು ಇಂಥಾ ಸಾವಿರಾರು ಪ್ರಕರಣಗಳು ತೆರೆಮರೆಯಲ್ಲಿ ನಡೆಯುತ್ತಲೇ ಇವೆ.

ಮತ್ತೊಂದು ಉದಾಹರಣೆ ನೋಡಿ. 2013ರ ಆಗಸ್ಟ್ ತಿಂಗಳಿನಲ್ಲಿ ನಡೆದ ಘಟನೆಯಿದು. ಕಲ್ಲಿದ್ದಲು ಹಂಚಿಕೆಯ ಅಕ್ರಮದ ಬಗ್ಗೆ ತನಿಖೆ ನಡೆಸುತ್ತಿರುವ ಸಿಬಿಐ ತಂಡ ಹಿಂಡಾಲ್ಕೋ ಕಂಪನಿಯ ದಾಖಲೆ ಪತ್ರಗಳನ್ನು ವಶಪಡಿಸಿಕೊಂಡು ತನಿಖೆ ಆರಂಭಿಸಿತು. ರಹಸ್ಯ ಸಂಕೇತಗಳಲ್ಲಿ ನಮೂದಾಗಿದ್ದ ಹಣ ಪಾವತಿ ವಿವರದಲ್ಲಿ ಬಿರ್ಲಾ ಸಮೂಹಕ್ಕೆ 25 ಕೋಟಿ ಹಣ ಪಾವತಿಯಾದ ಬಗ್ಗೆ ವಿವರಗಳು ಲಭ್ಯವಾದವು. ಇದರ ಜಾಡನ್ನು ಹಿಡಿದು ನವದೆಹಲಿಯಲ್ಲಿರುವ ಬಿರ್ಲಾ ಸಮೂಹದ ಕಚೇರಿಗೆ ದಾಳಿ ನಡೆಸಿದಾಗ ಯಾವುದೇ ಲೆಕ್ಕ ಪತ್ರವಿಲ್ಲದ 25 ಕೋಟಿ ಮೊತ್ತ ಪತ್ತೆಯಾಗಿತ್ತು. ಅಷ್ಟು ಮಾತ್ರವಲ್ಲ; ಸರಿಯಾಗಿ ಇದೇ ಅವಧಿಯಲ್ಲಿ ಬಿರ್ಲಾ ಒಡೆತನದ ಬಿರ್ಲಾ ಟ್ರಸ್ಟ್‌ನಿಂದ ನೂರಾರು ಸಂಸದರು ಹಾಗೂ ಇತರ ರಾಜಕಾರಣಿಗಳಿಗೆ ಹಣ ಸಂದಾಯವಾಗಿರುವ ವಿವರಗಳೂ ಬಯಲಾಗಿತ್ತು. ನಂತರದ ಬೆಳವಣಿಗೆಗಳು ಎಲ್ಲ ನಿಗೂಢ.

ಕಾರ್ಪೊರೇಟ್ ಕಂಪನಿಗಳು ತೆರಿಗೆ ವಿನಾಯಿತಿಯಿರುವ ವಿದೇಶಿ ನೆಲದಲ್ಲಿ ತಮ್ಮದೇ ಪ್ರಾಕ್ಸಿ ಕಂಪನಿಗಳನ್ನು ಸ್ಥಾಪಿಸಿ ನಾನಾ ಕಳ್ಳಮಾರ್ಗಗಳ ಮೂಲಕ ತಮ್ಮ ಲಾಭವನ್ನು ವಿದೇಶಕ್ಕೆ ಸಾಗಿಸುವ ದೇಶದ್ರೋಹಿ ಕೃತ್ಯಗಳಲ್ಲಿ ತೊಡಗಿಸಿಕೊಂಡಿವೆ. ಇದನ್ನು "ರೌಂಡ್ ಟ್ರಿಪ್ಪಿಂಗ್" ಎಂದು ಕರೆಯಲಾಗುತ್ತದೆ. ಈ ವಿಷಯದಲ್ಲಿ ಆದಾಯ ತೆರಿಗೆ ಇಲಾಖೆಯ ಭ್ರಷ್ಟ ಅಧಿಕಾರಿಗಳು ಕಂಪನಿಗಳೊಂದಿಗೆ ಕೈಜೋಡಿಸಿರುವುದು ಮಾಮೂಲಿ.

ನಮ್ಮಲ್ಲಿ ತೆರಿಗೆ ವಸೂಲಿಗೆ ದಕ್ಷ ಹಾಗೂ ಪ್ರಾಮಾಣಿಕ ಪ್ರಯತ್ನಗಳು ತೀರಾ ಅಪರೂಪ. ಒಂದುವೇಳೆ ಅಂಥದ್ದೇನಾದರೂ ನಡೆದ ಪಕ್ಷದಲ್ಲಿ ಅಂಥವುಗಳನ್ನು ಪ್ರಶ್ನಿಸಿ ಇನ್‌ಕಮ್ ಟ್ಯಾಕ್ಸ್ ಟ್ರಿಬ್ಯೂನಲ್‌ಗಳ ಮೊರೆ ಹೋಗುವ ವ್ಯವಸ್ಥೆಯೂ ಇಲ್ಲಿದೆ. ಹೀಗೆ ಆದಾಯ ತೆರಿಗೆ ದಾಳಿಯ ಕೇಸುಗಳಲ್ಲಿ ಕೋಟಿಗಟ್ಟಲೆ ಹಣ, ಒಡವೆ ಇತ್ಯಾದಿಗಳನ್ನು ವಶಪಡಿಸಿಕೊಂಡರೂ ಅಂತಿಮ ಪರಿಣಾಮ ತಿಳಿದದ್ದೇ.

ಅರುಣ್ ಜೈಟ್ಲಿಯಾಗಲಿ, ನರೇಂದ್ರ ಮೋದಿಯಾಗಲಿ ಇಂಥಾ ಪ್ರಕರಣಗಳನ್ನು ತಡೆಗಟ್ಟುತ್ತಾರೆ ಎಂದು ನಿರೀಕ್ಷೆ ಮಾಡುವುದು ಮೂರ್ಖತನ. ಯಾಕೆಂದರೆ ಈ ಬಾರಿ ಅವರ ಪಕ್ಷ ಭಾರೀ ಬಹುಮತದಿಂದ ಗೆದ್ದು ಬಂದಿದ್ದೇ ಅಂಬಾನಿ, ಅದಾನಿಯಂಥ ಕಾರ್ಪೊರೇಟ್ ಕುಳಗಳ ಬೆಂಬಲದಿಂದ ಎಂಬುದು ಈಗ ಬಹಿರಂಗ ಸತ್ಯ.

ಒಂದೆಡೆ ಕಾರ್ಪೊರೇಟ್ ಕಂಪನಿಗಳು ಪ್ರತಿ ತ್ರೈಮಾಸಿಕದಲ್ಲಿ ಸಾವಿರಾರು ಕೋಟಿಗಳ ಲಾಭವನ್ನು ಬಾಚುತ್ತಿದ್ದರೆ ಮತ್ತೊಂದೆಡೆ ದಿನಬಳಕೆ ವಸ್ತುಗಳ ಬೆಲೆ ತಾರಕಕ್ಕೇರಿ ಜನಸಾಮಾನ್ಯರ ಬದುಕು ದುಸ್ತರವಾಗಿದೆ.

ಕಾರ್ಪೊರೇಟ್ ಕಂಪನಿಗಳಿಗೆ ಕೆಂಪುಹಾಸು ಹಾಸುವ ಸರ್ಕಾರಗಳು ಜನಸಾಮಾನ್ಯರಿಂದ ತೆರಿಗೆ ವಸೂಲಿ ಮಾಡುವ ವಿಷಯದಲ್ಲಿ ಮಾತ್ರ ನೇರ ಮತ್ತು ನಿಷ್ಠುರ. ಸರ್ಕಾರಗಳ ನೇರ ನಿಯಂತ್ರಣದಲ್ಲಿರುವ ರೈಲು ದರ, ಪೆಟ್ರೋಲ್-ಡೀಸೆಲ್ ದರ, ವಿದ್ಯುತ್ ದರ, ಬಸ್ ದರ, ನೀರಿನ ದರ ಎಲ್ಲವೂ ಯದ್ವಾತದ್ವ ಏರುತ್ತಲೇ ಇವೆ. ಆಹಾರ ಪದಾರ್ಥ, ತರಕಾರಿಗಳ ಬೆಲೆಯಂತೂ ಯಾವುದೇ ಅಂಕೆಗೆ ಸಿಗುತ್ತಿಲ್ಲ. ಉದಾಹರಣೆಗೆ ವರ್ಷಕ್ಕೆ 3 ಲಕ್ಷಕ್ಕಿಂತ ಹೆಚ್ಚಿನ ವೇತನ ಪಡೆಯುವ ಸರ್ಕಾರಿ ಅಥವಾ ಖಾಸಗಿ ನೌಕರರ ಸಂಬಳದಿಂದಲೇ ನೇರವಾಗಿ ತೆರಿಗೆಯನ್ನು ಕಡಿತಗೊಳಿಸಿ ಸರ್ಕಾರದ ಬೊಕ್ಕಸ ಸೇರಿಸಲಾಗುತ್ತದೆ. ಬೆಲೆಯೇರಿಕೆ, ರೋಗರುಜಿನ ಮುಂತಾದ ವ್ಯಕ್ತಿಗತ ಸಮಸ್ಯೆಗಳು ಏನೇ ಇದ್ದರೂ, ಬದುಕು ದುಸ್ತರವಾಗಿದ್ದರೂ ತೆರಿಗೆ ಮೊತ್ತ ಮಾತ್ರ ಕಡಿಮೆಯಾಗುವುದಿಲ್ಲ.

ನಮ್ಮಲ್ಲಿ ನಿಜಕ್ಕೂ ಪ್ರಜೆಗಳ ಪರವಾದ ಪ್ರಜಾಪ್ರಭುತ್ವ ಅಸ್ತಿತ್ವದಲ್ಲಿದ್ದಿದ್ದರೆ ತೆರಿಗೆ ಸಂಗ್ರಹಣೆಯ ದರದಲ್ಲಿ ಜನಸಾಮಾನ್ಯರ ತೆರಿಗೆಗಳಿಗೆ ವಿನಾಯಿತಿ ನೀಡಿ ಕಾರ್ಪೊರೇಟ್ ತೆರಿಗೆ ಹೆಚ್ಚಾಗಬೇಕಿತ್ತು. ಆದರೆ ದೇಶದ ರಾಜಕೀಯದಲ್ಲಿ ದಿನೇದಿನೇ ಕಾರ್ಪೊರೇಟ್ ಕಂಪನಿಗಳ ಹಿಡಿತ ಹೆಚ್ಚುತ್ತಲೇ ಸಾಗಿದೆ.

ಕಳೆದ ಸಾಲಿನಲ್ಲಿ ಹಾಕಿಕೊಂಡ ಕಾರ್ಪೊರೇಟ್ ತೆರಿಗೆ ಸಂಗ್ರಹದ ಗುರಿ 4,20,000 ಕೋಟಿಗಳು. ಸರ್ಕಾರಗಳಿಗೆ ತಾವೇ ಹಾಕಿಕೊಂಡ ಗುರಿಯನ್ನೂ ಮುಟ್ಟುವ ಇಚ್ಛಾಶಕ್ತಿಯಿಲ್ಲದೆ 27,000 ಕೋಟಿಗಳಷ್ಟು ಹಿಂದೆ ಬಿದ್ದಿದ್ದಾರೆ.

ನಮ್ಮ ರಾಜಕೀಯ ವ್ಯವಸ್ಥೆ ಔದ್ಯಮಿಕ ವಾತಾವರಣವನ್ನು ಉತ್ತೇಜಿಸುವ ಹೆಸರಿನಲ್ಲಿ ಕಾರ್ಪೊರೇಟ್ ಕಂಪನಿಗಳ ಲೂಟಿಗೆ ದಿಡ್ಡಿ ಬಾಗಿಲು ತೆರೆದಿಟ್ಟು, ಅವುಗಳ ಯಾವುದೇ ಅಕ್ರಮದ ವಿರುದ್ಧ ಚಕಾರವನ್ನೂ ಎತ್ತದ ದೈನೇಸಿ ಸ್ಥಿತಿ ತಲುಪಿದೆ.

ಹೀಗೇ ನಾನಾ ವಾಮಮಾರ್ಗಗಳ ಮೂಲಕ ಸಂಪತ್ತನ್ನು ರಾಶಿ ಹಾಕಿಕೊಳ್ಳುವ ಕಂಪನಿ ಧಣಿಗಳು ಅದನ್ನು ಷೇರು ಮಾರುಕಟ್ಟೆಯಲ್ಲೋ ಬೇನಾಮಿ ಹೆಸರಿನ ಕಂಪನಿಗಳಲ್ಲೋ ತೊಡಗಿಸುತ್ತಾರೆ. ಅಥವಾ ಹತ್ತಾರು ಕಳ್ಳದಾರಿಗಳ ಮೂಲಕ ವಿದೇಶಗಳಲ್ಲಿ ಹೂಡಿಕೆ ಮಾಡುತ್ತಾರೆ ಅಥವಾ ಬಚ್ಚಿಡುತ್ತಾರೆ.

ಫೋರ್ಬ್ಸ್ ಶ್ರೀಮಂತರ ಪಟ್ಟಿಗೆ ಹೆಚ್ಚುಹೆಚ್ಚು ಸೇರ್ಪಡೆಯಾಗುತ್ತಿರುವ ಧಣಿಗಳ ಬಗ್ಗೆ ಭಾರತದ ಮಾಧ್ಯಮಗಳು ಪರಾಕು ಹಾಕುತ್ತಿವೆ. ಅದೇ ಸಂದರ್ಭದಲ್ಲಿ ಬಡವರಿಗೆ ನೀಡಲಾಗುತ್ತಿರುವ ಹುಳುಕು ಅಕ್ಕಿಯ ಬಗ್ಗೆ ಉಗ್ರವಾಗಿ ಟೀಕಿಸುತ್ತಿವೆ.

ಸದ್ಯದಲ್ಲೇ ಭಾರತ ಎಚ್ಚೆತ್ತುಕೊಳ್ಳುತ್ತದೆ ಎಂದು ನಿರೀಕ್ಷಿಸಬಹುದೆ?

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ರ್ನಾಟಕ ಕೋಮು ಸೌಹಾರ್ದ ವೇದಿಕೆ

ಯು.ಆರ್.ಅನಂತಮೂರ್ತಿಯವರಿಗೆ ಶ್ರದ್ಧಾಂಜಲಿ : ಮಾತು ಸೋಲಬಾರದು

ವಿಚಾರ ಗೋಷ್ಠಿ

ಸೆಪ್ಟೆಂಬರ್ 27ರ ಶನಿವಾರ, ಸಂಜೆ 4ರಿಂದ , ಎಸ್‌ಸಿಎಂ ಹೌಸ್, ಮಿಷನ್ ರಸ್ತೆ (ಕಾರ್ಪೊರೇಷನ್ ಕಚೇರಿ ಹಿಂಭಾಗ), ಬೆಂಗಳೂರು

ಪ್ರಸ್ತಾವನೆ : **ಪ್ರೊ.ವಿ.ಎಸ್.ಶ್ರೀಧರ**
ಫೆಲೋ, ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯ, ಬೆಂಗಳೂರು

ಭಾಗವಹಿಸುವವರು : **ಗಿರೀಶ್ ಕಾರ್ನಾಡ್**
ಹಿರಿಯ ಲೇಖಕರು

ರಹಮತ್ ತರೀಕೆರೆ
ಪ್ರಾಧ್ಯಾಪಕರು, ಹಂಪಿ ಕನ್ನಡ ವಿ.ವಿ.

ದಿನೇಶ್ ಅಮೀನ್ ಮಟ್ಟು
ಹಿರಿಯ ಪತ್ರಕರ್ತರು

ಪ್ರೊ.ಮಲ್ಲಿಕಾ ಘಂಟಿ
ಕುಲಸಚಿವರು, ಕುವೆಂಪು ವಿವಿ

ಮಾವಳ್ಳಿ ಶಂಕರ್ ರಾಜ್ಯ ಸಂಚಾಲಕರು, ದಸಂಸ (ಅಂಬೇಡ್ಕರ್‌ವಾದ)

ಕೆ.ಫಣಿರಾಜ್
ಚಿಂತಕರು ಮತ್ತು ಉಪಾಧ್ಯಕ್ಷರು
ಕ.ಕೋ.ಸೌ.ವೇ. ಉಡುಪಿ

ಕೆ.ಎಲ್.ಅಶೋಕ್
ರಾಜ್ಯ ಪ್ರಧಾನ ಕಾರ್ಯದರ್ಶಿ,
ಕ.ಕೋ.ಸೌ.ವೇ

ಅಧ್ಯಕ್ಷತೆ : **ಗೌರಿ ಲಂಕೇಶ್**
ಸಂಪಾದಕರು 'ಲಂಕೇಶ್' ವಾರಪತ್ರಿಕೆ

ಯು.ಆರ್.ಅನಂತಮೂರ್ತಿಯವರು ಕನ್ನಡದ ಅತ್ಯುತ್ತಮ ಸಾಹಿತಿಗಳಲ್ಲೊಬ್ಬರು ಮಾತ್ರವಾಗಿರದೆ, ತಮ್ಮ ತಾರುಣ್ಯದ ದಿನಗಳಿಂದಲೇ ತನ್ನ ಪರಿಸರದ ವಿದ್ಯಮಾನಗಳಿಗೆ ವೈಚಾರಿಕವಾಗಿ ಪ್ರತಿಕ್ರಿಯಿಸುತ್ತ ಬಂದವರಾಗಿದ್ದರು; ಹೀಗಾಗಿ ಸಾಹಿತ್ಯ ರಚನೆಯ ಕಾಯಕ ಅವರಿಗೆ, ತನ್ನ ಕಾಲ-ದೇಶಗಳ ಆಗುಹೋಗುಗಳೊಂದಿಗಿನ ವೈಚಾರಿಕ ವಾಗ್ವಾದವೂ ಆಗಿತ್ತು. ಕನ್ನಡದ 'ಆಡುನುಡಿ' ಅವರಿಗೆ ದೈನಂದಿನ ಸಂವಹನಾ ಮಾಧ್ಯಮವಾಗಿರುತ್ತಲೇ, ಹಳೆಯ ವಿಚಾರಗಳ ತಿರುಳನ್ನು ಕಂಡರಿಸುವ, ಹೊಸ ವೈಚಾರಿಕತೆ ಹರಳುಗಟ್ಟುವ, ಎರಡರ ನಡುವೆ ವಾಗ್ವಾದವನ್ನು ಸಾಧ್ಯಗೊಳಿಸಬಲ್ಲ ವಿಚಾರತತ್ವ ರಚನೆಯ ಭಂಡಾರವೂ ಆಗಿತ್ತು. ಕುಶಲ ವಾಗ್ಮಿಯಾಗಿದ್ದ ಅವರು 1950ರಿಂದಲೂ ಪ್ರಚಲಿತ ವಿದ್ಯಮಾನಗಳ ಕುರಿತು ತನ್ನ ಓರಗೆಯವರ ನಿಲುವುಗಳಿಗೆ ಸ್ಪಂದನೆ-ಪ್ರತಿಕ್ರಿಯೆಗಳನ್ನು ನೀಡುತ್ತಾ, ಕನ್ನಡದಲ್ಲಿ ಭಿನ್ನಮತಗಳು ಬಹಿರಂಗದಲ್ಲಿ, ಗೌರವಯುತವಾಗಿ ಚರ್ಚೆಗೊಳಗಾಗುವ ವಾತಾವರಣ ನಿರ್ಮಿಸಿದ ಪ್ರಮುಖರ ಪರಂಪರೆ ಬೆಳೆಸಿದವರು. ಅನಂತಮೂರ್ತಿ,ಕಳೆದ ಎರಡು ದಶಕದಲ್ಲಿ, ಕೋಮುವಾದ ಮತ್ತು ಜಾಗತೀಕರಣಗಳು ಸೃಷ್ಟಿಸಿರುವ ಸಾಮಾಜಿಕ ತಲ್ಲಣಗಳನ್ನು ಅರಿತು, ಪ್ರಸ್ತುತ ವಿದ್ಯಮಾನಗಳಿಗೆ, ಪ್ರತಿಕೂಲ ಸಾಮಾಜಿಕ ಸನ್ನಿವೇಶದಲ್ಲೂ ನಿರ್ಭಿಡೆಯಿಂದ ತೀವ್ರವಾಗಿ ಪ್ರತಿಕ್ರಿಯಿಸುವ ಮೂಲಕ ನಮ್ಮ ಕಾಲದ 'ಸಾರ್ವಜನಿಕ ಬುದ್ಧಿಜೀವಿ'ಯಾದವರು. ಕರ್ನಾಟಕದಲ್ಲೂ, ರಾಷ್ಟ್ರಮಟ್ಟದಲ್ಲೂ ಅನಂತಮೂರ್ತಿಯವರ ವಿಚಾರಗಳಿಗೆ ಸ್ಪಂದನೆ-ಭಿನ್ನಮತಗಳು ಸತತವಾಗಿ ವ್ಯಕ್ತವಾಗುತ್ತಿತ್ತು; ಅನಂತಮೂರ್ತಿ, ಮುಖ್ಯವಾಗಿ ಭಿನ್ನಮತೀಯರ ಜೊತೆ ಚರ್ಚೆಗೆ ತೊಡಗಿಕೊಂಡು, ತಮ್ಮ ವಿಚಾರಗಳನ್ನೂ ಮರುಪರಿಶೀಲಿಸಿಕೊಳ್ಳುತ್ತಿದ್ದರು, ಎದುರಿನವರೂ ತಮ್ಮ ವಿಚಾರವನ್ನು ವಿಸ್ತರಿಸಿಕೊಳ್ಳುವ ಅವಕಾಶ ಕಲ್ಪಿಸುತ್ತಿದ್ದರು; 'ಮಾತು' ಅವರಿಗೆ ಭಿನ್ನಮತವನ್ನು ಎದುರುಗೊಳ್ಳುವ, ವಿಸ್ತರಿಸುವ ಕ್ರಿಯಾರಂಗವಾಗಿತ್ತು. ಇಂತಹ ಚಿಂತಕ ಇಂದು ನಮ್ಮನ್ನಗಲಿದ್ದಾರೆ: ಅವರ ವಿಚಾರಗಳಿಗೆ ಸ್ಪಂದಿಸುತ್ತಾ, ಸಾಧ್ಯಾಂತ ಭಿನ್ನಮತವನ್ನು ತೋರುತ್ತಾ, ವರ್ತಮಾನದ ಬಿಕ್ಕಟ್ಟುಗಳನ್ನು ಎದುರಿಸುವ ವೈಚಾರಿಕತೆಯನ್ನು ವಿಸ್ತರಿಸುವುದೇ ಅನಂತಮೂರ್ತಿಯವರಿಗೆ ಸಲ್ಲಿಸುವ ಅರ್ಥಪೂರ್ಣ ಶ್ರದ್ಧಾಂಜಲಿ. ಈ ವಿಚಾರ ಗೋಷ್ಠಿಗೆ ತಮಗೆ ಸ್ವಾಗತ.

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ:
9448256216, 8123034361

ಈ ಭೂಮಿಯನ್ನು ಹೀಗೆ ಪ್ರೀತಿಸಿದವರು ಇನ್ನೊಬ್ಬರಿಲ್ಲ

ಬಾಗಲಕೋಟ ಜಿಲ್ಲೆಯ ಹುನಗುಂದ ಪಟ್ಟಣದಲ್ಲಿನ ಗುದ್ದಲಿ ಕಾಯಕಯೋಗಿ ಬಸವಪ್ಪ ಹಾದಿಮನಿ ಶರಣ ತತ್ತ್ವದರ್ಶನ ಟ್ರಸ್ಟ್‌ನವರು 2014ನೇ ಆಗಸ್ಟ್ 25ರಂದು ಏರ್ಪಡಿಸಿದ್ದ ಬಸವಪ್ಪ ಶರಣರ 33ನೇ ಪುಣ್ಯಸ್ಮರಣೋತ್ಸವದಲ್ಲಿ ನಾನು ಪಾಲ್ಗೊಂಡಿದ್ದೊಂದು ಅಪೂರ್ವ ಅನುಭವ. 'ನಮ್ಮ ಮಧ್ಯೆ ಇಂಥವರೊಬ್ಬರು ಇದ್ದರೆ!' ಎಂದು ಮತ್ತೆ ಮತ್ತೆ ಯೋಚಿಸುವಂಥ ವ್ಯಕ್ತಿತ್ವ ಅವರದು.

ಬಸವಪ್ಪ ಶರಣರಿಗೆ ಗುದ್ದಲಿ ಕಾಯಕ ಎಂಬುದು ದೇವರ ಜೊತೆ ಮಾತನಾಡುವ ಕ್ರಿಯೆಯಾಗಿತ್ತು. ಅವರಿಗೆ ದುಡಿಯುವ ಆನಂದ ಬಿಟ್ಟರೆ ಇನ್ನಾವ ಲೌಕಿಕ ಆನಂದದ ಪರಿವೆಯೆ ಇರುತ್ತಿರಲಿಲ್ಲ. ಕಾಯಕ ನಿಂತಾಗ ಮಾತ್ರ ಧ್ಯಾನದ ಮೂಲಕ ಅವರು ದೇವರ ಸಾನಿಧ್ಯ ಪಡೆಯುವಂಥ ಅಚ್ಚಲಿಂಗೈಕ್ಯ ಸ್ಥಿತಿಯನ್ನು ಹೊಂದಿದವರಾಗಿರುತ್ತಿದ್ದರು.

ಶರಣಸತಿ ಲಿಂಗಪತಿ ಭಾವದ ಅವರು ಹೇಗಿದ್ದರೆಂದರೆ ತಲೆಯ ಮೇಲೆ ಚಿತ್ತಾರದ ಗಡಿಗೆಗಳ ಅಡಕಲಿಟ್ಟುಕೊಂಡು ಕುಣಿಯುವ ನರ್ತಕಿಯ ಹಾಗೆ ಇದ್ದರು. ಆ ನರ್ತಕಿ ಕುಣಿಯುವಾಗ ಸಹಸ್ರಾರು ಜನರು ತದೇಕಚಿತ್ತದಿಂದ ನೋಡುತ್ತಲೇ ಇರುತ್ತಾರೆ. ಆ ಕುಣಿಯುವ ರಭಸಕ್ಕೆ ಗಡಿಗೆಗಳು ಬೀಳುವ ಕ್ಷಣವನ್ನು ನೋಡಲು ಕಾದಿರುವವರ ಹಾಗೆ ಆ ಪ್ರೇಕ್ಷಕರು ನೋಡುತ್ತಿರುತ್ತಾರೆ. ಆದರೆ ಆಕೆ ಎಷ್ಟೇ ಕುಣಿದರೂ ಆ ಗಡಿಗೆಗಳು ಬೀಳುವುದೇ ಇಲ್ಲ, ಏಕೆಂದರೆ ಆಕೆಯ ಮನಸ್ಸು ತನಗೆ ಮತ್ತು ಆ ಗಡಿಗೆಗಳಿಗೆ ಸಂಬಂಧಿಸಿದ ಸಮತೋಲನದ ಮೇಲೆ ಕೇಂದ್ರೀಕೃತವಾಗಿರುತ್ತದೆ. ಎಲ್ಲರೂ ಆಕೆಯನ್ನು ನೋಡುತ್ತಿರುತ್ತಾರೆ. ಆದರೆ ಆಕೆ ಯಾರನ್ನೂ ನೋಡುತ್ತಿರುವುದಿಲ್ಲ, ಹೊರಲೋಕದಲ್ಲಿ ನರ್ತಿಸುತ್ತಿರುವ ಅವಳು ಒಳಲೋಕದಲ್ಲಿ ಸಮತೋಲನದ ಜೊತೆ ಐಕ್ಯಸ್ಥಿತಿಯಲ್ಲಿರುತ್ತಾಳೆ. ಕ್ರಿಯಾಶೀಲವಾಗಿ ಲೌಕಿಕದ ಜೊತೆಗಿದ್ದೂ ಅಲೌಕಿಕವಾಗಿ ತಲೆಯ ಮೇಲಿನ ಅಡಕಿಲ್ ಗಡಿಗೆಗಳ ಜೊತೆ ಇರುತ್ತಾಳೆ. ಹೀಗೆ ಇರುವವರೆಗೆ ಆಕೆಯ ನೃತ್ಯದಲ್ಲಿ ಸೋಲೆಂಬುದೇ ಇಲ್ಲ, ಆ ಗಡಿಗೆಗಳು ಎಂದೂ ಬೀಳುವುದಿಲ್ಲ. ಈ ಒಂದು ರೂಪಕ ಗುದ್ದಲಿ ಶರಣರ ಬದುಕಿಗೆ ಅನ್ವಯಿಸುತ್ತದೆ. ಅವರಾದರೂ ಅಷ್ಟೇ. ಲೌಕಿಕದಲ್ಲಿ ಕಾಯಕ ಮಾಡುತ್ತ ಅಲೌಕಿಕದಲ್ಲಿ ಯೋಗಿಗಳಾಗಿ ಇರುತ್ತಿದ್ದರು. ಅಂತೆಯೆ ಅವರಿಗೆ ಕಾಯಕಯೋಗಿ ಎಂದು ಕರೆಯಲಾಗುತ್ತಿತ್ತು.

ಕಾಯಕದ ಪ್ರತೀಕವಾದ ಗುದ್ದಲಿಯು ಮಾನವನ ಸಮಗ್ರ ಅಭಿವೃದ್ಧಿಯ ಸಂಕೇತವಾಗಿದೆ. ಅಷ್ಟೇ ಅಲ್ಲ, ಮಾನವನನ್ನು ಮಂಗನಿಂದ ಬೇರ್ಪಡಿಸಿ ಮನುಷ್ಯನನ್ನಾಗಿ ಮಾಡಿದ್ದು ಕೂಡ ಕಾಯಕವೇ ಆಗಿದೆ. ಕಾಯಕಕ್ಕೆ ಒಂದಿಲ್ಲೊಂದು ಉಪಕರಣಗಳು ಬೇಕು. ಮಾನವ ಉಪಕರಣಗಳನ್ನು ಸಿದ್ಧಪಡಿಸುವ ಪ್ರಾಣಿ. ಯಾವ ಪ್ರಾಣಿಯೂ ಉಪಕರಣಗಳನ್ನು ಸಿದ್ಧಪಡಿಸುವುದಿಲ್ಲ, ಅವು ತಮ್ಮ ಅಂಗಾಂಗಗಳ ಸಹಾಯದಿಂದ ಮಾತ್ರ ಆಹಾರವನ್ನು ಪಡೆಯುತ್ತವೆ. ಆಹಾರ ಬಿಟ್ಟರೆ ಅವಕ್ಕೆ ಇನ್ನಾವುದರ ಪರಿವೆ ಇರುವುದಿಲ್ಲ, ಆದರೆ ಮಾನವ ಕಾಯಕ ಮಾಡುವುದರ ಮೂಲಕ ಸೃಜನಶೀಲನಾಗುತ್ತಾನೆ. ಸಂಸ್ಕೃತಿ ಮತ್ತು ನಾಗರಿಕತೆಗಳನ್ನು ನಿರ್ಮಿಸುತ್ತಾನೆ. ಆ ಮೂಲಕ ವ್ಯಕ್ತಿತ್ವವನ್ನು ವಿಕಸನಗೊಳಿಸಿಕೊಳ್ಳುತ್ತಾನೆ. ಕಾಯಕವು ಎಲ್ಲ ಅನುಭವಗಳ ಮೂಲವಾಗಿದೆ. ಅನುಭಾವದ ಮೂಲವೂ ಕಾಯಕವೇ ಆಗಿದೆ. ಅನುಭವವಿಲ್ಲದೆ ಅನುಭಾವ ಇಲ್ಲ ಎಂಬುದನ್ನು ಬಸವಾದಿ ಶರಣರು ಕಂಡುಕೊಂಡಿದ್ದರು. ಅಧ್ಯಾತ್ಮವನ್ನು ಹಿಮಾಲಯಕ್ಕೆ ಹೋಗಿ ಪಡೆದವರು ಕೂಡ ಅನುಭಾವಿಗಳಾಗಬೇಕೆಂದರೆ ಜನಸಮುದಾಯದ ಜೊತೆಗಿದ್ದುಕೊಂಡು ಕಾಯಕ ಮಾಡುವುದರಿಂದ ಮಾತ್ರ ಸಾಧ್ಯ. ಅಂತೆಯೆ ಶರಣರಲ್ಲಿ ನಡೆ-ನುಡಿ ಸಿದ್ಧಾಂತದಿಂದ ಬರುವ ಅನುಭಾವದ ರಹಸ್ಯವನ್ನು ಗುದ್ದಲಿ ಶರಣರು ಅರಿತವರಾಗಿದ್ದರು. ಅಂತೆಯೆ ಅವರಿಗೆ ಕಾಯಕ, ಪ್ರಸಾದ ಮತ್ತು ದಾಸೋಹದ ಮಹತ್ವ ತಿಳಿದಿತ್ತು. ಕಾಯಕ ಕೆಲಸ ಅಲ್ಲ, ಅದು ಒಳ ಮತ್ತು ಹೊರಜಗತ್ತನ್ನು ಸಂತೃಪ್ತಗೊಳಿಸುವ ಅರಿವಿನ ಆಚಾರ. ಇಂಥ ಜ್ಞಾನದಿಂದ ಕೂಡಿದಂಥ ಕ್ರಿಯೆ ಅದು. ಇದೆಲ್ಲವನ್ನು ಅರಿತು ಸ್ವಾವಲಂಬಿಯಾಗಿ ಲೋಕಪಾಲನೆಯ ಜವಾಬ್ದಾರಿಯೊಂದಿಗೆ ಮಾಡುವ ದುಡಿಮೆಗೆ ಕಾಯಕ ಎನ್ನುವರು.

ಕಾಯಕ ಮಾಡುವುದು. ಕಾಯಕದಿಂದ ಬಂದುದನ್ನು ದೇವರು ಕೊಟ್ಟ ಪ್ರಸಾದವೆಂದು ಸ್ವೀಕರಿಸುವುದು. ಸ್ವೀಕರಿಸಿದ್ದನ್ನು ಸಮಾಜ ಎಂಬ ದೇವರಿಗೆ ಅರ್ಪಿಸಿ ಬಳಸುವುದು ಗುದ್ದಲಿ ಶರಣರ ಬದುಕಿನ ಕ್ರಮವಾಗಿತ್ತು. ಅವರು ಕೊನೆಯವರೆಗೂ ಇದೇ ರೀತಿ ಬದುಕಿ ಲೋಕಕ್ಕೇ ಮಾದರಿಯಾಗಿ ಹೋದರು. ಉರಿಲಿಂಗದೇವರು ಹೇಳಿದಂತೆ ಗುದ್ದಲಿ ಶರಣರು ಪುಣ್ಯದಂತೆ ಬಂದರು, ಜ್ಞಾನದಂತೆ ಇದ್ದರು, ಮುಕ್ತಿಯಂತೆ ಹೋದರು.

ಗುದ್ದಲಿ ಶರಣರಿಗೆ ಭೂಮಿ ಹದ ಮಾಡುವುದರಲ್ಲಿ ಎಲ್ಲಿಲ್ಲದ ಉತ್ಸಾಹ. ಸಮಯಾವಕಾಶ ಸಿಕ್ಕಿದ್ದರೆ ಇಡೀ ಪೃಥ್ವಿಯನ್ನೇ ಹಸನುಗೊಳಿಸುವಂಥವರು ಅವರು! ಇದು ನನ್ನ ಭೂಮಿ ಇದು ಪರರ ಭೂಮಿ ಎಂಬ ದ್ವೈತಭಾವ ಅವರಲ್ಲಿ ಎಂದೂ ಮೂಡಲಿಲ್ಲ. ಭೂಮಿ ಭೂಮಿಯೇ. ಅದು ಅಖಂಡವಾಗಿದೆ. ಅದರ ಮೇಲೆ ಯಾರ ಹಕ್ಕೂ ಇಲ್ಲ, ಆದರೆ ಅದನ್ನು ಸ್ವಚ್ಛಗೊಳಿಸಿ ಹದಮಾಡುವ ಕರ್ತವ್ಯ ಎಲ್ಲರದು ಎಂಬುದರಲ್ಲಿ ಅವರಿಗೆ ಅಚಲವಾದ ನಂಬಿಕೆ ಇತ್ತು. ಈ ನಂಬಿಕೆಯು ಅವರನ್ನು ಶರಣರನ್ನಾಗಿಸಿತು. ಅವರ ಬದುಕಿನ ಕ್ರಮವನ್ನು ಅರಿತುಕೊಂಡರಿಗೆ ಅವರು 12ನೇ ಶತಮಾನದ ಯಾವುದೇ ಶರಣರಿಗಿಂತ ಕಡಿಮೆ ಇಲ್ಲ ಎಂಬುದರ ಮನವರಿಕೆಯಾಗುವುದರಲ್ಲಿ ಸಂಶಯವಿಲ್ಲ.

ಅವರು ಗುದ್ದಲಿಯನ್ನು ಹೆಗಲಿಗೇರಿಸಿಕೊಂಡು ಧರ್ಮಪತ್ನಿ ಅಮರಮ್ಮನವರ ಜೊತೆ ಹೊರಟರೆಂದರೆ ದಾರಿಗುಂಟ ಹೊಲಗಳ ವೀಕ್ಷಣೆ ಮಾಡುವ ಕಾಯಕ ಆರಂಭವಾಗುತ್ತಿತ್ತು. ಎಲ್ಲಿಯಾದರೂ ಕರಕಿ ಕಂಡರೆ ಅದು ಯಾರ ಹೊಲ, ಅವರ ಜಾತಿ ಯಾವುದು, ಅವರು ಕೂಲಿ ಕೊಡುವರೊ ಇಲ್ಲವೋ, ಕಡಿಮೆ ಕೊಡಬಹುದೊ, ಹೆಚ್ಚು ಕೊಡಬಹುದೊ ಎಂಬ ವಿಚಾರಗಳು ಅವರ ಮನದಲ್ಲಿ ಸುಳಿದದ್ದೇ ಇಲ್ಲ! ಕಾಯಕವೊಂದೇ ಅವರ ಗುರಿಯಾಗಿತ್ತು. ಅವರು ಇಡೀ ಜೀವಮಾನದಲ್ಲಿ ದ್ವೇಷಿಸಿದ್ದು ಎಂದರೆ ಭೂಮಿಯನ್ನು ಹಾಳು ಮಾಡುವ ಕರಿಕೆ, ಕಸಗಾ, ಜೇಕು, ಇಗಳೆ, ಪಾರ್ಥೇನಿಯಂ ಮುಂತಾದ ಕಸವನ್ನು. ಇವನ್ನೆಲ್ಲ ಕೀಳದೆ ಅವರಿಗೆ ಸಮಾಧಾನವೇ ಇರುತ್ತಿರಲಿಲ್ಲ. ಅವರ ದೃಷ್ಟಿಯಲ್ಲಿ ಇವೆಲ್ಲ ಬೆಳೆಯುವ ಭೂಮಿಯಲ್ಲಿನ ಪ್ರಳಯದ ಕಸದಂತೆ ಗೋಚರಿಸುತ್ತಿದ್ದವು. ಇಂಥ ಕಸದ ವಿರುದ್ಧ ಯುದ್ಧ ಸಾರುವುದೆಂದರೆ ಅವರಿಗೆ ಎಲ್ಲಿಲ್ಲದ ಉತ್ಸಾಹ.

ಹೀಗೆ ಅವರು ನಟ್ಟು ಕಡಿದು ಕಳೆ ತೆಗೆದು ಹೊಲ ಹಸನು ಮಾಡುವುದರ ಮೂಲಕ ಕಾಯಕದ ನಾಯಕರಾಗಿ ಹಳ್ಳಿಗಾಡಿನ ಜನಜೀವನವನ್ನು ಸ್ವಚ್ಛಗೊಳಿಸಿ ಜೀವಿತಾವಧಿಯಲ್ಲೇ ದಂತಕಥೆಯಾದರು. ಅವರು ತಮ್ಮ ಸಾತ್ವಿಕ ಬದುಕು ಮತ್ತು ಕಾಯಕದ ಮೂಲಕ ಹೊಲದ ಕಳೆಯ ಜೊತೆ ಜನಮನದ ಕೊಳೆಯನ್ನೂ ತೆಗೆಯುವುದರಲ್ಲಿ ತಲ್ಲೀನರಾಗಿದ್ದರು. ಅವರು ಇಡೀ ಜೀವಮಾನದಲ್ಲಿ ಕೂಲಿಯನ್ನು ಕೇಳಲಿಲ್ಲ! ಕೊಟ್ಟಷ್ಟು ತೆಗೆದುಕೊಂಡು ಬರುತ್ತಿದ್ದರು. ತಮ್ಮ ಕೆಲಸ ಮುಗಿದ ಕೂಡಲೇ ಕಂಡ ಮರದ ಕೆಳಗಡೆ ಕುಳಿತು ಧ್ಯಾನದಲ್ಲಿ ಮಗ್ನರಾಗುತ್ತಿದ್ದರು. ಬರಿಗೈಯಿಂದ ಮನೆಗೆ ಬಂದು ನೀರು ಕುಡಿದು ತೃಪ್ತಭಾವದಿಂದಿರುತ್ತಿದ್ದರು. ಸಾಮಾನ್ಯರೊಳಗಿನ ಇಂಥ ಅಸಾಮಾನ್ಯರೇ ಶರಣರಾಗಿ ದಾರಿದೀಪವಾಗುತ್ತಾರೆ.

ಮನೆ ನೋಡಾ ಬಡವರು; ಮನ ನೋಡಾ ಘನ.
ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ; ಬಂದ ತತ್ಕಾಲಕೆ ಉಂಟು,
ಕೂಡಲಸಂಗನ ಶರಣರು ಸ್ವತಂತ್ರಧೀರರು.


[illegible]
ಗ್ರಾಮದ ಗುದ್ದಲಿ ಕಾಯಕಯೋಗಿ ಬಸವಪ್ಪ ಹಾದಿಮನಿ ಶರಣರು
[illegible]

ಎಂದು ಬಸವಣ್ಣನವರು ಹೇಳಿದ್ದಾರೆ. ಈ ವಚನ ಲಿಂಗೈಕ್ಯ ಗುದ್ದಲಿ ಕಾಯಕಯೋಗಿ ಬಸವಪ್ಪ ಶರಣರು ಹಾದಿಮನಿ ಅವರಿಗೆ ಸಂಪೂರ್ಣವಾಗಿ ಅನ್ವಯಿಸುತ್ತದೆ. ಅವರ ಮನೆ ಬಡವರ ಮನೆಯಾಗಿದ್ದರೂ ಅವರ ಮನಸ್ಸು ಘನಮನ ಸಂಪನ್ನವಾಗಿತ್ತು. ಪರವಧು ಮಹಾದೇವಿ ಎಂಬ ಭಾವವನ್ನು ಹೊಂದಿದ್ದ ಅವರು ಸೋಂಕಿನಲ್ಲಿ ಶುಚಿಯಾಗಿದ್ದರು. ಅಂದರೆ ಪತ್ನೀವ್ರತಸ್ಥರಾಗಿದ್ದರು. ಅವರು ಕೆಟ್ಟದ್ದನ್ನು ಮಾತನಾಡದೆ ತಮ್ಮ ನಾಲಗೆಯ ಮೇಲೆ ವಿಜಯ ಸಾಧಿಸಿದ್ದರು. ಕೆಟ್ಟದ್ದನ್ನು ನೋಡದೆ ತಮ್ಮ ಕಣ್ಣುಗಳ ಮೇಲೆ ವಿಜಯ ಸಾಧಿಸಿದ್ದರು. ಕೆಟ್ಟದ್ದನ್ನು ಕೇಳದೆ ತಮ್ಮ ಕಿವಿಗಳ ಮೇಲೆ ವಿಜಯ ಸಾಧಿಸಿದ್ದರು. ಕೆಟ್ಟದ್ದನ್ನು ಮುಟ್ಟದೆ ತಮ್ಮ ಕೈಗಳ ಮೇಲೆ ವಿಜಯ ಸಾಧಿಸಿದ್ದರು. ಕೆಟ್ಟದ್ದರ ಕಡೆಗೆ ಹೋಗದೆ ತಮ್ಮ ಕಾಲುಗಳ ಮೇಲೆ ವಿಜಯ ಸಾಧಿಸಿದ್ದರು. ಅವರು ಸಂಗ್ರಹಬುದ್ಧಿಯವರಾಗಿರಲಿಲ್ಲ. ಅವರೆಂದೂ ಪಸರಕ್ಕೆ ಅಂದರೆ ಸಂಗ್ರಹಕ್ಕೆ ಅವಕಾಶ ಕೊಡಲಿಲ್ಲ. ಅನುದಿನದ ದಂದುಗ ನಿವಾರಣೆಗೆ ಎಷ್ಟುಬೇಕೋ ಅಷ್ಟು ಮಾತ್ರ ಅವರಲ್ಲಿರುತ್ತಿತ್ತು. ಅದು ಕೂಡ ಕಾಯಕದಿಂದಲೇ ಬಂದುದಾಗಿತ್ತು.

ಈ ಭೂಮಿ ಬಹುರತ್ನಾ ವಸುಂಧರಾ. ಮಾನವ ಇದನ್ನು ಬದುಕಲು ಹೆಚ್ಚು ಹೆಚ್ಚು ಯೋಗ್ಯಗೊಳಿಸಬೇಕೇ ಹೊರತಾಗಿ ಇದರ ಘನತೆಯನ್ನು ಕಡಿಮೆ ಮಾಡುವಂಥ ಪಾಪದ ಕೆಲಸ ಮಾಡಬಾರದು ಎಂಬುದು ಅವರ ಆಶಯವಾಗಿತ್ತು. ಆದರೆ ಇಂದು ನಾವು ಏನು ಮಾಡುತ್ತಿದ್ದೇವೆ? ಭೂಮಿಯ ಹದಗೆಡಿಸುತ್ತಿದ್ದೇವೆ. ಅದನ್ನು ಬಂಜರು ಭೂಮಿ ಮಾಡುವಂಥ ಕೃತ್ಯಗಳಲ್ಲಿ ತೊಡಗಿದ್ದೇವೆ. ಭೂಮಾಲಿನ್ಯ, ಜಲಮಾಲಿನ್ಯ, ವಾಯುಮಾಲಿನ್ಯ, ವಿವಿಧ ಪ್ರಕಾರದ ಹೊಗೆ ಉಗುಳುವ ಲಕ್ಷಾಂತರ ಕಾರ್ಖಾನೆಗಳಿಂದ ಆಕಾಶ ಮಾಲಿನ್ಯ, ಪ್ಲಾಸ್ಟಿಕ್ ಮುಂತಾದ ವಿಷಕಾರಿ ವಸ್ತುಗಳನ್ನು ಸುಡುವಾಗ ಅಗ್ನಿಮಾಲಿನ್ಯ! ಇಂಥ ಮಲಿನ ವಾತಾವರಣದಲ್ಲಿ ವಿಷಕಾರಿ ಅಂಶಗಳಿಂದ ಕೂಡಿರುವ ನಮ್ಮ ದೈನಂದಿನ ಆಹಾರವೂ ಮಲಿನ!

ಬಸವಪ್ಪ ಶರಣರು ಈಗಿನ ಬಾಗಲಕೋಟ ಜಿಲ್ಲೆಯ ಹುನಗುಂದ ತಾಲ್ಲೂಕಿನ ಹಿರೆಬಾದವಾಡಗಿ ಗ್ರಾಮದಲ್ಲಿ ವೀರಪ್ಪ ಮತ್ತ ವೀರಮ್ಮನವರ ಮೊದಲ ಮಗನಾಗಿ 1906ರ ಶ್ರಾವಣ ಸೋಮವಾರದಂದು ಜನಿಸಿದರು. ಪತ್ನಿ ಅಮರಮ್ಮ. ಮಕ್ಕಳು ವೀರಭದ್ರಪ್ಪ ನೀಲಕಂಠಪ್ಪ ಮತ್ತು ರಾಚಪ್ಪ. ರಾಚಪ್ಪನವರು ಕರ್ನಾಟಕ ಸರ್ಕಾರದ ಬೆಳಗಾವಿ ವಿಭಾಗದ ಲೋಕೋಪಯೋಗಿ ಇಲಾಖೆಯಲ್ಲಿ ಮುಖ್ಯ ಸಿವಿಲ್ ಎಂಜಿನಿಯರ್ ಆಗಿದ್ದರು. ವೀರಭದ್ರಪ್ಪ ಮತ್ತು ನೀಲಕಂಠಪ್ಪ ಅವರು ಆದರ್ಶ ಶಿಕ್ಷಕರಾಗಿದ್ದರು. ಮಕ್ಕಳಲ್ಲಿ ಈಗ 80 ವರ್ಷ ದಾಟಿದ ನೀಲಕಂಠಪ್ಪ ಅವರೊಬ್ಬರೇ ಉಳಿದಿದ್ದಾರೆ.

ಗುದ್ದಲಿ ಶರಣರು ಬಾಲಕರಾಗಿದ್ದ ಸಂದರ್ಭದಲ್ಲಿ ವಚನಗಳು ಸುಲಭವಾಗಿ ಸಿಗುತ್ತಿರಲಿಲ್ಲ. ಆದರೆ ಅವರ ಮೇಲೆ ವಚನಗಳು ಎಷ್ಟೊಂದು ಪ್ರಭಾವ ಬೀರಿದ್ದವೆಂದರೆ ಅವರ ಬದುಕಿನ ಕ್ರಮವನ್ನು ಅಧ್ಯಯನ ಮಾಡುವುದರ ಮೂಲಕ ನಾವು ವಚನಗಳ ನಿಜಾರ್ಥವನ್ನು ತಿಳಿದುಕೊಳ್ಳಬಹುದು. ಅವರು ಶರಣರ ಕುರಿತು ಮಾತನಾಡುತ್ತ ಹೊತ್ತು ಕಳೆಯಲಿಲ್ಲ, ತಮ್ಮ ಕಾಯಕ[...] ಮೂಲಕವೇ ಶರಣರ ಸಿದ್ಧಾಂತದ ದರ್ಶನ ಮಾಡಿಸಿದರು. ನಡೆನು[...] ಸಿದ್ಧಾಂತವಾದಲ್ಲಿ ಕುಲ ಹೊಲೆ ಸೂತಕವಿಲ್ಲ, ನುಡಿ ಲೇಸು ನಡೆ ಅಧಮವಾದ[...] ಬಿಡಿಸಲಾಗದ ಹೊಲೆ. ಹೊಲಗೇರಿಯಲ್ಲಿ ಇರುವವರು ಹೊಲೆಯರಲ[...] ನಡೆಯೊಂದು ನುಡಿಯೊಂದು ಪರಿಯಾಗಿ ಇದ್ದವರೇ ಹೊಲೆಯರು. ಅವ[...] ಗುದ್ದಲಿ ಹೊತ್ತು ತಿರುಗುವಾಗ ನಮ್ಮಂಥವರು ಹೊಲೆತನವನ್ನು ಹೊ[...] ತಿರುಗುತ್ತಿದ್ದೆವು ಎಂಬ ಭಾವ ನಮ್ಮಲ್ಲಿ ಮೂಡದಿದ್ದರೆ ನಾವು ಅವರ ಬದುಕಿನಿಂ[...] ಪಾಠ ಕಲಿಯುವ ಯೋಗ್ಯತೆಯನ್ನು ಹೊಂದಲಾರೆವು.

ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ಕೂಡಲಸಂಗನ ಶರಣರೆ ಕುಲಜರ[...] ಎಂದು ಬಸವಣ್ಣನವರು ಹೇಳಿದ್ದಾರೆ. ಗುದ್ದಲಿ ಶರಣರು ಸಕಲಜೀವಾತ್ಮ[...] ಲೇಸನೆ ಬಯಸಿದರು. ಹೊಲಕ್ಕೆ ಹೋಗುವ ದಾರಿಯಲ್ಲಿ ಸೆಗಣಿ ಬಿದ್ದಿದ್ದ[...] ಪಕ್ಕದ ಹೊಲ ಯಾರದೇ ಇರಲಿ, ಅದನ್ನು ಎತ್ತಿ ಒಯ್ದು ಹಾಕಿ ಸಂತಸಪಡುತ್ತಿದ್ದರು[...] ತಾಯಿ ಮಗುವನ್ನು ಜೋಪಾನ ಮಾಡುವಂತೆ ಅವರು ಭೂಮಿತಾಯಿಯ[...] ಜೋಪಾನ ಮಾಡುತ್ತಿದ್ದರು. ಹೀಗೆ ಅವರು, ಎಲ್ಲರಿಗೂ ಅನ್ನ ಕೊಡು[...] ಭೂಮಿಗೆ ಆಹಾರ ಒದಗಿಸುತ್ತಿದ್ದರು! ಒಂದು ಸಲ ಹಾದಿಯಲ್ಲಿ ಸೆಗ[...] ಬಿದ್ದದ್ದನ್ನು ನೋಡಿದ ಅವರು ಎತ್ತಿ ಪಕ್ಕದ ಹೊಲದಲ್ಲಿ ಹಾಕಬೇಕೆಂದರು[...] ಆದರೆ ಸೆಗಣಿ ಮುದ್ದೆಯಲ್ಲಿ ಹುಳಗಳ ಸಂಸಾರವೇ ಇತ್ತು, ಆ ಜೀವಗಳಿ[...] ತೊಂದರೆ ಕೊಡಬಾರದೆಂದು ಹಾಗೆಯೆ ಬಿಟ್ಟು ಮುನ್ನಡೆದರು. ಕಾಯ[...] ಮುಗಿಸಿ ಮರಳುವಾಗ ಆ ಸೆಗಣಿಯ ಕಡೆಗೆ ದೃಷ್ಟಿ ಹಾಯಿಸಿದರು. [...] ಹುಳುಗಳು ಮತ್ತು ಮರಿಹುಳುಗಳೆಲ್ಲ ಬಿಸಿಲಿನ ತಾಪದಿಂದಾ[...] ಸತ್ತುಹೋಗಿದ್ದವು! ಗುದ್ದಲಿ ಶರಣರಿಗೆ ಬದುಕು ಇಷ್ಟೇ ಅಲ್ಲ ಅನಿಸಿತು[...] ನಾವೆಲ್ಲ ಹುಳುಗಳ ಹಾಗೆ ಹುಟ್ಟಿ ಸತ್ತುಹೋಗಬಾರದು. ಲೋಕಕಲ್ಯಾಣಕ್ಕಾ[...] ತನುಮನಧನಗಳನ್ನು ಸವೆಸಬೇಕು. ಅಂದಾಗ ಮಾತ್ರ ಬದುಕ[...] ಅರ್ಥಪೂರ್ಣವಾಗುತ್ತದೆ ಎಂಬುದು ಅವರ ದೃಢನಿರ್ಧಾರವಾಗಿತ್ತು.

ಗುದ್ದಲಿ ಶರಣರು ಆ ಕಾಲದಲ್ಲೇ ಮುಂದಾಲೋಚನೆಯ ಶಕ್ತಿಯನ[...] ಪಡೆದವರಾಗಿದ್ದರು. ಸಹಧರ್ಮಿಣಿಯನ್ನು ಬಹುವಚನದಿಂದ ಕರೆಯುತ್ತಿದ್ದರು[...] ಜೀವಮಾನವಿಡೀ ಸಹಧರ್ಮಿಣಿ ಅಮರಮ್ಮನವರು ನಡೆದುಕೊಂಡ ರೀ[...] ಕೂಡ ಅಗಾಧವಾದುದಾಗಿದೆ. ಅವರು ಪತಿಯನ್ನು ಎಂದೂ ಪ್ರಶ್ನಿಸಲಿಲ್ಲ[...] ಕೂಲಿ ಮಾಡಿದ ಹಣವನ್ನಾದರೂ ತರಬಾರದೆ ಎಂದು ಕೇಳಲಿಲ್ಲ, ಅವ[...] ಹೆಗಲಿಗೆ ಹೆಗಲು ಕೊಟ್ಟು ದುಡಿಯುವುದೊಂದೆ ಅವರ ಬದುಕಿ[...] ಗುರಿಯಾಗಿತ್ತು. ನಟ್ಟು ಕಡಿಯುವಾಗ ಅವರು ಪತಿಗೆ ಸಹಾಯಹ[...] ಚಾಚುತ್ತಿದ್ದರು. ಹಗೇವು ನಿರ್ಮಿಸುವಾಗ ಎಂದೂ ಬೇಸರಪಟ್ಟುಕೊಳ್ಳ[...] ಎತ್ತಿ ಕೊಟ್ಟ ಮಣ್ಣಿನ ಬುಟ್ಟಿಯನ್ನು ಹೊತ್ತುಕೊಂಡು ಹೋಗಿ ರಾ[...] ಹಾಕುತ್ತಿದ್ದರು. ಪತಿಗೆ ಯಾವುದೇ ರೀತಿಯ ತೊಂದರೆ ಮತ್ತು ಬೇಸರವಾಗದಂ[...] ನೋಡಿಕೊಳ್ಳುವುದೇ ಅವರ ಗುರಿಯಾಗಿತ್ತು. ಸತಿಪತಿಗಳೊಂದಾದ ಭ[...] ಹಿತವಾಗಿಪ್ಪುದು ಶಿವಂಗೆ ಎಂದು ಜೇಡರ ದಾಸಿಮಯ್ಯನವರು ಹೇಳಿದಂ[...] ಅವರ ಬದುಕು ಇತ್ತು. ಸತಿಪತಿಗಳಿಬ್ಬರು ಕಾಯಾ ವಾಚಾ ಮನಸಾ ಒಂದಾ[...] ಕಾಯಕ ಮಾಡುತ್ತ ದಾಸೋಹಂಭಾವದೊಂದಿಗೆ ಬದುಕುವುದೇ ಭಕ್ತಿ. ಗಂ[...] ಹೆಂಡಿರಿಬ್ಬರು ಗುಡಿಗೆ ಹೋಗಿ ಮೂರ್ತಿಯ ಮುಂದೆ ಜೊತೆಯಾ[...] ಕೈಮುಗಿದುಕೊಂಡು ನಿಲ್ಲುವುದು ಭಕ್ತಿ ಅಲ್ಲ, ಬಸವಣ್ಣನವರ ಲಿಂಗಾಯ[...] ಧರ್ಮದಲ್ಲಿ ಗುಡಿಯೂ ಇಲ್ಲ, ಮೂರ್ತಿಯೂ ಇಲ್ಲ! ಇದು ಸಂಸಾರದಲ್[...] ಸದ್ಗತಿ ಕಾಣುವ ಧರ್ಮವಾಗಿದೆ. ಈ ಶರಣದಂಪತಿ ತಮ್ಮ ದಿವ್ಯ ಬದುಕಿ[...] ಕ್ರಮದ ಮೂಲಕ ಸಂಸಾರದಲ್ಲೇ ಸದ್ಗತಿ ಕಂಡರು.

ಹಿರೆಬಾಗವಾಡಗಿಯಲ್ಲಿ ಜೋಳ ಹಾಕುವ ನೂರಾರು ಹಗೆವುಗಳನ[...] ಕಡಿದು ಪ್ರತಿವರ್ಷ 5 ಚೀಲಗಳಷ್ಟು ಜೋಳದ ಕಾಯಕ ಮಾಡುತ್ತಿದ್ದರು. [...] ಜೋಳವನ್ನು ದಾಸೋಹಕ್ಕಾಗಿ, ಬಡಬಗ್ಗರಿಗಾಗಿ, ಅವರಿವರ ಮಕ್[...] ವಿದ್ಯಾಭ್ಯಾಸಕ್ಕಾಗಿಯೂ ಬಳಸುತ್ತಿದ್ದರು. ಹಳ್ಳಿಯ ಮಕ್ಕಳಿಗೆ ಪೆಪ್ಪರಮಿಂಟ[...] ಕೊಟ್ಟು ಶಾಲೆಗೆ ಹೋಗಲು ಹುರಿದುಂಬಿಸುತ್ತಿದ್ದರು.

ಗುದ್ದಲಿ ಶರಣರು ಕಡುಬಡತನದಲ್ಲಿ ಬೆಳೆದರು. ಮೂರನೇ ಇಯತ್ತೆವರ[...] ಓದಿದನಂತರ ಓದು ಮುಂದುವರಿಸಲಿಕ್ಕಾಗಲಿಲ್ಲ, ಗುದ್ದಲಿ ಹಿಡಿದು ಕ[...] ತೆಗೆಯುವುದೇ ತಮ್ಮ ಕಾಯಕ ಎಂದು ನಿರ್ಧರಿಸಿದರು. ಅವರು ತಮ[...] ಕಾಯಕದ ಮೂಲಕ ಭೂಮಿಯ ಓರೆಕೋರೆಗಳನ್ನು ಸರಿಪಡಿಸುತ್ತಿದ್ದರ[...] ನೀರಿನ ಜೊತೆ ಮಣ್ಣು ಹರಿದುಹೋದರೆ ಭೂಸಂಪತ್ತೇ ಹರಿದುಹೋದಂ[...] ಎಂಬ ಅರಿವನ್ನು ಜನರಲ್ಲಿ ಮೂಡಿಸುತ್ತಿದ್ದರು. ಇಡೀ ಭೂಮಿಯ ಸತ್[...] ಅದರ ಮೂರಂಚಿನ ಮೇಲ್ಪದರಿನಲ್ಲಿ ಅಡಗಿದೆ ಎಂಬುದು ಇಂದು ಕಂಡುಕೊಂ[...] ಸತ್ಯವನ್ನು ಅವರು ಅಂದೇ ಕಾಯಕದ ಮೂಲಕ ಸೂಚಿಸಿದ್ದರು. ಈ ಸಂಪ[...] ರಕ್ಷಣೆಗಾಗಿ ಭೂಮಿಯನ್ನು ಸಮಪಾತಳಿಗೊಳಿಸುವುದು, ಹೆಚ್ಚಿನ ನೀ[...] ಬಸಿದುಹೋಗುವಂಥ ಒಡ್ಡುಗಳನ್ನು ಕಟ್ಟಿಸಿ ಮಣ್ಣನ್ನು ರಕ್ಷಿಸುವುದರ ಮೂ[...] ಅವರು ತಮ್ಮ ಕನಸನ್ನು ನನಸಾಗಿಸುತ್ತಿದ್ದರು.

ಚಳಿ ಇರಲಿ, ಮಳೆ ಇರಲಿ ಯಾರಾದರೂ ನಿಧನರಾದರೆ ಬಡವ[...] ಬಗ್ಗರು ಎನ್ನದೆ ರುದ್ರಭೂಮಿಗೆ ಹೋಗಿ ಕುಣಿ ತೆಗೆಯುವುದು ಪುಣ್[...] ಕೆಲಸವೆಂದು ಸೇವೆ ಮಾಡುತ್ತಿದ್ದರು. ಶವಸಂಸ್ಕಾರದಲ್ಲಿ ಪಾಲ್ಗೊಂ[...] ಮನೆಯವರಿಗೆಲ್ಲ ಸಾಂತ್ವನ ಹೇಳಿಬರುತ್ತಿದ್ದರು. ಅವರು ಜೀವಕಾರುಣ್[...] ಸಾಕಾರ ಮೂರ್ತಿಯಾಗಿದ್ದರು.

ಬಿಳಿ ತುಂಡುಪಂಚೆ, ಹೆಗಲಿಗೆ ಕೆಂಪುವಸ್ತ್ರ ಹಾಕಿಕೊಳ್ಳುತ್ತಿದ್ದ ಲಿಂಗಧಾ[...] ಗುದ್ದಲಿ ಬಸವಪ್ಪ ಶರಣರು ಕಪ್ಪು ಬಣ್ಣದ ಆರಡಿ ಎತ್ತರದ ನಿಲುವಿ[...] ತೆಳ್ಳಗಿನ ದೃಢಕಾಯದ ಮುಗ್ಧಗಂಭೀರ ವ್ಯಕ್ತಿಯಾಗಿದ್ದರು. ಅವರು ಹೆಗ[...] ಮೇಲೆ ಗುದ್ದಲಿ ಹಾಗೂ ಒಂದು ದೊಡ್ಡ ತಂಬಿಗೆಯ ತುಂಬ ಕುಡಿಯು[...] ನೀರು ಹೊತ್ತುಕೊಂಡು ಕಾಯಕಕ್ಕೆ ಹೋಗುತ್ತಿದ್ದರು. ಅವರು ದಿನಕ್ಕೆ [...] ಮಾರು ನಟ್ಟು ಕಡಿಯುವ ಸಾಹಸಿಯಾಗಿದ್ದರು.


ಕರಕಿಯಿಂದಾಗಿ ಹಾಳು ಬಿದ್ದ ತಮ್ಮ ಮನೆತನದ 12 ಎಕರೆ ಹೊಲವ[...] ನಟ್ಟು ಕಡಿದು ಹಸನುಗೊಳಿಸಿದರು. ಮಣ್ಣು ಹರಿದುಹೋಗದಂತೆ ವ್ಯ[...] ಮಾಡಿ ಬತ್ತಿ ಬೆಳೆದು ತೋರಿಸಿದರು. ಕಾಯಕದಲ್ಲೇ ಅವರು ದೇವರ[...]

...ನ್ನು. ತಮ್ಮೊಳಗಿನ ದೇವರ ಕರುಣೆಯಿಂದಾಗಿ ...ಂದ ಗುದ್ದಲಿ ಕಾಯಕವನ್ನು ಸಂತೋಷದಿಂದ ...ರುವುದಾಗಿ ಅವರು ಹೇಳುತ್ತಿದ್ದರು. ದೇವರಿಗೆ ಕಟ್ಟಿಸುವ ಬದಲು, ದೀನದಲಿತರಿಗೆ ಮನೆ ...ಡಲು ತಿಳಿಸುತ್ತಿದ್ದರು. ಸರ್ವವ್ಯಾಪಿ ದೇವರಿಗೆ ...ಕೇಗೆ ಗುಡಿ ಕಟ್ಟಿಸುವಿರಿ ಎಂದು ಕೇಳುತ್ತಿದ್ದರು. ...ಬಡವ ಬಸವಪ್ಪನವರು ಅನ್ಯರ ಹೊಲದ ಕರಿಕೆ ... ಆ ಹೊಲ ಸಮೃದ್ಧವಾಗಿ ಬೆಳೆದು ನಿಂತಾಗ ... ನೋಡಿ ಸಂತಸಪಡುತ್ತಿದ್ದರು! ಮಾನಸಿಕವಾಗಿ ... ಮೀರಿಸುವಂಥ ಭೂಮಾಲೀಕರು ಜಗತ್ತಿನಲ್ಲಿ ... ಇರಲಿಲ್ಲ! ಏಕೆಂದರೆ ಅವರಷ್ಟು ಭೂಮಿಯನ್ನು ...ವರು ಈ ಜಗತ್ತಿನಲ್ಲಿ ಇನ್ನೂ ಹುಟ್ಟಿಲ್ಲ.

...ರು ಸಕಲಜೀವದಯಾಪಾರಿಯಾಗಿದ್ದರು. ನಟ್ಟು ...ವಾಗ ಇರುವೆಗೂಡು ಕಂಡುಬಂದರೆ ಆ ಜೀವಗಳೂ ... ಎಂದು ಅಷ್ಟೊಂದು ಜಾಗವನ್ನು ಬಿಟ್ಟು ನಟ್ಟು ...ತ್ತಿದ್ದರು. ಈ ನಿರ್ಧಾರದಲ್ಲಿ ಬಸವತತ್ವವೇ ಅಡಗಿದೆ. ...ತತ್ತ್ವವನ್ನು ಒಂದೇ ಸಾಲಿನಲ್ಲಿ ಹೇಳಬೇಕೆಂದರೆ ...ಸುವ ಪ್ರತಿಯೊಂದು ಜೀವಿ ಈ ಭೂಮಿಯ ...ಹಕ್ಕನ್ನು ಹೊಂದಿದೆ. ಯಾವುದೇ ಜೀವವನ್ನು ...ಗಿ ನೋಡುವ ಹಕ್ಕು ಮನುಷ್ಯನಿಗೆ ಇಲ್ಲ. ಈ ...ಎಲ್ಲರಿಗೂ ಸೇರಿದ್ದು. ಆದ್ದರಿಂದ ಇದು ಯಾವುದೇ ...ಜನಾಂಗದ ಮತ್ತು ಯಾವುದೇ ಒಂದು ವರ್ಗಕ್ಕೆ ... ನಿಜವಾದ ಅರ್ಥದಲ್ಲಿ ಇದಕ್ಕೆ ದೇವರೊಬ್ಬರನ್ನು ...ಯಾರೂ ಒಡೆಯರಾಗಲು ಸಾಧ್ಯವಿಲ್ಲ. ಎಲ್ಲ ಸಂಪತ್ತು ... ಸಂಬಂಧಿಸಿದ್ದೆಂದು ತಿಳಿದು ಸಕಲಜೀವಾತ್ಮರಿಗೆ ... ಬಯಸುತ್ತ ಬದುಕುವುದೊಂದೇ ಸರಿಯಾದ ... ಗುದ್ದಲಿ ಕಾಯಕಯೋಗಿ ಬಸವಪ್ಪ ಶರಣರು ... ಮಾರ್ಗದಲ್ಲಿ ನಡೆದು ನಮಗೆಲ್ಲ ...ದರ್ಶಕರಾಗಿದ್ದಾರೆ.

...ದು ಸಲ ಬಸವಪ್ಪ ಶರಣರು ಮಾಮಲ್ಲಪಗೌಡರ ...ಲ್ಲಿ ಸತತವಾಗಿ ನೂರಿಪ್ಪತ್ತು ಮಾರು ನಟ್ಟು ಕಡಿದರು! ... ದಿನದಲ್ಲಿ ಇಷ್ಟೊಂದು ನಟ್ಟು ಕಡಿಯಲು 18 ...ಕು! ಗೌಡರು ಆನಂದಭರಿತರಾಗಿ ಒಂದು ಚೀಲ ...ನ್ನು ಬಹುಮಾನವಾಗಿ ಕೊಟ್ಟರು. ಆದರೆ ಶರಣರು ...ಒಂದುದಿನದ ಕೂಲಿಯಷ್ಟು ಜೋಳವನ್ನು ಮಾತ್ರ ...ಕೊಂಡು ಉಳಿದುದನ್ನು ದಾಸೋಹಕ್ಕಾಗಿ ಮಠಕ್ಕೆ ...ದರು. ಆ ಮೂಲಕ ಸಮಾಜ ಎಂಬ ದೇವರಿಗೆ ...ಎಂಬುದು ಅವರ ಆಶಯವಾಗಿತ್ತು.

...ಡವರ ಮೇಲಿನ ಕರುಣೆ ಅವರನ್ನು ಹೆಚ್ಚು ...ಲವಾಗಿಸಿತ್ತು. ಬಡವರ ಮಕ್ಕಳು ಕೂಡ ಚೆನ್ನಾಗಿ ...ತು ಮುಂದೆ ಬರಬೇಕು ಎಂಬ ಬಯಕೆಯೊಂದಿಗೆ ... ಓದುವ ಮಕ್ಕಳಿಗೆ ಸಹಾಯ ಮಾಡಲು ಸದಾ ...ಗಿರುತ್ತಿದ್ದರು. ಮಕ್ಕಳ ವಿದ್ಯೆಯಲ್ಲಿ ನಾಡಿನ ಸಂಪತ್ತು ... ಎಂಬುದನ್ನು ಅವರು ಅಂದೇ ಅರಿತಿದ್ದರು.



ಅವರು ಬದುಕಿನುದ್ದಕ್ಕೂ ನೂರಾರು ಹೊಲಗಳ ನಟ್ಟು ಕಡಿದವರಾಗಿದ್ದಾರೆ, ನೂರಾರು ಹೊಲಗಳಿಗೆ ಒಡ್ಡು ಹಾಕಿದವರಾಗಿದ್ದಾರೆ. ನೂರಾರು ಹಗೆಗಳನ್ನು ತೆಗೆದಿದ್ದಾರೆ. ನೂರಾರು ವಿದ್ಯಾರ್ಥಿಗಳಿಗೆ ಸಹಾಯ ಮಾಡಿದವರಾಗಿದ್ದಾರೆ. ಕಾಯಕ ಮುಗಿದ ಮೇಲೆ ಅವರು ಸಮಾನ ಮನಸ್ಕರ ಜೊತೆ ಬಸವತತ್ತ್ವದ ಕುರಿತು ಚಿಂತನೆ ಮಾಡುತ್ತಿದ್ದರು. ವಚನಗಳು, ನಿಜಗುಣಶಿವಯೋಗಿಗಳ ಕೈವಲ್ಯ ಮತ್ತು ಸಕಲಪುರಾತನ ಚರಿತ್ರೆ ಮುಂತಾದ ಗ್ರಂಥಗಳನ್ನು ಅವರು ಶ್ರದ್ಧೆಯಿಂದ ಓದುತ್ತಿದ್ದರು.

ಬಸವಪ್ಪ ಶರಣರು ಸ್ತ್ರೀವಾದಿಯಾಗಿದ್ದರು. ಅವರು ಮಹಿಳಾ ಸ್ವಾತಂತ್ರ್ಯದ ಬಗ್ಗೆ ಮಾತನಾಡಲಿಲ್ಲವಾದರೂ ಮಹಿಳೆಯರಿಗೆ ತೋರುತ್ತಿದ್ದ ಗೌರವದ ಮೂಲಕವೇ ಅವರ ಮಹಿಳಾ ಸ್ವಾತಂತ್ರ್ಯದ ಪ್ರಜ್ಞೆಯನ್ನು ಅಳೆಯಬೇಕು. ಹೆಣ್ಣುಮಕ್ಕಳು ಆತ್ಮಬಲವನ್ನು ಹೆಚ್ಚಿಸಿಕೊಳ್ಳಬೇಕು ಎಂದು ಹೇಳುತ್ತಿದ್ದರು. ಮಹಿಳಾ ಸಬಲೀಕರಣದ ಸೂಚನೆ ಅವರ ಈ ಮಾತಿನಲ್ಲಿದೆ. ಅವರ ಜೀವನಕ್ರಮವನ್ನು ನಾವು ಅನುಸರಿಸಿದರೆ ಲಿಂಗಭೇದ, ಜಾತಿಭೇದ ಮತ್ತು ವರ್ಗಭೇದಗಳು ತಾವೇ ಮಾಯವಾಗುವವು.

ಬಸವಣ್ಣನವರ ದರ್ಶನದ ಮೂಲ ವೇದಗಳಲ್ಲ. ಕಾಯಕಜೀವಿಗಳ ಅನುಭವದ ಮೂಲಕ ಅವರು ಅನುಭಾವ ಎಂಬ ದರ್ಶನವನ್ನು ಲೋಕಕ್ಕೆ ನೀಡಿದರು. ಶರಣರು ಅಧ್ಯಾತ್ಮ ಜೀವಿಗಳಾಗಿದ್ದಿಲ್ಲ. ಅನುಭಾವ ಜೀವಿಗಳಾಗಿದ್ದರು. ಅಧ್ಯಾತ್ಮವನ್ನು ಹಿಮಾಲಯಕ್ಕೆ ಹೋಗಿ ಪಡೆಯಬಹುದು. ಆದರೆ ಅನುಭಾವ ಪಡೆಯಲು ಕಾಯಕದ ಅನುಭವ ಇರಲೇ ಬೇಕು. ಆ ಅನುಭಾವದ ಅರಿವೇ ಅನುಭೂತಿ. ಅನುಭವ ಇಲ್ಲದೆ ಅನುಭಾವವೂ ಇಲ್ಲ, ಅನುಭೂತಿಯೂ ಇಲ್ಲ. ಈ ಸತ್ಯವನ್ನು ಗುದ್ದಲಿ ಕಾಯಕಯೋಗಿ ಬಸವಪ್ಪ ಶರಣರು ನುಡಿದು ತೋರಿಸಲಿಲ್ಲ; ನಡೆದು ತೋರಿಸಿದರು. 20ನೇ ಶತಮಾನದ ಬಸವಪ್ಪ ಶರಣರು 12ನೇ ಶತಮಾನದ ಯಾವ ಶರಣರಿಗಿಂತಲೂ ಕಡಿಮೆ ಅಲ್ಲ. ಕಾಯಕದಿಂದಲೇ ಮಂಗ ಮಾನವನಾದದ್ದು, ಕಾಯಕದಿಂದಲೇ ಅನುಭವಿಯಾದವರು ಅನುಭಾವಿಗಳಾಗುತ್ತಾರೆ.

ಹತ್ತು ಸಾವಿರ ವರ್ಷಗಳ ಇತಿಹಾಸವನ್ನೊಳಗೊಂಡು ವಿಶ್ವದಲ್ಲೇ ಅತ್ಯಂತ ಪುರಾತನವಾಗಿರುವ ಕೃಷಿಸಂಸ್ಕೃತಿಯನ್ನು ಅವರು ತಮ್ಮ ಕಾಯಕದ ಮೂಲಕ ಎತ್ತಿ ಹಿಡಿದರು. ಈ ಕೃಷಿ ಸಂಸ್ಕೃತಿಯೇ ಶರಣ ಸಂಸ್ಕೃತಿಯ ಮೂಲವೆಂಬುದನ್ನು ಅವರು ತಮ್ಮ ಅನುಭವದಿಂದ ಕಂಡುಕೊಂಡರು. ಕಾಯಕ ಮಾಡದೆ ಸೂರ್ಯ ಮತ್ತು ಚಂದ್ರರು ಕೂಡ ಇರಲಾರರು ಎಂಬದನ್ನರಿತಾಗ ಕಾಯಕದ ಮಹತ್ವ ನಮಗೆಲ್ಲ ಅರಿವಾಗದೆ ಇರದು. ಬೆಳಕು ಕೊಡುವವರೆಗೆ ಸೂರ್ಯ, ಬೆಳದಿಂಗಳು ಕೊಡುವವರೆಗೆ ಚಂದಿರ, ದುಡಿಯುವವರೆಗೆ ಮಾನವ. ಅವರು ವಯೋವೃದ್ಧರಾಗಿ ಕಾಯಕ ಮಾಡಲು ಅಶಕ್ತರಾದಾಗ ಇನ್ನು ಬದುಕುವ ಹಕ್ಕು ತಮಗಿಲ್ಲವೆಂದು ಪ್ರತಿಪಾದಿಸಿದರು. ಇಚ್ಛಾಮರಣವನ್ನು ಬಯಸಿದರು. ಬಯಸಿದಂತೆಯೆ 1981ನೇ ಆಗಸ್ಟ್ 29ರಂದು ಬೆನಕನ ಅಮಾವಾಸ್ಯೆಯಂದು ಬೆಳಗಿನ ಜಾವ ಲಿಂಗೈಕ್ಯರಾದರು! ಶರಣರು ಇಚ್ಛಾಮರಣಿಗಳು ಎಂಬುದನ್ನು ಸಾಬೀತು ಪಡಿಸಿದರು.

ಅವರ ಜೀವನಚರಿತ್ರೆ ಮಾನವೀಯತೆಯ ಮಹಾಕಾವ್ಯವಾಗಿದೆ. ರಾಜ್ಯ ಸರ್ಕಾರ ಈ ಗುದ್ದಲಿ ಶರಣರ ಹೆಸರಿನಲ್ಲಿ ಕಾಯಕಜೀವಿಗಳಿಗೂ ಒಂದು ಪ್ರಶಸ್ತಿಯನ್ನು ಘೋಷಿಸುವುದರ ಮೂಲಕ ಶರಣರ ಕಾಯಕಸಿದ್ಧಾಂತವನ್ನು ಎತ್ತಿಹಿಡಿಯುವುದು ಈ ಕಾಲದ ಅವಶ್ಯಕತೆಯಾಗಿದೆ.


ಹಿರೆಬಾದವಾಡಗಿಯ ಶಿವಮೂರ್ತಿ ಚನವೀರ ಶಾಸ್ತ್ರಿಗಳು ಗುದ್ದಿಕಾಯಕಯೋಗಿ ಹೆಸರಿನ ಕವನ ಸಂಕಲನವನ್ನೇ ತಂದಿರುವರು. ಬಸವಪ್ಪನವರ ಮಗ ನೀಲಕಂಠಪ್ಪ ಹಾದಿಮನಿ ಅವರು ತಂದೆಯ ಕುರಿತು 'ಬಸವಪ್ಪ ಹಾದಿಮನಿ ಶರಣರ ಜೀವನ ದರ್ಶನ' ಎಂಬ ವಚನಸಂಕಲನ ತಂದಿರುವರು. ಜಿ.ಎಚ್. ಹನ್ನೆರಡುಮಠ ಮತ್ತು ವಿ.ಸಿ. ಅಂಗಡಿ ಅವರ ಸಂಪಾದನೆಯ ಗುದ್ದಿ ಕಾಯಕಯೋಗಿ ಪುಸ್ತಕದಲ್ಲಿ ವಿವಿಧ ಲೇಖಕರ ನುಡಿ ನಮನಗಳಿವೆ. ಲಲಿತಾ ಕೆ. ಹೊಸಪ್ಯಾಟಿ ಅವರು ಗುದ್ದಿ ಕಾಯಕಯೋಗಿ ಹಾದಿಮನಿ ಬಸವಪ್ಪ ಶರಣರು ಪುಸ್ತಿಕೆಯನ್ನು ಬರೆದಿದ್ದಾರೆ. ಈ ನಾಲ್ಕೂ ಕಿರುಹೊತ್ತಿಗೆಗಳು ಗುದ್ದಲಿ ಶರಣರ ದೈನಂದಿನ ಬದುಕಿನ ವಿವರಗಳನ್ನು ಒಳಗೊಂಡಿವೆ.



ಹುನಗುಂದದಲ್ಲಿನ ನ್ಯಾಯಾಲಯದ ಎದುರಿನ ರಸ್ತೆಗೆ ಹತ್ತಿಕೊಂಡೇ ಗುದ್ದಲಿ ಕಾಯಕಯೋಗಿ ಬಸವಪ್ಪ ಶರಣರ ಗದ್ದುಗೆ ಇದೆ. ಈ ಗದ್ದುಗೆ ನನಗೆ ಲೋಕನ್ಯಾಯದ ಮಹಾಪೀಠದ ಸಂಕೇತವಾಗಿ ಕಂಡಿತು!

● ರಂಜಾನ್ ದರ್ಗಾ

ಖುಷೀ ಸಮಾಚಾರ



ತೊರೆಯಲೊಲ್ಲೆ
ಏಕೆ ಮುನಿಸೇ
ಬಲವಿದ್ದುದೇ
ಬದುಕುವುದು ಪಾಡಿಕೆ
ಸ್ಪರ್ಧೆ ಇದೆ
ಅನವರತ ಅದಕೆ

ಇರಬಹುದು ನಿನ್ನಲ್ಲೂ
ಬಲ ಸಮಕೆ
ಕೊಡುಕೊಳುವ ಜಗದಲ್ಲಿ
ಇಲ್ಲಬೆಲೆ ಅದಕೆ
ಅನ್ಯರ ಪಾಲಿನ
ಅನ್ನವ ಕಸಿಯಬೇಕದಕೆ

ಕೊಡು, ಸೇರು
ಕೊಳ್ಳೇಹೊಡಿ
ಇದು ಒಡಂಬಡಿಕೆ
ಸೇರಿಸಿಕೊಳ್ಳುವವರಿಗೆ
ಇದೆ, ಬಲು ಬೇಡಿಕೆ
ಸ್ವಜಾತಿಯವರಾಗಿರುವುದು
ಮುಖ್ಯ ಅದಕೆ

ಮದುವೆ ಆಗಿರದಿದ್ದರೆ
ಜಾಗವಿದೆ ಅದಕೆ
ಕರೆತರುವರು
ಕನ್ಯೆಯನು ನಿನ್ನ ಬುಡಕೆ
ನಿಮ್ಮನ್ನು ಸುಖವಾಗಿಡುವುದೇ
ಅವರ ಹೆಬ್ಬಯಕೆ

ಇದು ಹಳಸುವಷ್ಟು
ಹಣವಿರುವವರ ಕಾಲ
ನ್ಯಾಯ ಪ್ರಾಮಾಣಿಕತೆ
ನಡೆಯೊಲ್ಲ ಕಲಿಗಾಲ
ಹಂಬಲವಿದ್ದರೆ
ಬೀಳಬೇಕವರ ದುಂಬಾಲ

ಬಯಸಿದ್ದು ಸಿಗಲಿಲ್ಲವೋ
ಬಿಡು ಅದರ ಹಂಬಲ
ಖುಷಿಪಡು ತಪ್ಪಿದ್ದಕ್ಕೆ
ತಿನ್ನಲು ತಂಬಲ
ಪಡೆದುಕೋ ಉಳಿದಿದ್ದರೆ
ಸಜ್ಜನರ ಬೆಂಬಲ

ಇದು
ನೆಲದ ಸಂವಿಧಾನಕೆ
ಎಸಗುವ ಅಪಚಾರ
ದೇಶದ್ರೋಹಕೆ
ಕಡಿಮೆಯಿಲ್ಲದ ಅನಾಚಾರ
ನೀನವನಲ್ಲವಲ್ಲ
ಆಗ
ಖುಷೀ ಸಮಾಚಾರ



■ ಕೆ.ಎಂ. ಗಂಗಾಧರಪ್ಪ

...ತ್ರಿಕೆಯಲ್ಲಿ ಲಂಕೇಶರು ಪ್ರಸ್ತಾಪಿಸಿದ ನಂತರವೇ ...ಂತಮೂರ್ತಿಯವರ ಬಗ್ಗೆ ಆಸಕ್ತಿ ಮೂಡಿದ್ದು



...ಅನಂತಮೂರ್ತಿಯವರ ಕುರಿತ ವಿಶೇಷಾಂಕಕ್ಕೆ ಬರಹಗಾರನೇ ಅಲ್ಲದ, ಸಾಹಿತ್ಯದ ...ರ್ಥಿಯೂ ಅಲ್ಲದ ನಾನು ಪ್ರತಿಕ್ರಿಯಿಸಲೇಬೇಕಾದ ಸಂಕಷ್ಟದಲ್ಲಿದ್ದೇನೆ. ದೊಡ್ಡವರ ... ನನ್ನ ಅನಿಸಿಕೆಯನ್ನು ತಿಳಿಸುವುದಕ್ಕೂ ಮೊದಲು ನನ್ನ ದೃಷ್ಟಿಕೋನದ ಮಿತಿಗಳಲ್ಲಿ ...ದ್ದಲ್ಲಿ ತಪ್ಪಾದೀತು.

...ಪ್ರಭಾವಗೊಳ್ಳುವುದು ಪರಿಸರದಿಂದ ಎಂದಾದಲ್ಲಿ ನನ್ನ ಕಾಲೇಜು ...ಲ್ಲಿ ನಾನು ಕಂಡ ಲಂಕೇಶ್ ಪತ್ರಿಕೆಯ ಮೊದಲನೇ ಸಂಚಿಕೆ ...king ಆಗಿ ನನಗೆ ಆಪ್ತವಾದದ್ದು ನನ್ನ ಈ 53ನೇ ವಯಸ್ಸಿನಲ್ಲೂ ... ಉಳಿದಿದೆ. ಲಂಕೇಶ್ ನಂತರ ಗೌರಿಯವರ ಬೆನ್ನು ...

...ರಿಂದ 7 ಕನ್ನಡ ಶಾಲೆಯಲ್ಲಿ ಕಲಿತು 8ರಿಂದ ಇಂಗ್ಲಿಷ್ ಮೀಡಿಯಂ ... ಸಾಕಷ್ಟು ಪ್ರುಷ್ಟಿ ಹುಡುಗಿಗೆ ಹೇಳಿದ ಹಾಗೆ ಶ್ರೀಮಂತರ ಆಟವಾದ ... ಮುಟ್ಟದ ಗಮನಾರ್ಹ ಆಟಗಾರನಾಗಿ ಜೇಮ್ಸ್ ಹ್ಯಾಡ್ಲಿ ಚೇಸ್, ... ಚೆಸ್ಸುಬದ್ದ... ಗುದುಮುರುಗಿ ಕಟ್ಟಿ ಕನ್ನಡಕ್ಕೆ ಕಟ್ಟಹಾಕಿದ್ದು ಪಿ. ... ಮತ್ತು ಲಂಕೇಶ್ ಪತ್ರಿಕೆ. ಹುಣಸೆ ಹಣ್ಣಿಗೆ ಉಪ್ಪು ಖಾರ ಹದವಾಗಿ ಬೆರೆಸಿ ... ನನಗೆ ... ಲಂಕೇಶ್ ಹಾಗೂ ತೇಜಸ್ವಿಯವರು ...

ಒಂದು ಪತ್ರ

ನಾನು ಕನ್ನಡದ ಪ್ರಮುಖ ಬರಹಗಾರರ ಕಡೆಗೆಲ್ಲಾ ದೃಷ್ಟಿಹಾಯಿಸಲು ಮೂಲ ಪ್ರೇರಣೆ ಆಗಿದ್ದು ಲಂಕೇಶರೇ. ಯು.ಆರ್. ಅನಂತಮೂರ್ತಿಯವರ ಬಗ್ಗೆ ಆಸಕ್ತಿ ಮೂಡಿದ್ದು ಪತ್ರಿಕೆಯಲ್ಲಿ ಲಂಕೇಶರು ಪ್ರಸ್ತಾಪಿಸಿದ ನಂತರವೇ. ದೇವರನ್ನು ಗುಡಿಗುಂಡಾರ ದಾಟಿ ಹುಡುಕುವ ಪರಮ ನಾಸ್ತಿಕನಾದ ನನಗೆ ಅನಂತಮೂರ್ತಿಯವರ 'ಭಾರತೀಪುರ' ಇಷ್ಟವಾಗಲಿಲ್ಲ. ಅನಂತಮೂರ್ತಿಯವರ ಬರಹಕ್ಕಿಂತ ಅವರ ಸಾರ್ವಜನಿಕ ಜೀವನದ ಚಟುವಟಿಕೆಗಳನ್ನು ಕಂಡ ನನಗೆ ಅವರ ಬಗ್ಗೆ ಅಪಾರವಾದ ಗೌರವವಿತ್ತು. ಲಂಕೇಶ್ ಹಾಗೂ ತೇಜಸ್ವಿಯವರನ್ನು ಆತ್ಮೀಯ ಗೆಳೆಯರೇನೋ ಎಂದು ಭಾವಿಸುತ್ತಿದ್ದ ನಾನು ಅನಂತಮೂರ್ತಿಯವರನ್ನು ಮಾತ್ರ ಗುರುಗಳ ಸ್ಥಾನದಲ್ಲಿ, ಅದರಲ್ಲೂ ಮುಖ್ಯಗುರುಗಳ ಸ್ಥಾನದಲ್ಲಿಟ್ಟಿದ್ದೆ. ಅದಕ್ಕೆ ಕಾರಣವೂ ಇದೆ. ಎಂತಹ ನಿದ್ದೆಗಣ್ಣಲ್ಲಿ ಆಗಲಿ ಅಥವಾ ಎರಡು ಕ್ವಾರ್ಟರ್‌ನ ಸ್ಥಿತಿಯಲ್ಲೇ ಆಗಲಿ ಜಗತ್ತಿನ ಯಾವುದೇ ಭಾಷಾ ಪದವನ್ನು ಕನ್ನಡದಲ್ಲಿ ಒತ್ತಕ್ಷರ ಸಮೇತ ಹಿಡಿದಿಡುವಷ್ಟು ಕಾಗುಣಿತ ತಜ್ಞನಾಗಿದ್ದ ನನಗೆ ನನ್ನ ಕನ್ನಡ ಜ್ಞಾನದ ಬಗ್ಗೆ ಅಪಾರವಾದ ಹೆಮ್ಮೆಯಿತ್ತು. ಆದರೆ ಅದನ್ನು ಜರ್ರನೆ ಜಾರಿಸಿದವರು ಅನಂತಮೂರ್ತಿಯವರು. ಯಾವುದೇ ಪೂರ್ವ ತಯಾರಿಯಿಲ್ಲದೆ ಅವರ 'ಪ್ರಜ್ಞೆ ಮತ್ತು ಪರಿಸರ' ಹಾಗೂ 'ರುಜುವಾತು' ಓದಲು ಪ್ರಯತ್ನಿಸಿದ ನನಗೆ ಕನ್ನಡದಲ್ಲಿ ನಾನೆಷ್ಟು ದಡ್ಡ ಎನ್ನುವುದು ಮನವರಿಕೆಯಾಯಿತು. ಗೋಡೆಗೋಡೆಗೆ ಹಣೆ ಜಜ್ಜಿಕೊಂಡರೂ ನನಗೆ ಏನೊಂದೂ ಅರ್ಥವಾಗಲಿಲ್ಲ.


ಇತ್ತೀಚಿಗೆ ಹೊಸಪೇಟೆಯಲ್ಲಿ ಜರುಗಿದ ನುಡಿನಮನ ಕಾರ್ಯಕ್ರಮದಲ್ಲಿ ರಹಮತ್ ತರೀಕೆರೆಯವರು ಮಾತನಾಡುತ್ತಾ ಅನಂತಮೂರ್ತಿಯವರು ಕರ್ನಾಟಕದ Public Intellectual ಅಲ್ಲದೆ ಕನ್ನಡದ ಆಳಅಗಲಗಳನ್ನು ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಿದವರು ಎಂದದ್ದಕ್ಕೆ ನನ್ನ ಮನಃಪೂರ್ವಕ ಸಹಮತವಿದೆ. ಆದರೆ ಪ್ರಜಾವಾಣಿಯಲ್ಲಿ ಅನಂತಮೂರ್ತಿಯವರ ಅಂತ್ಯಸಂಸ್ಕಾರದ ಫೋಟೋ ನೋಡಿ ನನಗೆ ನಂಬಲಿಕ್ಕೇ ಸಾಧ್ಯವಾಗಲಿಲ್ಲ. ಕರ್ನಾಟಕದ ಅಥವಾ ಈ ದೇಶದ ಓರ್ವ ಶ್ರೇಷ್ಠ ಸಂಸ್ಕೃತಿ ಚಿಂತಕನ ಅಂತ್ಯಸಂಸ್ಕಾರ ಹೀಗೆ ನಡೆದದ್ದು ನಿಜಕ್ಕೂ ಬೇಸರ ತರಿಸಿದೆ.

ಜ್ಯೋತಿ ಬಸುರವರ ನಿದರ್ಶನದಿಂದ ನನ್ನ ದೇಹಕ್ಕೆ ಯಾವುದಾದರೂ ಆಸ್ಪತ್ರೆಯ ಹುಡುಕಾಟದಲ್ಲಿದ್ದ ನನಗೆ ಈ ಘಟನೆಯಿಂದಾಗಿ ಯಾವುದಾದರೂ ಕಾಡಿನ ಮುಗ್ಧ ತೋಳ, ನರಿಗಳಿಗೆ ಆಹಾರವಾಗುವ ಬಯಕೆಯಾಗುತ್ತಿದೆ. ಆತ್ಮ ಎನ್ನುವುದೊಂದಿದ್ದರೆ ಸ್ವರ್ಗದ ರಂಭೆ, ಊರ್ವಶಿ ಅಥವಾ ನರಕದ ಕಾದ ಎಣ್ಣೆಗಿಂತ ಆ ಮುಗ್ಧ ಮಾಂಸಾಹಾರಿ ಪ್ರಾಣಿಗಳ ಕಚಗುಳಿಯನ್ನು ಅನುಭವಿಸುವಂತಾಗಲಿ.

ಬರಹಗಾರನಲ್ಲದ ನಾನು ಇದರ ಬಗ್ಗೆ ಹೆಚ್ಚು ಮಾತಾಡಲಾರೆ. ಹೆಚ್ಚೆಂದರೆ ವಾಟಿಸ್ಸಿಯ ಮೊಬೈಲ್‌ಗೆ ಫಿಫ್ಟಿ ರುಪೀಸ್ ಕರೆನ್ಸಿ ಹಾಕಿಸಬಹುದೇನೋ ಗೊತ್ತಿಲ್ಲ.

– ಎಸ್.ಬಿ. ಶೈಲೇಂದ್ರ, ಹೊಸಪೇಟೆ

ಬೇಟೆಗೆ ಮತ್ತೊಮ್ಮೆ ತಯಾರಿ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಮುಂದಿನ ಎರಡು ದಿನಗಳು ಬಲಿಗೆ ಕಟ್ಟಿದ್ದ ಕತ್ತೆಗಳು ಜೀವಂತವಾಗಿ ಇದ್ದವು. ನಾನು ನನ್ನ ಜಮೀನಿನಲ್ಲಿ ಕಾಲಕಳೆದೆ. ಆದರೆ ಎರಡನೆ ದಿನ ಒಂದು ಸುದ್ದಿ ಬಂದಿತ್ತು. ಅಂಚೆಯವನು ಚಿರತೆಗೆ ಆಹುತಿಯಾದ ನಂತರ ಇಲಾಖೆ ಈಗ ಒಬ್ಬ ಅಂಚೆಯವ ಮತ್ತು ಇಬ್ಬರು ಕಾವಲುಗಾರರು- ಹೀಗೆ ಮೂರು ಜನರನ್ನು ಯೆಲ್ಲಗಿರಿ ಬೆಟ್ಟಗಳಿಗೆ ಅಂಚೆ ಹಂಚಲು ನಿಯಮಿಸಿತ್ತು. ಈ ಕಾವಲುಗಾರರ ಬಳಿ ಕಬ್ಬಿಣದ ಚೂಪಾದ ತುದಿಯುಳ್ಳ ದೊಣ್ಣೆಗಳಿದ್ದವು.

ಈ ಮೂರೂ ಜನ ಹಿಂದಿನ ಅಂಚೆಯವನು ಬಲಿಯಾದ ಸ್ಥಳದಿಂದ ಸ್ವಲ್ಪ ಕೆಳಗೆ ಬಂಡೆಯೊಂದರ ಮೇಲೆ ಒಂದು ಚಿರತೆ ಬಿಸಿಲು ಕಾಯಿಸುತ್ತಾ ಕುಳಿತಿದ್ದುದನ್ನು ನೋಡಿದ್ದರು. ಪಟೇಲ ನನಗೆ ಈ ಸುದ್ದಿಯನ್ನು ತಲುಪಿಸಿದ. ತಕ್ಷಣ ಹೊರಟು ಹಳ್ಳಿಗೆ ಬಂದ ನಾನು ಈ ಕಾವಲುಗಾರರ ಜೊತೆ ಚಿರತೆ ಕುಳಿತಿದ್ದ ಜಾಗಕ್ಕೆ ಬಂದೆ ಆದರೆ ಅಷ್ಟರಲ್ಲಿ ಚಿರತೆ ಅಲ್ಲಿಂದ ಕಾಣೆಯಾಗಿತ್ತು. ಉರಿಬಿಸಿಲಿನಲ್ಲಿ ಕಾದಿರುವ ಆ ಬಂಡೆಗಳ ಮಧ್ಯೆ ಚಿರತೆಯನ್ನು ಹುಡುಕುವುದು ನಿಷ್ಪ್ರಯೋಜಕವೆನ್ನಿಸಿತು. ಆದರೂ ಚಿರತೆ ಸುತ್ತಮುತ್ತಲಿನಲ್ಲೇ ಇದೆ ಎನ್ನುವ ಸುದ್ದಿ ಸ್ಫೂರ್ತಿದಾಯಕವಾಗಿತ್ತು. ನಾನು ಹತ್ತಿರದಲ್ಲಿ ಕಟ್ಟಿದ ಕತ್ತೆಯು ಜೀವಂತವಿದೆಯೇ ಎಂದು ನೋಡಿಕೊಂಡು ಹಿಂತಿರುಗಿದೆ. ಅಗತ್ಯ ಬಿದ್ದರೆ ಮಚಾನನ್ನು ಕಟ್ಟಬಹುದಾದ ಸ್ಥಳವನ್ನು ಮನಸ್ಸಿನಲ್ಲೇ ಗುರುತಿಸಿಕೊಂಡೆ.

ಆ ರಾತ್ರಿ ನಮ್ಮ ಅದೃಷ್ಟ ಚೆನ್ನಾಗಿತ್ತು. ಗೇರು ಮರದ ಹತ್ತಿರ ಕಟ್ಟಿದ್ದ ಕತ್ತೆಯನ್ನು ಚಿರತೆ ಕೊಂದು ಶವವನ್ನು ಅರ್ಧ ತಿಂದು ಮುಗಿಸಿತ್ತು. ಕತ್ತೆಗೆ ನೀರು ಆಹಾರವನ್ನು ಕೊಡಲು ನಾನು ನಿಯಮಿಸಿದ್ದ ಜನ ನನಗೆ ಈ ಸುದ್ದಿ ತಲುಪಿಸಿದರು. ಅವರು ಕತ್ತೆಯ ಶವದ ಅವಶೇಷಗಳನ್ನು ಹದ್ದುಗಳಿಂದ ರಕ್ಷಿಸಲು ಅದನ್ನು ರೆಂಬೆಗಳಿಂದ ಮುಚ್ಚಿದ್ದರು.

ನಾನು ಬೇಗ ಊಟ ಮುಗಿಸಿ ನನ್ನ ಸರಂಜಾಮುಗಳೊಂದಿಗೆ ಹಳ್ಳಿಗೆ ಹೊರಟೆ. ಪಟೇಲನ ಹತ್ತಿರ ಒಂದು ಮಂಚವನ್ನು ಪಡೆದು ಮಚಾನನ್ನಾಗಿ ಬಳಸಿದೆ. ಇದನ್ನು ಗೇರು ಮರಕ್ಕೆ ಕಟ್ಟಿ ಸುತ್ತಲೂ ರೆಂಬೆಗಳ ಮರೆಯನ್ನು ಮಾಡಿದೆವು. ಎಲ್ಲವನ್ನೂ ನಾನು ಖುದ್ದಾಗಿ ನಿಂತು ಮಾಡಿಸಿದೆ. ಏಕೆಂದರೆ ಸ್ವಲ್ಪವೇ ಎಚ್ಚರ ತಪ್ಪಿದರೂ ಚಿರತೆಯ ಅನುಮಾನಕ್ಕೆ ಆಸ್ಪದವಾಗುತ್ತದೆ. ಎಲ್ಲವೂ ನನಗೆ ಒಪ್ಪಿಗೆಯಾಗುವಂತೆ ಸಿದ್ಧವಾಗಿದ್ದರೂ ಒಂದು ತೊಂದರೆ ಇತ್ತು. ಮಚಾನು ನೆಲದಿಂದ ಕೇವಲ ಹತ್ತೇ ಅಡಿ ಎತ್ತರದಲ್ಲಿದ್ದು ಮರವನ್ನು ಹತ್ತುವುದು ಕೂಡ ಸುಲಭವಾಗಿತ್ತು.

ಮಧ್ಯಾಹ್ನ ಸುಮಾರು ಎರಡೂವರೆಯ ಹೊತ್ತಿಗೆ ಕೆಲಸಗಳೆಲ್ಲಾ ಮುಗಿದು ಜನ ಊರಿಗೆ ಹಿಂತಿರುಗಿದರು. ನಾನು ಮಚಾನಿನಲ್ಲಿ ಸಾಧ್ಯವಿರುವಷ್ಟು ಆರಾಮಾಗಿ ಕುಳಿತುಕೊಂಡೆ.

ಅದೊಂದು ಬಿರುಬಿಸಿಲಿನ ಮಧ್ಯಾಹ್ನವಾಗಿತ್ತು. ಸುತ್ತಲು ಎಲ್ಲಾ ಕಡೆ ಹಬ್ಬಿದ್ದ ಬಂಡೆಗಳು ಕೂಡ ಸೂರ್ಯನ ಶಾಖವನ್ನು ಪ್ರತಿಫಲಿಸುತ್ತಿದ್ದವು. ನಾನು ಕುಳಿತಿದ್ದ ಮರವೂ ಬಿಸಿಲಿನಿಂದ ರಕ್ಷಣೆ ಕೊಡುತ್ತಿರಲಿಲ್ಲ. ಸೂರ್ಯ ಮೈಸೂರು ಕಡೆಯ ಪ್ರಸ್ಥಭೂಮಿಯಲ್ಲಿ ಮುಳುಗಿ ಸಂಜೆಯಾಗುತ್ತಿದ್ದಂತೆ ನನಗೆ ಸಮಾಧಾನವಾಯಿತು. ತೀರಾ ಕೆಳಗಡೆ ಜಾಲರಪೇಟೆಯ ರೈಲ್ವೇ ನಿಲ್ದಾಣ ಮತ್ತು ಅಲ್ಲಿ ಬಂದುಹೋಗುತ್ತಿದ್ದ ರೈಲುಗಳು ಕಾಡುತ್ತಿದ್ದವು. ಆಗಾಗ ಕೇಳುತ್ತಿದ್ದ ರೈಲಿನ ಸದ್ದಿನ ಹೊರತಾಗಿ ಸಂಪೂರ್ಣ ಮೌನ ಆವರಿಸಿತ್ತು. ಪಶ್ಚಿಮದ ಇಳಿಜಾರಿನ ಕಡೆ ಮುಖಮಾಡಿ ಕುಳಿತಿದ್ದ ನನಗೆ ಕೆಳಗಿನ ಬಯಲು ಪ್ರದೇಶದಲ್ಲಿ ಕತ್ತಲು ಆವರಿಸುತ್ತಿದ್ದರೂ ಬೆಟ್ಟದ ನೆತ್ತಿಯ ಮೇಲೆ ಇನ್ನೂ ಸೂರ್ಯನ ಕೊನೆಯ ಕಿರಣಗಳು ಬೀಳುತ್ತಿದ್ದುದು ಕಾಣುತ್ತಿತ್ತು. ಕೆಳಗಿನ ಕತ್ತಲಿನಲ್ಲಿ ಜಾಲಾರಪೇಟೆಯ ದೀಪಗಳು ಹೊಳೆಯುತ್ತಿದ್ದವು. ರೈಲ್ವೇ ನಿಲ್ದಾಣದ ನಿಯಾನ್ ದೀಪಗಳು ಮತ್ತು ಕೆಂಪು ಹಸಿರು ಸಿಗ್ನಲ್ ಲೈಟ್‌ಗಳೂ ಕಾಣುತ್ತಿದ್ದವು. ಐದು ಮೈಲು ದೂರದಲ್ಲಿ ಹೋಗುತ್ತಿದ್ದ ರೈಲುಗಳ ಸದ್ದು ಬಹಳ ಹತ್ತಿರದಿಂದ ಕೇಳಿದಂತೆ ಅನ್ನಿಸುತ್ತಿತ್ತು.


ಸುತ್ತಲೂ ಸಂಪೂರ್ಣ ಕತ್ತಲಾಯಿತು. ಅದು ಬೆಳದಿಂಗಳಿನ ರಾತ್ರಿಯಾಗಿ ರಲಿಲ್ಲ. ಕವಿದಿದ್ದ ಮೋಡಗಳು ನಕ್ಷತ್ರಗಳನ್ನು ಕೂಡ ಮರೆಯಾಗಿಸಿದ್ದವು. ಆ ಗಾಢಾಂಧಕಾರದಲ್ಲಿ ಚಿರತೆಯ ಆಗಮನವನ್ನು ತಿಳಿಯಲು ನಾನು ಶ್ರವಣ ಶಕ್ತಿಯನ್ನೇ ನಂಬಿಕೊಳ್ಳಬೇಕಾಗಿತ್ತು.

ಯಾವುದೇ ತರಹದ ಹುಳಹುಪ್ಪಟೆಗಳ ಸದ್ದೂ ಕೇಳುತ್ತಿರಲಿಲ್ಲ. ಮರದ ರೆಂಬೆಗಳು ಕಿರುಗುಟ್ಟುವ ಶಬ್ದ ಸಹ ಕೇಳುತ್ತಿರಲಿಲ್ಲ. ಆಗಾಗ ಬರುತ್ತಿದ್ದ ಸೊಳ್ಳೆಗಳು ನನ್ನ ತಲೆಯ ಸುತ್ತ ಕೂಗಾಡುತ್ತಾ ಸುತ್ತಿ ಮುಖ ಅಥವಾ ಕೈಗಳ ಮೇಲೆ ಕೂತು ಕಚ್ಚುತ್ತಿದ್ದವು. ನಾನು ಸದ್ದಾಗದಂತೆ ಕೈಯನ್ನು ಅಲುಗಾಡಿಸುತ್ತಿದ್ದೆ ಅಥವಾ ಕೆಳತುಟಿಯನ್ನು ಹೊರಚಾಚಿ ನನ್ನ ಮುಖಕ್ಕೆ ಗಾಳಿಯನ್ನು ಊದುತ್ತಿದ್ದೆ. ಇದರಿಂದ ಎಚ್ಚರಗೊಂಡ ಸೊಳ್ಳೆ ಹಾರಿ ಮತ್ತೆ ಅಲ್ಲೇ ಸುತ್ತುತ್ತಾ ತನ್ನ ಪ್ರಯತ್ನವನ್ನು ಮುಂದುವರೆಸುತ್ತಿತ್ತು.

ಹೀಗೆ ಕಾಡಿನಲ್ಲಿ ಸಮಯ ಕಳೆಯುವುದು ನನಗೆ ಅಭ್ಯಾಸವಾಗಿಬಿಟ್ಟಿತ್ತು. ನಾನು ಪದೇಪದೇ ವಾಚಿನ ಕಡೆ ಕೂಡ ನೋಡುತ್ತಿರಲಿಲ್ಲ. ಜೋರಾಗಿ ಹೋಗುವಂತೆ ಸಮಯವನ್ನು ಮುಂದೆ ತಳ್ಳುವುದು ಸಾಧ್ಯವಿಲ್ಲವೆಂದ ಮೇಲೆ ಅದರ ಬಗೆಗೆ ಏಕೆ ಗಮನ ಹರಿಸಬೇಕು? ಇಂತಹ ಸಮಯದಲ್ಲಿ ಸಿಹಿಯಾದ, ಸಿಹಿಯಲ್ಲದ, ಹಳೆಯ-ಹೀಗೆ ಎಲ್ಲಾ ರೀತಿಯ ನೆನಪುಗಳೂ ತಲೆಯಲ್ಲಿ ನುಸುಳುತ್ತಿರುತ್ತವೆ. ಅವತ್ತು ನಾನು ಒಂದು ಹೊಸ ರೀತಿಯ ಸೈಕಲ್‌ನ್ನು ಕಂಡುಹಿಡಿಯುವ ಬಗೆಗೆ ಯೋಚಿಸುತ್ತಿದ್ದೆ. ಈ ಸೈಕಲ್‌ನ್ನು ಬಹಳ ಕಡಿಮೆ ಶ್ರಮದಿಂದ ಬಹಳ ದೂರದವರೆಗೆ ವೇಗವಾಗಿ ತುಳಿದುಕೊಂಡು ಹೋಗುವುದು ಸಾಧ್ಯವಾಗಬೇಕು ಎನ್ನುವುದು ನನ್ನ ಉದ್ದೇಶವಾಗಿತ್ತು. ಮನುಷ್ಯನ ಮಿದುಳಿಗೆ ಕೆಲಸವಿಲ್ಲದಿದ್ದಾಗ ಎಂತೆಂತಹ ಯೋಚನೆಗಳು ಬರಬಹುದು ಎಂದು ನೋಡಿದರೆ ಆಶ್ಚರ್ಯವಾಗುವುದಿಲ್ಲವೇ?

ಚಿರತೆಯ ಆಗಮನ

ಈ ರೀತಿಯ ಹೊಸ ಸೈಕಲ್ ಕಂಡುಹಿಡಿಯುವ ಯೋಚನೆಯ ಸರಣಿಗೆ ಅಡ್ಡ ಬಂದಂತೆ ನನಗೆ ಸಣ್ಣದಾದ ನಿಟ್ಟುಸಿರೊಂದು ಕೇಳಿದಂತಾಯಿತು. ಚಿರತೆ ಬಂದು ಕತ್ತೆಯ ಶವದ ಬಳಿ ನಿಂತಿದೆ ಎಂದು ನನಗೆ ತಿಳಿಯಿತು. ತನ್ನ ಬಾಯನ್ನು ಸ್ವಲ್ಪವೇ ತೆಗೆದು ಚಿರತೆ ಹೊರಹಾಕಿದ ಉಸಿರಿನ ಸದ್ದನ್ನೇ ನಾನು ಆಗಷ್ಟೇ ಕೇಳಿದ್ದೆ. ತಕ್ಷಣ ಟಾರ್ಚ್‌ನ್ನು ಹೊತ್ತಿಸುವುದು ಸ್ವಲ್ಪ ಆತುರದ ಕೆಲಸವಾಗಬಹುದು ಎನ್ನಿಸಿತು. ಹಾಗಾಗಿ ಚಿರತೆ ತನ್ನ ಊಟವನ್ನು



ಪ್ರಾರಂಭಿಸುವವರೆಗೆ ಕಾಯಲು ನಿರ್ಧರಿಸಿದೆ. ಹಾಗೆ ಮಾಡಬಾರದಿತ್ತು ಎಂದು ಈಗ ಅನ್ನಿಸುತ್ತಿದೆ. ಟಾರ್ಚ್‌ನ್ನು ತಕ್ಷಣ ಹೊತ್ತಿಸಿದ್ದರೆ ಚಿರತೆಗೆ ಯಶಸ್ವಿಯಾಗಿ ಗುಂಡು ಹೊಡೆದು ಇನ್ನೊಂದು ಮನುಷ್ಯ ಜೀವಿ ಸಾಯುವುದನ್ನು ತಪ್ಪಿಸಬಹುದಿತ್ತು. ಮಾಂಸವನ್ನು ಕಚ್ಚಿ ಹರಿಯುವ ಮತ್ತು ಮೂಳೆಯನ್ನು ಅಗಿಯುವ ಸದ್ದಿಗಾಗಿ ನಾನು ನಿರೀಕ್ಷೆಯಿಂದ ಕಾಯುತ್ತಿದ್ದೆ. ಆದರೆ ಅಂತಹ ಯಾವ ಸದ್ದೂ ಕೇಳಲಿಲ್ಲ. ಕ್ಷಣಗಳು ಕಳೆಯುತ್ತಾ ಬಂದಂತೆ ಏನೋ ತಪ್ಪಾಗಿದೆ ಎಂದು ನನಗೆ ಸಂಶಯವಾಯಿತು.

ಕಾಡಿನ ಮಾಂಸಾಹಾರಿ ಪ್ರಾಣಿಗಳು ಅಗತ್ಯವಿದ್ದಾಗ ಎಷ್ಟು ನಿಶಬ್ದವಾಗಿ ಇರಬಲ್ಲವು ಮತ್ತು ಚಲಿಸಬಲ್ಲವು ಎಂದು ನನಗೆ ಗೊತ್ತಿತ್ತು. ಅದರಲ್ಲೂ ಚಿರತೆಗಳಂತೂ ನಡು ಹಗಲಿನಲ್ಲಿ ಕೂಡ ಯಾರಿಗೂ ಕಾಣದಂತೆ ಬಂದು ಹೋಗಬಲ್ಲ ಸೂಕ್ಷ್ಮತೆಯನ್ನು ಪಡೆದುಕೊಂಡಿವೆ. ಹಾಗಾಗಿ ಇಂತಹ ಗಾಢವಾದ ಕತ್ತಲಿನಲ್ಲಿ ಚಿರತೆ ಒಂದೇ ಗಜ ಹತ್ತಿರದಲ್ಲಿರುವುದನ್ನು ಅಥವಾ ಮೈಲುಗಟ್ಟಲೆ ದೂರವಿರುವುದನ್ನು ತಿಳಿಯುವುದು ಸಾಧ್ಯವಿರಲಿಲ್ಲ.

ನನ್ನ ವಾಚಿನಲ್ಲಿ **8** ಗಂಟೆ **40** ನಿಮಿಷವಾಗಿತ್ತು. ನಾನು ನಿಶಬ್ದವಾಗಿ ಕಾಯುತ್ತಲೇ ಇದ್ದೆ. ಸುಮಾರು ಹೊತ್ತಿನ ನಂತರ ನನ್ನ ಬಲಗಡೆ ಇದ್ದ ಬಂಡೆಗಳ ಸಂದಿನಿಂದ ನನಗೆ ಆಳವಾದ ಗುರುಗುಟ್ಟುವ ಸದ್ದು ಕೇಳಿಸಿತು. ಕೆಲವು ಸೆಕೆಂಡುಗಳ ನಂತರ ಇದು ಪುನರಾವರ್ತನೆಯಾಯಿತು. ಅದು ಹೇಗೋ ಚಿರತೆಗೆ ನನ್ನ ಇರುವಿಕೆಯ ಬಗೆಗೆ ತಿಳಿದುಹೋಗಿದೆ. ವಾಸನೆಯಿಂದ ಅದು ತಿಳಿದುಕೊಂಡಿರಲು ಸಾಧ್ಯವಿಲ್ಲ ಏಕೆಂದರೆ ಚಿರತೆಗಳಿಗೆ ವಾಸನೆಯನ್ನು ಗ್ರಹಿಸುವ ಶಕ್ತಿ ಇರುವುದಿಲ್ಲ. ನಾನು ನಿಶಬ್ದವಾಗಿ ಕುಳಿತಿದ್ದುದರಿಂದ ಅದು ಶಬ್ದದಿಂದ ನನ್ನ ಇರುವಿಕೆಯನ್ನು ಗುರುತಿಸಿರಲು ಸಾಧ್ಯವಿಲ್ಲ. ಹಾಗಿದ್ದರೆ ಅದು ಆಕಸ್ಮಿಕವಾಗಿ ಮೇಲೆ ನೋಡಿದಾಗ ಮಚಾನು ಇರುವುದನ್ನು ಗುರುತಿಸಿರಬೇಕು ಅಥವಾ ಅದರ ಅಂತಃಪ್ರಜ್ಞೆ ಅದನ್ನು ಎಚ್ಚರಿಸಿರಬೇಕು. ಅಂತೂ ಅದು ಅಲ್ಲಿ ಒಬ್ಬ ಮನುಷ್ಯನಿರುವುದನ್ನು ಪತ್ತೆ ಮಾಡಿತ್ತು. ಹಾಗಿದ್ದರೆ ಅದು ಮರವನ್ನು ಏರಿಬಂದು ನನ್ನತ್ತ ಆಕ್ರಮಣವನ್ನೇಕೆ ಮಾಡಿಲ್ಲ? ಚಿರತೆಯ ಆತ್ಮರಕ್ಷಣೆಯ ಸಂವೇದನೆ ಅದನ್ನು ಎಚ್ಚರಿಸಿರಬೇಕು-ಇಲ್ಲಿರುವ ಮನುಷ್ಯ ತಾನು ಕೊಂದ ಇತರರಂತಲ್ಲ, ಅವನು ತನಗೆ ಅಪಾಯಕಾರಿ! ಈ ಚಿರತೆ ನರಭಕ್ಷಕನಲ್ಲದೆಯೂ ಇರಬಹುದು. ಆದರೆ ಈಗಿನ ವರ್ತನೆಯನ್ನು ನೋಡಿದರೆ ಅದು ನರಭಕ್ಷಕನಾಗಿರುವ ಸಾಧ್ಯತೆಯೇ ಹೆಚ್ಚಾಗಿತ್ತು.

ಮೊದಮೊದಲು ಚಿರತೆಯ ಗುರುಗುಟ್ಟುವಿಕೆ ಶತ್ರುಗಳಿಗೆ ಎಚ್ಚರಿಕೆಯಾಗಿತ್ತು. ಆದರೆ ಹೆಚ್ಚಾಗುತ್ತಾ ಬಂದಂತೆ ಅದು ಚಿರತೆ ತನ್ನ ಧೈರ್ಯವನ್ನು ಒಟ್ಟುಗೂಡಿಸಿಕೊಳ್ಳುತ್ತಿರುವುದರ ಸೂಚನೆಯಾಗಿತ್ತು. ಬಹುಶಃ ಸಾಕಷ್ಟು ಬಾರಿ ಗುರುಗುಟ್ಟಿದ ನಂತರ ಅದು ಆಕ್ರಮಣ ಮಾಡುವ ಮನಸ್ಥಿತಿಗೆ ಬಂದು ನಾನು ಕುಳಿತ ಮರದತ್ತ ನುಗ್ಗಬಹುದು. ನಾನು ಹಿಂದೆ ಗಮನಿಸಿದ ಚಿರತೆಗಳು ಕೋತಿಗಳ ವಿಚಾರದಲ್ಲಿ ಹೀಗೆಯೇ ನಡೆದುಕೊಳ್ಳುತ್ತವೆ. ತಾ ಮರದತ್ತ ಚಿರತೆ ಆಕ್ರಮಣ ಮಾಡಿದಾಗ ಈ ಕೋತಿಗಳು ಭಯದಿ ಮರದಿಂದ ಕೆಳಕ್ಕೆ ಹಾರುತ್ತವೆ. ನನ್ನ ಮೇಲೆ ಕೂಡ ಚಿರತೆ ಇಂತಹು ಪ್ರಯೋಗ ಮಾಡಬಹುದೇ?

ಕೆಲವೇ ಕ್ಷಣಗಳಲ್ಲಿ ಗುರುಗುಟ್ಟುವಿಕೆಯ ತೀವ್ರತೆ ಮತ್ತು ವೇಗ ಎರ ಹೆಚ್ಚಾದವು. ಚಿರತೆ ಆಗ ಭಯಂಕರವಾಗಿ ಸದ್ದು ಮಾಡುತ್ತಿತ್ತು. ಚಿರತೆ ಧೈರ್ಯವನ್ನು ಒಟ್ಟುಗೂಡಿಸಿಕೊಂಡು ನನ್ನ ಮೇಲೆ ಮಾಡಬಹುದಾ ಆಕ್ರಮಣಕ್ಕಾಗಿ ನಾನು ಸಿದ್ಧನಾಗತೊಡಗಿದೆ.

ಪ್ರಥಮ ಸುತ್ತಿನ ಹೋರಾಟ

ಹೀಗೆಯೇ ಕೆಲವು ನಿಮಿಷಗಳು ಮುಂದುವರೆಯಿತು. ನಂತರ ಆಕ್ರಮ ಮಾಡಲು ನುಗ್ಗುವ ಚಿರತೆಗಳು ಮಾಮೂಲಾಗಿ ಮಾಡುವಂತಹ ವಿಚಿತ್ರವಾ ಕೆಮ್ಮಿನಂತಹ ಘರ್ಜನೆಯನ್ನು ಮಾಡುತ್ತಾ ಅದು ಹೊರಬಂದಿತು. ಚಿ ಗೇರು ಮರದ ಬುಡಕ್ಕೆ ಬರುತ್ತಿದ್ದಂತೆ ನಾನು ಮರೆಗೆ ಹಾಕಿದ್ದ ರೆಂಬೆಗಳ ಸರಿಸಿ ಮಚಾನಿನ ತುದಿಯಿಂದ ಬಗ್ಗಿ ಬಂದೂಕಿನ ನಳಿಕೆಯನ್ನು ಕೆಳಮುಖವಾ ತಿರುಗಿಸುತ್ತಾ ಫ್ಲಾಷ್‌ಲೈಟ್‌ನ ಸ್ವಿಚ್‌ನ್ನು ಒತ್ತಿದೆ. ಮಚಾನು ಕೇವಲ ಹ ಅಡಿ ಎತ್ತರದಲ್ಲಿದ್ದು ಚಿರತೆಗೆ ಮರವನ್ನು ಸುಲಭವಾಗಿ ಹತ್ತ ಸಾಧ್ಯವಾಗುತ್ತಿದ್ದುದರಿಂದ ನಾನು ಚುರುಕಾಗಿರಬೇಕೆಂದು ನನಗೆ ಗೊತ್ತಿತ್ತು.

ನನ್ನ ದುರಾದೃಷ್ಟಕ್ಕೆ ಅದೇ ಸಮಯಕ್ಕೆ ಮರೆಗಾಗಿ ಕಟ್ಟಿದ್ದ ರೆಂಬೆಯೊಂ ಕಳಚಿ ಕೆಳಗಿದ್ದ ಚಿರತೆಯ ಮೇಲೆ ಬಿದ್ದುಬಿಟ್ಟಿತು. ಇದರಿಂದ ಚಿರತೆ ಆಕ್ರಮಣದ ವೇಗವೇನೋ ತಗ್ಗಿತು. ಆದರೆ ಕೆಳಗೆ ಬಿದ್ದ ರೆಂಬೆ ಚಿರತೆಯ ನನ್ನ ಟಾರ್ಚ್ ಬೆಳಕಿನಿಂದ ಸಂಪೂರ್ಣವಾಗಿ ಮರೆಯಾಗಿಸಿ ನಾನು ಕೆಳಕ್ಕೆ ನೋಡಿದಾಗ ತೀವ್ರವಾಗಿ ಅಲುಗಾಡುತ್ತಿದ್ದ ರೆ ಮಾತ್ರ ಕಾಣಿಸಿತು.

ಆ ಕ್ಷಣದಲ್ಲಿ ನಾನೊಂದು ಮೂರ್ಖತನದ ಕೆಲಸ ಮಾಡಿ ಚಿರತೆ ರೆಂಬೆಯಿಂದ ಬಿಡಿಸಿಕೊಳ್ಳುವವರೆಗೂ ಕಾಯದೆ ಅ ದೇಹ ಇರಬಹುದಾದ ಸ್ಥಳವನ್ನು ಊಹಿಸಿ ಬಂದೂಕ ಚಲಾಯಿಸಿಬಿಟ್ಟೆ. ಇದರ ಪರಿಣಾಮವಾಗಿ ಚಿರತೆ ಹಿಂ ಜಿಗಿದು ನೆಲಕ್ಕೆ ಉರುಳಿತು. ಒಂದುಕ್ಷಣ ನಾನು ಚಿರತೆಯ ಕೊಲ್ಲುವುದರಲ್ಲಿ ಯಶಸ್ವಿಯಾಗಿದ್ದೇನೆ ಅನ್ನಿಸಿತು. ಆದರೆ ನೆ ಬಿದ್ದ ಚಿರತೆ ತನ್ನ ಮೇಲೆ ಇದ್ದ ರೆಂಬೆಯಿಂದ ಬಿಡಿಸಿಕೊಂಡಿ ಬಂದೂಕನ್ನು ನಾನು ಇನ್ನೊಂದು ಗುಂಡು ಹಾರಿಸಲು ಸ ಮಾಡಿಕೊಳ್ಳುವಷ್ಟರಲ್ಲಿ ಅದರ ಹಳದಿ ಚುಕ್ಕೆಗಳ ದೆ ಪೊದೆಗಳೊಳಗೆ ನುಗ್ಗಿದ್ದು ಕಾಣಿಸಿತು. ಅದು ಹೋದ ದಿಕ್ಕಿ ನಾನು ಟಾರ್ಚ್‌ನ ಬೆಳಕನ್ನು ಓಡಿಸಿದೆ. ಆದರೆ ಚಿರತೆ ಎ ಅಥವಾ ಯಾವ ಕಡೆ ಹೋಗಿದೆ ಎನ್ನುವುದಕ್ಕೆ ಯಾವು ಸೂಚನೆ ಸಿಗಲಿಲ್ಲ. ಸಂಪೂರ್ಣ ಮೌನ ಆವರಿಸಿತು. ಪೊದೆ ಮರೆಯಲ್ಲಿ ಚಿರತೆ ಸತ್ತು ಅಥವಾ ಗಾಯಗೊಂ ಬಿದ್ದಿರಬಹುದು ಅಥವಾ ಇಲ್ಲಿಂದ ಅದು ಬಹುದೂರ ಕಾಣೆಯಾಗಿರಬಹುದು. ಇದನ್ನು ತಿಳಿಯಲು ಯಾವುದೇ ಮಾರ್ಗವಿರಲಿ ನಾನು ಸ್ವಲ್ಪ ಹೊತ್ತು ಟಾರ್ಚ್ ಬೆಳಕನ್ನು ಹರಿಸುತ್ತಿದ್ದೆ. ನಂತರ ಕತ್ತಲಿ ಯಾವುದಾದರೂ ಚಲನೆಯ ಅಥವಾ ಶಬ್ದದ ಸೂಚನೆಗಳನ್ನು ನಿರೀಕ್ಷಿಸು ಕುಳಿತೆ. ಒಂದು ಗಂಟೆ ಕಾದ ಮೇಲೆ ನಾನು ಚಿರತೆ ಓಡಿಹೋದ ಪೊದೆಗ ಇನ್ನೊಂದು ಗುಂಡು ಹಾರಿಸಲು ನಿರ್ಧರಿಸಿದೆ. ಗಾಯಗೊಂಡು ಅ ಬಿದ್ದುಕೊಂಡಿದ್ದರೆ ಚಿರತೆಯಿಂದ ಏನಾದರೂ ಪ್ರತಿಕ್ರಿಯೆ ಬರಬಹುದೆ ಆಸೆ ನನ್ನದಾಗಿತ್ತು. ಟಾರ್ಚ್‌ನ್ನು ಬೆಳಗಿಸಿ ಬಂದೂಕನ್ನು ಚಲಾಯಿಸಿದೆ. ಗುಂ ಹೊಡೆತದ ಸದ್ದಿಗೆ ಬೆಟ್ಟದ ಬದಿಯಿಂದ ಪ್ರತಿಧ್ವನಿ ಬಂದಿತೇ ಹೊ ಚಿರತೆಯಿಂದ ಏನೂ ಪ್ರತಿಕ್ರಿಯೆ ಬರಲಿಲ್ಲ.

ಗೂಡ್ಸ್ ರೈಲೊಂದು ಜಾಲಾರ್‌ಪೇಟೆಯಿಂದ ಮುಲನೂರು ಘಾಟಿಯ ಏರಿ ಬೆಂಗಳೂರಿನ ಕಡೆ ಹೊರಟಿತು. ನಾನು **11.30** ರವರೆಗೆ ಕ ಮದ್ರಾಸ್-ಕೊಚ್ಚಿನ್ ರೈಲಿನ ದೊಡ್ಡ ಸಿಳ್ಳನ್ನು ಕೇಳಿದ ನಾನು ಮಚಾನಿನ ಇಳಿದು ನನ್ನ ಗುಡಿಸಲಿಗೆ ಹೋಗಿ ಆರಾಮಾಗಿ ನಿದ್ದೆ ಮಾಡಲು ನಿರ್ಧರಿ ಚಿರತೆ ಸತ್ತಿರಬೇಕು ಅಥವಾ ದೂರ ಓಡಿಹೋಗಿರಬೇಕು ಎಂದು ನ ಖಾತ್ರಿಯಿದ್ದುದರಿಂದ ನಾನು ಸುರಕ್ಷಿತವಾಗಿದ್ದೆ. ಮರದಿಂದ ಕೆಳಗಿಳಿದು ನ ಮೊದಲು ಹಳ್ಳಿಗೆ ಹೋಗಿ ಪಟೇಲನಿಗೆ ಮತ್ತು ಉತ್ಸುಕರಾಗಿದ್ದ ಹಳ್ಳಿಗ ಎಲ್ಲವನ್ನೂ ವಿವರಿಸಿದೆ.

ಮರುದಿನ ಬೆಳಗ್ಗೆ ನಾನು ಮತ್ತೆ ಹಳ್ಳಿಗೆ ಬಂದು ಇಪ್ಪತ್ತು ಜನ ಒಟ್ಟು ಮಾಡಿದೆ. ಜೊತೆಗೆ ಆರು ಹಳ್ಳಿಯ ನಾಯಿಗಳನ್ನೂ ಸೇರಿಸಿಕೊ ಈ ನಮ್ಮ ಶಕ್ತಿಯುತ ತಂಡ ಗೇರು ಮರದ ಹತ್ತಿರ ಬಂದಿತು. ಕತ್ತೆ ಶವದ ಅವಶೇಷಗಳು ಹಾಗೆಯೇ ಇದ್ದವು. ನಾನು ಹೊಡೆದ ಮೊ ಗುಂಡು ನೆಲದಲ್ಲಿ ತೂತು ಕೊರೆದುಕೊಂಡು ಹೋಗಿತ್ತು. ಅಲ್ಲೆಲ್ಲೂ ರ ಕಲೆಗಳಿರಲಿಲ್ಲ. ಚಿರತೆ ಓಡಿಹೋದ ಪೊದೆಗಳು, ನಾನು ಎರಡನೇ ಗುಂಡು ಹಾರಿಸಿದ ಜಾಗವನ್ನೂ ಸೇರಿಸಿ ಸುತ್ತಲಿನ ವಿಶಾಲವಾದ ಪ್ರದೇಶದಲ್ಲಿ ನ ಹುಡುಕಾಡಿದೆವು. ಆದರೆ ಯಾವುದೇ ಗುರುತುಗಳು ಕಾಣಲಿಲ್ಲ. ನಾ ಹೊಡೆದ ಗುಂಡು ಗುರಿಯನ್ನು ತಪ್ಪಿರುವುದು ನಿಚ್ಚಳವಾಗಿತ್ತು. ನನ್ನ ಬಗ್ಗೆ ಕೋಪಗೊಳ್ಳುತ್ತಾ, ಜಿಗುಪ್ಸೆಪಟ್ಟುಕೊಳ್ಳುತ್ತಾ ನಾನು ಆ ಜನರೊಂದಿಗೆ ಹ ಹಿಂತಿರುಗಿದೆ. ಪಟೇಲನಿಗೆ ನನ್ನ ಸಮಯ ಮುಗಿದಿದೆ ಇಂದು, ಮತ್ತೇನಾದ ಬೆಳವಣಿಗೆಗಳಿದ್ದರೆ ತಂತಿ ಸಂದೇಶ ಕಳಿಸಬೇಕೆಂದು ಹೇಳಿ ನಾನು ಸಂಜ ಮದ್ರಾಸ್ ಎಕ್ಸ್‌ಪ್ರೆಸ್‌ನಲ್ಲಿ ಬೆಂಗಳೂರಿಗೆ ಹಿಂದಿರುಗಿದೆ.

ಹೀಗೆ ಎಲ್ಲಗಿರಿ ಬೆಟ್ಟಗಳ ನರಭಕ್ಷಕ ಚಿರತೆಯೊಂದಿಗೆ ನನ್ನ ಪ್ರ ಸುತ್ತಿನ ಹೋರಾಟ ಮುಗಿದಿತ್ತು.

(ಮುಂದುವರೆಯು

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಕರಿಗೊಲ್ಲನ ಕರಿಷ್ಮಾ ಮತ್ತು ಆಕಾಶವಾಣಿ


...ಯಾಕೆ ವೈಷ್ಣವ ಸಂತರು ಪುಷ್ಪಕ ವಿಮಾನವೆಂಬ ...ಕ್ಲೈವಿಲ್ಲೇ ಫ್ಲೈಟ್ ಹತ್ತಿಬಿಡುತ್ತಿದ್ದರು?

...ಡಿ.ಕೋಸಾಂಬಿಯವರು ಬಹು ಸ್ಪಷ್ಟತೆಯಿಂದ ತಮ್ಮ ... ಮತ್ತು ವಾಸ್ತವದಲ್ಲಿ ಉಲ್ಲೇಖಿಸುತ್ತಾರೆ.


...ಮಹಾರಾಷ್ಟ್ರದಲ್ಲಿ ಎರಡು ವಿಭಿನ್ನ ಗುಂಪುಗಳು ...ಣ ಪ್ರಾಧಾನ್ಯವನ್ನು ವಿರೋಧಿಸಿದವು. ಇವೆರಡೂ ...ನ್ನೇ ಆರಾಧಿಸುತ್ತಿದ್ದ ಗುಂಪುಗಳು. ಇನ್ನೊಂದು ...ಾರ್ಹ ಅಂಶವೆಂದರೆ, ಇವೆರಡೂ ಪಂಥಗಳು ಪ್ರಾಚೀನ ...ಟ್ಟುಗಳ ಸಾಮುದಾಯಿಕ ನಂಬಿಕೆಗಳನ್ನೇ ಆಧರಿಸಿದ್ದವು. ...ಲ್ಲಿ ಒಂದು 12ನೇ ಶತಮಾನದಲ್ಲಿ ಚಕ್ರಧರ ಸ್ಥಾಪಿಸಿದ್ದ ...ಾನುಭಾವ" ಅಥವಾ 'ಮಾನ್ ಭಾವ್' ಪಂಥ.

ಬುಡಕಟ್ಟಿನ ಸಾಮುದಾಯಿಕ ಬದುಕನ್ನೇ ...ವಾಗಿ ಇಟ್ಟುಕೊಂಡಿತ್ತು, ಕರಿಯ ಬಟ್ಟೆ ಧರಿಸುವುದು, ...ವ್ಯವಸ್ಥೆಯನ್ನು ಸಾರಾಸಗಟಾಗಿ ತಿರಸ್ಕರಿಸುವುದು, ...ಕಟ್ಟಿನಂತೆ ಸಣ್ಣಸಣ್ಣ ಗುಂಪುಗಳಾಗಿ ...ುತರಾಗುವುದು, ಸದಸ್ಯರೊಡನೆ ಪರಸ್ಪರ ಹಂಚಿಕೊಂಡು ...ುವುದು, ತೀರಾ ಸರಳವಾದ ವೈವಾಹಿಕ ವಿಧಿ ...ಬಧ-ಗುಂಧ) ಮುಂತಾದವುಗಳನ್ನೆಲ್ಲಾ ಗಮನಿಸಿದರೆ ...ಂಶ ಸ್ಪಷ್ಟವಾಗುತ್ತದೆ. ಆದರೆ, ಹಿಂದೂಗಳಿಂದ ಮನ್ನಣೆ ...ಯಬೇಕೆಂಬ ಬಯಕೆಯಿಂದ ನಂತರದ ಕಾಲದಲ್ಲಿ ... ನಾಯಕರು ಒಂದಿಷ್ಟು ಆಸ್ತಿ ಮಾಡಿಕೊಂಡರು.









ಮತ್ತೊಂದು ಜ್ಞಾನೇಶ್ವರನು ಸಂಘಟಿಸಿದ ಆಂದೋಲನ. ...ಆಂದೋಲನ ಕಾಲಕಾಲಕ್ಕೆ ಪಂಢರಾಪುರಕ್ಕೆ ಯಾತ್ರೆ ...ಗುತ್ತಿದ್ದ ವಾರ್ಕರಿಗಳ ನಡುವೆ ತುಂಬಾ ಪ್ರಬಲವಾಗಿತ್ತು, ...ು ಮಧ್ಯ ಶಿಲಾಯುಗದ ಕಾಲದ ಸಂಪ್ರದಾಯಗಳನ್ನು ...ಿಸುತ್ತಿದ್ದರು. ಒಬ್ಬ ಧರ್ಮಭ್ರಷ್ಟ ಸನ್ಯಾಸಿಯ ಮಗ ... ಕಾರಣಕ್ಕಾಗಿ ಬ್ರಾಹ್ಮಣರು ಜ್ಞಾನೇಶ್ವರನನ್ನು ...ಷ್ಕರಿಸಿದ್ದರು. ಪಾಪ, ಅದೇ ಕೊರಗಿನಲ್ಲಿ ಅವನ ವೃದ್ಧ ...ತಾಯಿಯರು ಗಂಗಾನದಿಯಲ್ಲಿ ಧುಮುಕಿ ಆತ್ಮಹತ್ಯೆ ...ಡಿಕೊಂಡರು. ಸ್ವತಃ ಜ್ಞಾನೇಶ್ವರನ ಬದುಕು ಕೂಡ ...ಕರವಾಗಿರಲಿಲ್ಲ. ಬದುಕಿದ್ದ ಕೆಲವು ಕಾಲವೂ ಅವನು ...ನ್ನು ಅನುಭವಿಸಬೇಕಾಯಿತು. ಕೊನೆಗೆ ಅವನು ...ದಿ ಎಂಬ ಸ್ಥಳದಲ್ಲಿ ಆತ್ಮಹತ್ಯೆ ಮಾಡಿಕೊಂಡ. ಅವನನ್ನು ...ಸಿಸಿದ ಮರಾಠಿ ಸಂತರು ಆಡುಭಾಷೆಯಲ್ಲೇ ಬರೆದರು. ...ಲ್ಲರೂ ವಿಭಿನ್ನ ಜಾತಿಗಳಿಂದ ಬಂದವರು. ಅವರೆಲ್ಲರೂ ...ಸಾಮಾನ್ಯರ ಬದುಕಿನ ಕಷ್ಟಕಾರ್ಪಣ್ಯಗಳನ್ನು ...ಭವಿಸಿದವರು. ನಾಮದೇವನು ವೃತ್ತಿಯಿಂದ ಒಬ್ಬ ...ಾನ್ಯ ದರ್ಜಿಯಾಗಿದ್ದರೂ ಕೂಡ, ಈ ಹೊಸತತ್ವವನ್ನು ...ದ ಉತ್ತರದಲ್ಲಿ ಯಶಸ್ವಿ ಪ್ರಚಾರ ಮಾಡಿದ. ಅವನ ...ರಚನೆಗಳು ಸಿಖರ ಪವಿತ್ರಗ್ರಂಥದಲ್ಲಿಯೂ ಸೇರಿವೆ. ... ದೂರದ ಪಂಜಾಬಿನ ಜನಸಾಮಾನ್ಯರಲ್ಲಿ ಒಂದು ... ಧಾರ್ಮಿಕ ಚಳವಳಿಯಾಗಿ ರೂಪುಗೊಂಡ ...-ಧರ್ಮಕ್ಕೆ ಸ್ಫೂರ್ತಿ ನೀಡಿದ್ದವು ಎಂದು ಕೇಳಿದ್ದೇನೆ.

...ಗೋರಾ ಎಂಬಾತ ಜಾತಿಯಿಂದ ಅಸ್ಪೃಶ್ಯ ಮತ್ತು ...ಯಿಂದ ಕುಂಬಾರನಾಗಿದ್ದ. ಚೋಕಾ ಮೇಳಾ ಒಬ್ಬ ... ತೀರಾ ವಯಸ್ಸಾಗಿದ್ದ ಅವನು ಮೇಸ್ತ್ರಿಯೊಬ್ಬನ ...ಕ್ಕೆ ಕಟ್ಟುಬಿದ್ದು ಮಂಗಳವೇಡೆ ನಗರದಲ್ಲಿ ...ಡೆಯೊಂದನ್ನು ಕಟ್ಟುತ್ತಿದ್ದಾಗ, ಗೋಡೆ ಕುಸಿದು ...ಯೇ ಸತ್ತು ಹೋದ. ಇಂದು ನಮಗೆ ಲಭ್ಯವಿರುವ ...ಯ ಪಕ್ಕ ಮತ್ತು ಇತರ ಉತ್ತಮ ಮರಾಠಿ ...ಗಳ ಕರ್ತೃವೆನ್ನಲಾದ ಪೈಠಾನಬ್ರಾಹ್ಮಣ ಏಕನಾಥನು ...ಯ ಕ್ರೂರ ಕಟ್ಟುಪಾಡುಗಳನ್ನು ಉಲ್ಲಂಘಿಸುವ ... ಮಾಡಿದ. ಅವರೆಲ್ಲರಿಗಿಂತ ಅಪ್ರತಿಮನಾದವನು 16ನೇ ...ಮಾನದ ತುಕಾರಾಮ. ಇವನು ಕುಣಬಿಯಲ್ಲಿ ...ನಿದ್ದ, ಹಾಗೂ ಅಲ್ಪಸ್ವಲ್ಪ ಧಾನ್ಯದ ವ್ಯಾಪಾರವನ್ನೂ ...ುತ್ತಿದ್ದ. ತೀವ್ರ ಕ್ಷಾಮ, ಬ್ರಾಹ್ಮಣರ ತಿರಸ್ಕಾರ, ದ್ವೇಷ ... ಸಮಕಾಲೀನ ಜನಪದ ಕವಿಗಳ ಅಸೂಯೆ

ಇವೆಲ್ಲವನ್ನೂ ಸಹಿಸಿಕೊಂಡ. ಆದರೆ ಕೊನೆಯಲ್ಲಿ ಕಿರುಕುಳ ತಾಳಲಾರದೆ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ.

ಇವರೆಲ್ಲರೂ ತಮ್ಮ ಭಾಷೆ ಹಾಗೂ ಪ್ರಾಂತ್ಯದ ಮಿತಿಯನ್ನು ಮೀರಿಕೊಂಡು ವ್ಯಾಪಕವಾದ ಚಳವಳಿಯೊಂದನ್ನು ಪ್ರತಿನಿಧಿಸುತ್ತಿದ್ದರು. ಆದರೆ ತೀವ್ರ ಯಾತನೆಯಿಂದ ಕೂಡಿದ ಅವರ ಬದುಕನ್ನು ಗಮನಿಸಿದರೆ, ಅವರು ವಿರೋಧಿ ಬಣದಲ್ಲಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಇವರ್ಯಾರೂ ಬ್ರಾಹ್ಮಣರಂತೆ ಅಧಿಕಾರದಲ್ಲಿದ್ದವರನ್ನು ಓಲೈಸುವ ಪ್ರಯತ್ನ ಮಾಡಲಿಲ್ಲ. ಸದಾ ಶ್ರೀಮಂತರನ್ನು ಓಲೈಸುತ್ತಿದ್ದ ಬ್ರಾಹ್ಮಣರು ಲಾಭ ಇದೆ ಎಂದೆನಿಸಿದರೆ ಈ ಸಂತರ ಪಂಥವನ್ನು ಬೆಳೆಸಲೂ ಹೇಸುತ್ತಿರಲಿಲ್ಲ.

ಇದು ಬರಿಯ ಮಹಾರಾಷ್ಟ್ರದ ಚಳವಳಿಕಾರರ ಕಥೆ ಮಾತ್ರವಲ್ಲ. ಕರ್ನಾಟಕದಲ್ಲಿಯೂ ಇದೇ ಬಗೆಯ ಉದಾಹರಣೆಗಳು ನಮಗಿವೆ. ವಚನ ಚಳವಳಿಯಾದಾಗಲೂ ಅದನ್ನು ಹತ್ತಿಕ್ಕುವ ಭರಾಟೆಯಲ್ಲಿ ರಕ್ತ ಕ್ರಾಂತಿಯೇ ಆಗಿ ಹೋಯಿತು.

ವಿಶ್ವರೂಪ ದರ್ಶನ

ಭಕ್ತಿ ಚಳವಳಿಯಲ್ಲಿ ಕೃಷ್ಣನ ಗುರುತು ಢಾಳಾಗಿ ಕಾಣಿಸುವುದಕ್ಕೆ ಹಲವು ಕಾರಣಗಳಿರಬಹುದು.

ಆದರೆ ಒಂದು ಮಾತು ನಿಜ. ಕೃಷ್ಣನೆಂಬುವನು ಒಬ್ಬನೇ ಐತಿಹಾಸಿಕ ವ್ಯಕ್ತಿಯಲ್ಲ. ಹಲವಾರು ಕೃಷ್ಣರು ಗ್ರಂಥಗಳಲ್ಲಿ ಸುಳಿದುಹೋಗಿದ್ದಾರೆ. ಆದರೆ ಈ ಭಗವದ್ಗೀತೆ ಎಂಬ ಮಾರುದ್ದದ (ಅಪ್ರಾಸಂಗಿಕ ಮತ್ತು ಅಪ್ರಾಯೋಗಿಕ) ಬೋಧನೆ ಮಾಡುವ ಕೃಷ್ಣನೆಂಬ ಕರಿಗೊಲ್ಲನನ್ನು ವಿಶ್ಲೇಷಿಸಲು ಹಲವಾರು ಕಾರಣಗಳಿವೆ. ಮುಂದೆ ಭಾಗವತವೆಂಬ ಒಂದು ಬಹುದೊಡ್ಡ ಕೃತಿಯು ಹಲವಾರು ಕೃಷ್ಣರ ಗುಣವಿಶೇಷಗಳನ್ನು ಒಬ್ಬನಿಗೇ ಆರೋಪಿಸಿರುವ ಸಾಧ್ಯತೆಗಳು ಢಾಳಾಗಿವೆ.

ಮಹಾಭಾರತವೂ ಇಂಥದ್ದೇ ಆದ ಒಂದು ಸಾಧ್ಯತೆಗೆ ತೆರೆದುಕೊಂಡ ಕಾವ್ಯ. ಜಯ ಎಂಬ ಸಣ್ಣ ಕೃತಿಯು ವಿಸ್ತೃತಗೊಳ್ಳುತ್ತಾ ಇಂದಿನ ಬಹುದೊಡ್ಡ ಮಹಾಭಾರತವಾಗಿದೆ. ಹಾಗೆಯೇ ಭಗವದ್ಗೀತೆಯೂ ಕೂಡ ಪ್ರಾರಂಭದಲ್ಲಿ ಸಣ್ಣದಾಗಿದ್ದು ನಂತರ ಬೌದ್ಧರ ಬೋಧನೆಗಳ ಪ್ರಭಾವಗಳನ್ನೂ ಒಳಗೊಂಡಂತೆ ಅನೇಕ ಪ್ರಭಾವಗಳಿಗೆ ಒಳಗಾಗಿ ಇಂದು ದೊಡ್ಡದಾಗಿ ನಮ್ಮ ಕಣ್ಣೆದುರು ನಿಂತಿದೆ.

ಭಕ್ತಿ ಚಳವಳಿಯ ಯಾವುದೇ ಕೃಷ್ಣಭಕ್ತ ಸಂತರಂತೆ ವೈಷ್ಣವ ಫ್ಲೈಟ್ ಹತ್ತದ ಕೃಷ್ಣ ಜರಸ್ ಎಂಬ ಬೇಟೆಗಾರನ ಬಾಣಕ್ಕೆ ಬಲಿಯಾಗಿ ಸತ್ತ. ಆತನು ಸತ್ತಿದ್ದೋ, ಗಾಂಧಾರಿಯ ಶಾಪದ ಕಾರಣವನ್ನು ಯಾರೇ ಕೊಟ್ಟರೂ, ಅವನನ್ನು ಕೊಂದವನು ಯಾರೆಂಬುದನ್ನು ಗಮನಿಸಬೇಕು. ಜರಸ್ ಕೃಷ್ಣನ ಮಲಸೋದರ. ಅವನ ತಂದೆ ವಸುದೇವನ ಮತ್ತೊಂದು ಪತ್ನಿಯ ಮಗ. ಮಹಾಭಾರತದಲ್ಲಿ ಪಾಂಡವರಾಗಲಿ, ಕೌರವರಾಗಲಿ, ಅವರ ಸಂಗಡಿಗರಾಗಲಿ ಯಾರೊಬ್ಬರೂ ಒಳ್ಳೆಯ ಸಾವನ್ನು ಪಡೆಯಲಿಲ್ಲ. ಕೆಲವರು ಬರ್ಬರವಾಗಿ ಕೊಲ್ಲಲ್ಪಟ್ಟವರಾದರೆ, ಮತ್ತೆ ಕೆಲವರು ಕಾಡಿನಲ್ಲಿ ಪಶುಗಳ ಪಾಲಿನ ಶವಗಳಾದರು, ಅರಣ್ಯದ ಕಾಡ್ಗಿಚ್ಚಿನಲ್ಲಿ ಬೆಂದು ಹೋದರು. ಮಹಾಭಾರತದ ಅಂತಿಮ ಸಂದೇಶವು ಅತ್ಯಂತ ರುದ್ರಭೀಕರ.

ಭಗವಂತ ಎಂದು ಕೃಷ್ಣನು ವರ್ಣಾಶ್ರಮಧರ್ಮದ ಪ್ರತಿಪಾದಕನಾಗಿ ವ್ಯಕ್ತವಾಗುವ ಮುನ್ನ ಅವನು ಆರ್ಯರ ವಿರೋಧಿಯೂ ಮತ್ತು ವೈದಿಕ ಧರ್ಮದ ವಿರುದ್ಧದ ತೀವ್ರ ಬಂಡಾಯಗಾರನಾಗಿಯೇ ಕಾಣುತ್ತಾನೆ. ಇಂದ್ರನನ್ನು, ಅವನ ಯಜ್ಞಯಾಗಾದಿಗಳನ್ನು ತಿರಸ್ಕರಿಸುತ್ತಾ, ತಮ್ಮ ಗೋಪಾಲನೆಗೆ ನೆರವಾಗುವಂತಹ ಗೋವರ್ಧನಗಿರಿಯ ಆರಾಧನೆಗೆ ಮುಂದಾಗಿ, ಅದರ ಪರಿಣಾಮವಾಗಿ ಇಂದ್ರನನ್ನು ಎದುರಿಸಿ ಹೋರಾಡಿದ ಕೃಷ್ಣ ಆರ್ಯರ ದಾಳಿಗೆ ತನ್ನವರು ಸಿಕ್ಕದಂತೆ ಗೋವರ್ಧನಗಿರಿಯ ಗುಹೆಗಳಲ್ಲಿ ತನ್ನವರನ್ನು ಅಡಗಿಸಿಟ್ಟು ಹೋರಾಡಿದ್ದವನು ಅವನು. ಆದರೆ ಮುಂದೆ ಇದ್ದಕ್ಕಿದ್ದಂತೆ,

"ನೋಡಾದಿತ್ಯರ ವಸುಗಳ ರುದ್ರರ ಅಶ್ವಿನಿಗಳ ಮೇಣ್ ಮರುತರನು

ಹಿಂದೆಂದೂ ಕಂಡರಿಯದ ಬಲು ಆಶ್ಚರ್ಯಂಗಳ, ಭಾರತ, ನೋಡು" ಎನ್ನುತ್ತಾ ಮುಂದೆ,

"ಆದಿತ್ಯರೊಳಗೆ ನಾನೇ ವಿಷ್ಣುವು ಅಂಶುಮಂತ ರವಿ ಜ್ಯೋತಿಗಳೊಳ್

ಮರುತರಲ್ಲಿ ಮರೀಚಿಯು ನಾನು ನಕ್ಷತ್ರಗಳೊಳು ನಾನೆ ಶಶಿ

ರುದ್ರರಲ್ಲಿ ನಾ ಶಂಕರನಾಗಿಹೆ ಯಕ್ಷರಕ್ಷರೊಳು ವಿತ್ತೇಶ

ವಸುಗಳಲ್ಲಿ ನಾನಗ್ನಿಯಾಗಿಹೆನು ಕೋಡುಮಲೆಗಳೊಳು ನಾ ಮೇರು ಎಂದೂ ಕೃಷ್ಣ ಹೇಳುತ್ತಾನೆ.

ಎಲಾ ವಿಭಾಗಗಳಲ್ಲೂ ತಾನೇ ಶ್ರೇಷ್ಠವೆಂದು ಹೇಳಿಕೊಳ್ಳುತ್ತಾ, "ವಂಚಕರೊಳು ನಾ ಜೂಜಾಗಿರುವೆನು" ಎಂದೂ ಹೇಳಿಕೊಳ್ಳುತ್ತಾನೆ.

ಇನ್ನೂ ತಾತ್ವಿಕವಾಗಿ "ಸರ್ವಹರ ಮೃತ್ಯುವಾಗಿಹೆನು, ಹುಟ್ಟಲಿರುವವರ ಹುಟ್ಟುವಿಕೆ" ಕೂಡ ನಾನೇ ಎಂದು ಹೇಳುತ್ತಾ ಹೋಗುವ ಕೃಷ್ಣನ ವಿಶ್ವರೂಪ ದರ್ಶನದ ಪರಿಕಲ್ಪನೆ ಒಂದು ಅತ್ಯದ್ಭುತವಾದ ಹೀರೋ-ವರ್ಷಿಪ್‌ನ ಒಂದು ಅತ್ಯುತ್ಪ್ರೇಕ್ಷಿತ ರೂಪಕ.

ಭಗವದ್ಗೀತೆಯ ಅತಿರೇಕಗಳ ಬಗ್ಗೆ ನನ್ನ ಭಿನ್ನಾಭಿಪ್ರಾಯಗಳೇನೇ ಇದ್ದರೂ, ಪು.ತಿ. ನರಸಿಂಹಚಾರ್ ಅವರ ಭಗವದ್ಗೀತೆಯ ಕನ್ನಡಾನುವಾದ ಸುಂದರವಾದ ಸಾಹಿತ್ಯ. ಇಂತಹ ವಿಶ್ವರೂಪದ ದರ್ಶನವನ್ನು ಯಾವುದೇ ಶ್ರೀಗಳ ಅಥವಾ ದೇವಮಾನವರ ಅನುಯಾಯಿಗಳು ತಾವೇ ಕಂಡುಬಿಡುತ್ತಾರೆ ಬಿಡಿ, ಅವರು ತೋರಿಸಲಿ ಬಿಡಲಿ.

ಆರ್ಯರ ಜೊತೆ ಹೋರಾಡಿದ ಆ ಕೃಷ್ಣನು ಯಾರು. ನಂತರ ಆರ್ಯರ ವರ್ಣಾಶ್ರಮ ಧರ್ಮವನ್ನು ಬೆಂಬಲಿಸುತ್ತಾ ಅವರ ಪರವಾಗಿ ಅದೆಷ್ಟೋ ರಾಜಿ ಸಂಧಾನಗಳನ್ನು ಮಾಡಿಕೊಂಡು ಭಗವದ್ಗೀತೆಯನ್ನು ಬೋಧಿಸುವಂತಹ ಕೃಷ್ಣನು ಯಾರು? ವೃಂದಾವನದಲ್ಲಿ ವಿಹರಿಸಿಕೊಂಡು ಓಡಾಡುತ್ತಿದ್ದ ಕೃಷ್ಣ ಯಾರು? ಎಲ್ಲರೂ ಒಂದೆಯೇ? ಅಥವಾ ಬೇರೆ ಬೇರೆ ಕೃಷ್ಣಗಳಿದ್ದು ಅವರೆಲ್ಲರಲ್ಲೂ ಒಂದೇ ಕೃಷ್ಣನ ದಾರಕ್ಕೆ ಪೋಣಿಸಿಬಿಟ್ಟರೆ? ಅಥವಾ ಒಬ್ಬ ಕೃಷ್ಣನೇ ಕಾಲ ಬದಲಾದಂತೆ, ರಾಜಕೀಯ ಸ್ಥಿತ್ಯಂತರಗಳು ಉಂಟಾದಂತೆ, ತನ್ನ ನಿಲುವು ಧೋರಣೆಗಳನ್ನೂ ಬದಲಿಸಿಕೊಂಡನೇ? ಅದನ್ನು ನಿರ್ಧರಿಸುವುದು ಕಷ್ಟ.

ಏನೇ ಆದರೂ, ಟೀಕಿಸಲೂ, ಮೆಚ್ಚಲೂ ಆತ ನಮಗೆ ಸಾಕಷ್ಟು ಸಾಮಗ್ರಿಗಳನ್ನು ಒದಗಿಸುತ್ತಾನೆ. ಆಗಿನ ಕಾಲದ ಬುಡಕಟ್ಟುಗಳು ತಮ್ಮತಮ್ಮಲ್ಲಿ ಹೊಡೆದಾಡಿಕೊಂಡ ಅಂಶಗಳನ್ನು, ರಾಜಿ ಪಂಚಾಯಿತಿ ಮಾಡಿಕೊಂಡ ಸುಳುಹುಗಳನ್ನು, ಸಮಾಜದ ಪ್ರಾಧಾನ್ಯತೆಗಳು ಬದಲಾದ ವಿಷಯಗಳನ್ನು, ಆ ಸಮಾಜದ ಒಲವು ಮತ್ತು ನಿಲುವುಗಳನ್ನು ಹೇಳಲು ಯತ್ನಿಸುತ್ತಾನೆ. ಇಷ್ಟೆಲ್ಲದರ ನಡುವೆ ಪ್ರೀತಿ, ಮೋಹ, ಕಾಮ, ಸರಸ ಮತ್ತು ವಿರಸಗಳು, ಭಕ್ತಿ ಮತ್ತು ಶಕ್ತಿ ಪ್ರದರ್ಶನಗಳೂ ನಡೆಯುತ್ತವೆ. ಅವನ ಮೋಸ, ಕುಹಕ, ಕಾಮಗಳೆಲ್ಲವೂ ಅಧ್ಯಾತ್ಮದ ವಿಶ್ಲೇಷಣೆಯ ಮೂಸೆಯಲ್ಲಿ ಹಾಕಿ ಅವನನ್ನು ಲೀಲಾಪುರುಷನೆಂದು ಚಿತ್ರಿಸಲಾಗುತ್ತದೆ.

ಆಕಾಶವಾಣಿ

ಕೃಷ್ಣನ ಮತ್ತು ಕ್ರಿಸ್ತನ ಜನನದ ಕಥೆ ಕೊಂಚ ಮಟ್ಟಿಗೆ ಹೋಲುತ್ತದೆ.

ಕೃಷ್ಣನ ತಾಯಿ ದೇವಕಿಯು ಕಂಸನ ಸೋದರಿಯಾಗಿದ್ದು, ಅವಳ ಮದುವೆಯ ದಿನ ತಾನೇ ತನ್ನ ಪ್ರೀತಿಯ ತಂಗಿಯನ್ನು ತನ್ನ ರಥದಲ್ಲಿ ಕೊಂಡೊಯ್ಯುವಾಗ ಆಕಾಶವಾಣಿಯೊಂದು ಮೊಳಗಿತು. ತನ್ನ ಸೋದರಿಯ ಮಗನಿಂದಲೇ ತನ್ನ ಸಾವು ಎಂದು.

ಇದು ಆಕಾಶವಾಣಿ ಎಂಬುದಾಗಿ ಪುರಾಣಗಳಲ್ಲಿ ತಿಳಿಸುತ್ತಾರೆ. ಮುಂದಾಗುವುದನ್ನು ತಿಳಿಸುವ ಅಥವಾ ಯಾರಿಗೂ ತಿಳಿಯದ ದೇವರ ವಾಕ್ಯಗಳನ್ನು ತಿಳಿಸುವ ಆಕಾಶವಾಣಿಯ ಬಗ್ಗೆ ವಿಶ್ವದ ಅನೇಕ ಪುರಾಣಗಳಲ್ಲಿ, ಧಾರ್ಮಿಕ ಕಥೆಗಳಲ್ಲಿ ಕೇಳಿದ್ದೇವೆ. ಇಲ್ಲೊಂದು ರೋಚಕವಾದ ಅಂಶವಿದೆ. ಯಾರದೀ ಆಕಾಶವಾಣಿ. ಯಾರು ಎಲ್ಲಿಂದಲೋ ಅಡಗಿಕೊಂಡು ಮಾತಾಡುವುದು?

ಬೈಬಲ್ಲಿನ ಹಳೆಯ ಒಡಂಬಡಿಕೆಯಲ್ಲಿ ನೇರವಾಗಿ ಹೇಳಿಬಿಡುತ್ತಾರೆ, ದೇವರು ಎಂದು. ನೀನು ಹೀಗೆ ಮಾಡು, ಹಾಗೆ ಮಾಡು ಎಂದು ನಿರ್ದೇಶನಗಳನ್ನು ಕೊಡುವುದು, ಎಚ್ಚರಿಕೆಗಳನ್ನು ನೀಡುವುದು ಇದರಲ್ಲಿ ಸೇರಿದರೆ. ಕುರಾನಿನಲ್ಲಿ ದೇವರ ವಾಕ್ಯವು ಪ್ರವಾದಿ ಮಹಮದರಿಗೆ ಅವತೀರ್ಣವಾಯಿತು ಎನ್ನುತ್ತಾರೆ. ಮೋಸೆಸ್‌ಗೆ ಹತ್ತು ಆಜ್ಞೆಗಳು ಒದಗಿದ್ದು ಎಲ್ಲಿಂದ? ಇನ್ನು ಹಿಂದೂ ಪುರಾಣಗಳಲ್ಲಿ ಯಾವುದನ್ನು ಜೋರಾಗಿ ಹೇಳಬಾರದೋ ಅಂತಹ ರಹಸ್ಯಗಳನ್ನೆಲ್ಲಾ ಆಕಾಶದಲ್ಲಿ ಗುಡುಗಿನಂತೆ ಬಡಬಡಿಸಿ, ದೇವಕಿಯಂತಹ ಸಾತ್ವಿಕ ಜೀವಿಗಳನ್ನು ತೊಂದರೆಗೆ ದೂಡಿ ಮುಂದೆ ನಡೆಯುವುದನ್ನು ನೋಡುವುದು ಯಾವ ದೇವರ ಲೀಲೆಯೋ.

ಇರಲಿ, ಅವನ್ನೆಲ್ಲಾ ಬದಿಗಿಟ್ಟು ಆಕಾಶವಾಣಿ ಎಂಬ ಪರಿಕಲ್ಪನೆಯನ್ನು ಗಮನಿಸಿದರೆ, ಅದು ಯಾರೋ ಒಬ್ಬರ ಒಳಗಿನ ದನಿಯೇ ಆಗಿರುತ್ತದೆ. ಅಂತರಾಳದ ಹೊಳಹು ಅಥವಾ ಆಲೋಚನೆಯಾಗಿರುತ್ತದೆ. ಆಕಾಶವಾಣಿಯೆಂದರೆ ಅಥವಾ ಅಶರೀರವಾಣಿಯೆಂದರೆ ಆಕಾಶದಿಂದೆಲ್ಲೋ, ಮೋಡಗಳಾಚೆ ಗುಡುಗು ಬಂದಂತೆ ಬರುವುದೋ ಖಂಡಿತ ಅಲ್ಲ.

ತನ್ನ ತಂಗಿ ದೇವಕಿಗೆ ಮದುವೆ ಮಾಡಿದಾಗ, ಆಗ ಇದ್ದ ವ್ಯವಸ್ಥೆಯಂತೆ ಆಸ್ತಿ ಅಧಿಕಾರವು ತನ್ನ ತಂಗಿ ಮಕ್ಕಳಿಗೆ ಹೋಗಿಬಿಡುತ್ತದೆ ಎಂಬ ಆಲೋಚನೆ ಅವನಿಗೆ ಹೊಳೆಯಿತು. ಅದನ್ನು ಆಗಗೊಡದೇ ಆಸ್ತಿಯನ್ನು ತನ್ನ ಸುಪರ್ದಿಯಲ್ಲೇ ಇಟ್ಟುಕೊಳ್ಳಬೇಕೆಂಬ ದುರಾಸೆ ಉಂಟಾಯಿತು. ಆದರೆ ಇಂತಹ ಅಂತರ್ವಾಣಿಯನ್ನು ಬೈಬಲ್ಲಿನಲ್ಲಿ ಆಕಾಶವಾಣಿಯೆಂದನ್ನದೇ ಸೈತಾನನ ಪ್ರೇರೇಪಣೆ ಎನ್ನುವರು.

ಯೇಸು ಸ್ನಾನಿಕ ಯೊವಾನ್ನನಿಂದ ದೀಕ್ಷಾಸ್ನಾನ ಪಡೆದ ಮೇಲೆ ಆಕಾಶದಿಂದ ದೇವರಾತ್ಮ ಪಾರಿವಾಳದ ರೂಪದಲ್ಲಿ ತಮ್ಮ ಮೇಲೆ ಇಳಿದುಬಂದು ನೆಲಸಿತು ಎಂದು ರೂಪಕದಲ್ಲಿ ಕಟ್ಟಿಕೊಡುವುದಲ್ಲದೇ, "ಇವನೇ ನನ್ನ ಪುತ್ರನು; ನನಗೆ ಪರಮಪ್ರಿಯನು, ನನ್ನ ಅಪಾರ ಮೆಚ್ಚುಗೆಗೆ ಪಾತ್ರನು" ಎಂದು ಆಕಾಶದಿಂದ ದೈವವಾಣಿ ಕೇಳಿಸಿತು ಎಂಬ ರೂಪಕದಲ್ಲಿ ಯೇಸುವಿನ ಅಂತರಂಗದಲ್ಲಿ ಉಂಟಾದ ಸಕಾರಾತ್ಮಕ ಭಾವನೆಯನ್ನು ಕುರಿತು ಹೇಳುವರು. ಅದೇ ಯೇಸುವು ನಲವತ್ತು ದಿನಗಳ ಉಪವಾಸಾದಿ ಸಾಧನೆಗಳನ್ನು ಮಾಡಿದ ಮೇಲೆ ಪಿಶಾಚಿಯು ಬಂದು "ಕಲ್ಲುಗಳನ್ನು ರೊಟ್ಟಿಗಳನ್ನಾಗಿಸುವ ಪವಾಡ ಮಾಡೆಂದು, ಮೇಲಿಂದ ಧುಮುಕಿ ದೈವಶಕ್ತಿಯನ್ನು ಪರೀಕ್ಷಿಸೆಂದೂ, ಪ್ರಾಪಂಚಿಕ ವೈಭವಗಳನ್ನು ಪಡೆಯಬಹುದೆಂದು" ಪ್ರಲೋಭನೆಗಳನ್ನು ಒಡ್ಡಿದಾಗ ಯೇಸುವು ನಿರಾಕರಿಸುವುದಾಗಿ ಹೇಳುತ್ತಾರೆ. ನಕಾರಾತ್ಮಕವಾದ ಆಲೋಚನೆಗಳು ಬಂದಾಗ ಪಿಶಾಚಿಯ ಅಥವಾ ಸೈತಾನನ ಪ್ರಲೋಭನೆಯೆಂದು ರೂಪಕದಲ್ಲಿ ಹೇಳಲಾಗುತ್ತದೆ. ಅದೇ ರೀತಿ ಯೇಸು ಆ ಆಲೋಚನೆಗಳನ್ನು ತಾವೇ ತೊಡೆದುಹಾಕಿದಾಗ, ದೇವದೂತರು ಬಂದು ಉಪಚರಿಸಿದರು ಎಂಬ ರೂಪಕವು ಸಕಾರಾತ್ಮಕವಾಗಿ ಬದಲಾಗುತ್ತದೆ.

ಅಂತೆಯೇ ಪ್ರವಾದಿ ಮಹಮದರಿಗೆ ದೇವರ ವಾಕ್ಯವು ಅವತೀರ್ಣವಾಯಿತೆಂದರೆ, ಅದು ಅದಿನ್ಯಾವುದೂ ಎಲ್ಲಿಂದ? ಅವರ ಒಳಗಿನ ಅಂತಃಸ್ಫುರಣದಿಂದಲ್ಲವೇ!! ■

'ಮಾತಿನಲ್ಲೆ ಮನೆ ಕಟ್ಟುವವರು'!



ಕಳೆದ ವರ್ಷದ ಆಗಸ್ಟ್ 15ರಂದು ದಿಲ್ಲಿಯ ಕೆಂಪುಕೋಟೆಯಿಂದ ಭಾಷಣ ಮಾಡಲು ಹಾತೊರೆಯುತ್ತಿದ್ದ ಮುಖ್ಯಮಂತ್ರಿಯೊಬ್ಬನನ್ನು ನೆನಪಿಸಿಕೊಳ್ಳಿ. ಅಂದು ಮನಮೋಹನ್ ಸಿಂಗ್‌ಗೆ ಪ್ರತಿಯಾಗಿ ಆತ ಮಾಡಿದ ಭಾಷಣಕ್ಕೆ ಸಿಕ್ಕ ಪ್ರಚಾರ ಹಾಗೂ ಪ್ರಾಮುಖ್ಯತೆಯ ಪ್ರಮಾಣವನ್ನು ಕಂಡು ಜನ ನಿಬ್ಬೆರಗಾಗಿದ್ದರು. ಆದರೆ ಅದೆಲ್ಲವೂ `ಅಪ್ತ ಕಾರ್ಪೊರೇಟ್ ಕುಳಗಳ ಹಿಡಿತದಲ್ಲಿದ್ದ ಸಮೂಹ ಮಾಧ್ಯಮಗಳ ಕೃಪೆಯೆಂದು ನಂತರ ಬಯಲಾಯಿತು. 2014ರ ಚುನಾವಣೆಗಳು ಅದು ಹೇಗೊ ಆತನ ಕನಸನ್ನು ನನಸಾಗಿಸಿ ಕೆಂಪುಕೋಟೆಯಲ್ಲಿ ರಾರಾಜಿಸುವ ಅವಕಾಶವನ್ನು ತಂದಿತ್ತಿವೆ. ಈ ಬಾರಿಯ ಸ್ವಾತಂತ್ರ್ಯ ದಿವಸದ ಸಂದರ್ಭದಲ್ಲಿ ಈ ಭಾಷಣ ಕಂ ಘೋಷಣ ಕಲಾನಿಪುಣ ಎಂದಿನಂತೆ ಅರಳು ಹುರಿದ ಹಾಗೆ ಮಾತಾಡಿದ್ದಾನೆ. ನಿಜ ಹೇಳಬೇಕೆಂದರೆ ನಡೆನುಡಿಗಳಲ್ಲಿ ಅಜಗಜಾಂತರ ವ್ಯತ್ಯಾಸಗಳಿರುವ ಇಂತಹ ಘೋಷಣೆಗಳನ್ನು ಪ್ರಧಾನಿಗಳಾದವರು ಮಾಡುತ್ತಲೇ ಬಂದಿದ್ದಾರೆ. ಮುಂದಿನ ವರ್ಷದೊಳಗಾಗಿ "ಸ್ವಚ್ಛ ಭಾರತ"ವನ್ನು ನಿರ್ಮಾಣ ಮಾಡಲಾಗುವುದೆಂಬ ಈ ಬಾರಿಯ ಘೋಷಣೆಯಲ್ಲಿ ಕೂಡ ವಿಶೇಷವೇನೂ ಇರಲಿಲ್ಲ.


ಏಕೆಂದರೆ ಗ್ರಾಮೀಣ ಭಾರತದ ಶಾಲೆಗಳಲ್ಲಿ ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯಗಳನ್ನು ಕಟ್ಟಿಸುವ ಮಹತ್ವಾಕಾಂಕ್ಷಿ ಕಾರ್ಯಕ್ರಮವಾದ 'ನಿರ್ಮಲ್ ಭಾರತ್ ಅಭಿಯಾನ್' (ಎನ್‌ಬಿಎ) ಈಗಾಗಲೆ ಜಾರಿಯಲ್ಲಿದೆ. ಆದರೆ ಇದರ ಅನುಷ್ಠಾನ ಎಷ್ಟಾಗಿದೆಯೆಂದು ನೋಡಹೊರಟರೆ ನಮಗೆದುರಾಗುವುದು ಅತ್ಯಂತ ನಿರಾಶಾದಾಯಕ ಚಿತ್ರ. ಕಟು ವಾಸ್ತವವೇನೆಂದರೆ ಗುಜರಾತ್, ಜಮ್ಮುಕಾಶ್ಮೀರ, ಹಿಮಾಚಲ ಪ್ರದೇಶ, ತಮಿಳ್ನಾಡು, ಜಾರ್ಖಂಡ, ಒರಿಸ್ಸಾ ಮೊದಲಾದ ರಾಜ್ಯಗಳಲ್ಲೆಲ್ಲ ಈ ಕಾರ್ಯಕ್ರಮ ಆಮೆಗತಿಯಲ್ಲಿ ತೆವಳುತ್ತಾ ಸಾಗಿದೆ. ಇವತ್ತು ಸ್ವರ್ಗವನ್ನೆ ಧರೆಗಿಳಿಸುವಂಥ ಭರವಸೆಗಳನ್ನು ನೀಡುತ್ತಿರುವ ಮೋದಿ 2014ರ ಮೇ ತಿಂಗಳ ತನಕ ಇದೇ ಗುಜರಾತಿನ ಮುಖ್ಯಮಂತ್ರಿಯಾಗಿದ್ದವನಲ್ಲವೇ? ಅಲ್ಲಿನ ಸುಮಾರು 11,000 ಶಾಲೆಗಳಲ್ಲಿ ಹೆಣ್ಮಕ್ಕಳಿಗೆ ಶೌಚಾಲಯದ ವ್ಯವಸ್ಥೆಯೇ ಇಲ್ಲ ಎನ್ನುತ್ತವೆ ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದುಕೊಂಡ ದಾಖಲೆಗಳು!

2013-14ರ ಸಾಲಿನಲ್ಲಿ 'ನಿರ್ಮಲ್ ಭಾರತ್ ಅಭಿಯಾನ'ದಡಿ ಗುಜರಾತ್‌ನ ಸಾಧನೆ ರಾಷ್ಟ್ರೀಯ ಸರಾಸರಿಗಿಂತ ತುಂಬಾ ಕೆಳಮಟ್ಟದಲ್ಲಿದೆ! ಹಾಗಂತ ಸರ್ಕಾರದ ಶುದ್ಧ ನೀರು ಮತ್ತು ನೈರ್ಮಲ್ಯ ಸಚಿವಾಲಯದ ದಾಖಲೆಗಳೇ ಹೇಳುತ್ತಿವೆ. ಎನ್‌ಬಿಎ ಯೋಜನೆಯ ಪ್ರಕಾರ 2013-14ರ ಸಾಲಿನಲ್ಲಿ ಗುಜರಾತಿನ ಹಳ್ಳಿಗಳಲ್ಲಿ 4,587 ಶೌಚಾಲಯಗಳನ್ನು ಕಟ್ಟಿಸಬೇಕಾಗಿತ್ತು, ಆದರೆ ಬರೀ 1,114 ಶೌಚಾಲಯಗಳನ್ನಷ್ಟೇ ಕಟ್ಟಿಸಲಾಗಿದೆ. ಶೇಕಡಾವಾರು ಅಂಕಿಅಂಶಗಳನ್ನು ಪರಿಗಣಿಸಿದಾಗ ರಾಷ್ಟ್ರೀಯ ಸರಾಸರಿ 48.44 ಪ್ರತಿಶತ ಇದ್ದರೆ ಗುಜರಾತ್‌ನ ಸಾಧನೆ ಕೇವಲ 24.29ರಷ್ಟಿದೆ!

2013-14ರ ಸಾಲಿನಲ್ಲಿ ಗುಜರಾತ್‌ನ 4,732 ಅಂಗನವಾಡಿಗಳಲ್ಲಿ ಶೌಚಾಲಯಗಳನ್ನು ನಿರ್ಮಿಸಬೇಕಾಗಿತ್ತು, ಆದರೆ ನಿರ್ಮಿಸಿರುವುದು ಬರೀ 490 ಶೌಚಾಲಯಗಳನ್ನು! ಈ ದಿಸೆಯಲ್ಲಿ ರಾಷ್ಟ್ರೀಯ ಸರಾಸರಿ ಶೇಕಡಾ 27.87 ಇದ್ದರೆ ಗುಜರಾತ್‌ನ ಸಾಧನೆ ಬರೀ ಶೇಕಡಾ 10.3

ಪ್ರಸಕ್ತ 2014-15ರ ಸಾಲಿನಲ್ಲಿ ಗುಜರಾತಿನಲ್ಲಿ ಒ 7,712 ಶೌಚಾಲಯಗಳನ್ನು ಕಟ್ಟಿಸುವ ಗುರಿಯ ಇಟ್ಟುಕೊಳ್ಳಲಾಗಿದೆ. ಆದರೆ ಅಧಿಕೃತ ಅಂಕಿಅಂಶಗ ಹೇಳುವಂತೆ ಇಲ್ಲಿಯತನಕ ಪರಿಸ್ಥಿತಿಯಲ್ಲಿ ಏನೇನ ಬದಲಾವಣೆಯಾಗಿಲ್ಲ, 2014ರ ಜುಲೈ ತನಕ ಒಂ ಒಂದು ಪಾಯಿಖಾನೆಯಾದರೂ ತಲೆಯೆತ್ತಿಲ್ಲ!!

(ಆಧಾರ: ಡೆಕ್ಕನ್ ಹೆರಾಲ್ಡ್, ಸೆಪ್ಟಂಬರ್



ಮೇಡಮ್ ಡಾಟಿ ನಿರ್ದೇಶನದ 'ಪೋಸೆ ತಂದ ದೌರ್ಭಾಗ್ಯ'

ಕಾರ್ತಿಕ್ ಮೈತ್ರಿಯಾ ಪ್ರಕರಣದ ಕುರಿತು ರಾ. ಸೋಮನಾಥ್ ಅವರು ಬರೆದಿರುವ ಲೇಖನ ಅನೇಕರ ಕಣ್ಣು ತೆರೆಸುವಂತಿದೆ. ಅಧಿಕಾರ, ಹಣ ಹಾಗು ತೋಳ್ಬಲಗಳ ಮೂಲಕ ಅತ್ಯಂತ ನಾಜೂಕಿನಿಂದ ವ್ಯವಸ್ಥಿತವಾಗಿ ಹಳ್ಳಹಿಡಿಸಲು ನೋಡಲಾದ ಈ ಪ್ರಕರಣದ ನಿಜ ಹೂರಣ ತಮ್ಮ ಪತ್ರಿಕೆಯ ಮೂಲಕ ಇದೀಗ ಬಟಾಬಯಲಾಗಿದೆ. ಸೋಮನಾಥರ ಲೇಖನದ ಶೀರ್ಷಿಕೆಯೇ ಎಲ್ಲವನ್ನು ಹೇಳುವಂತಿದೆ. ಗುರು ರಾಮಭಟ್, ಅನಂತಮೂರ್ತಿ, ಸಿದ್ದರಾಮಯ್ಯ ಮೊದಲಾದವರ ಬಗ್ಗೆ ಅನವಶ್ಯಕವಾಗಿ ಕೆಟ್ಟದಾಗಿ ಮಾತಾಡುತ್ತಿದ್ದ ಹರಕಲು ಬಾಯಿಯ ಗೋಮುಖ(ವಾಡ)ದ ಅಪ್ಪನಿಗೆ ತಕ್ಕ ಮಗನೀತ.

ಯಾವುದೋ ಗೂಢ ಕಾರಣಕ್ಕೆ ಎಲ್ಲಾ ಮೀಡಿಯಾಗಳು ಮೈತ್ರಿಯಾಳ ವಿರುದ್ಧ ತಿರುಗಿ ಬಿದ್ದು ಆಕೆಯನ್ನು ಇನ್ನಿಲ್ಲದಂತೆ ಗೋಳಾಡಿಸುತ್ತಿವೆ. ಆದರೆ ಸಾಚಾನಂತೆ ಪೋಸು ಕೊಟ್ಟ ನಂತರ ಕಳ್ಳನಂತೆ ಅಡಗಿ ಕೂತ ಕಾರ್ತಿಕ್‌ನನ್ನು ಯಾರೂ ಪ್ರಶ್ನಿಸಲಿಲ್ಲ, ಕಾರ್ತಿಕ್ ಗೌಡನ ಹೆಣ್ಣುಬಾಕತನ ಹಾಗು ರಾತ್ರಿಯ ಮೋಜು ಇತ್ಯಾದಿಗಳ ಬಿಂದಾಸ್ ಬದುಕನ್ನು ಜನರೆದುರು ತೆರೆದಿಟ್ಟದ್ದು ನಿಮ್ಮ ಪತ್ರಿಕೆ ಮಾತ್ರ.

ಕಾರ್ತಿಕ್‌ನ ಅಣ್ಣ 2003ರ ಅಪಘಾತವೊಂದರಲ್ಲಿ ಸತ್ತಿದ್ದು ಹೌದಾದರೂ ಲಾರಿಗೆ ಗುದ್ದಿದ್ದು ಕೌಶಿಕ್ ಅಲ್ಲ, ಬದಲಿಗೆ ಇದೇ ಏನೂ ಅರಿಯದ ಮುಗ್ಧಾತಿ ಮುಗ್ಧ ಕಂದ ಕಾರ್ತಿಕನೇ. ಈತ ಉಡುಪಿ ಬಳಿಯ ಪ್ರಸಿದ್ಧ ನಿಟ್ಟೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ ನಡೆದಿದ್ದ ಘಟನೆಯದು. ತನ್ನ "ಸಮಾನ ಮನಸ್ಕ" ಗೆಳೆಯರೊಂದಿಗೆ 15-9-2008ರ ರಾತ್ರಿಯ ಡಿಂಗ್‌ಡಾಂಗ್ ಪಾರ್ಟಿ ಮುಗಿಸಿಕೊಂಡು ಚಿತ್ತಾಗಿ ಬರುವಾಗ ಮೂಲ್ಕಿಯ ಬಳಿ ಮೂಳೂರು ಎಂಬಲ್ಲಿ ನಿಂತಿದ್ದ ಲಾರಿಗೆ ತನ್ನ ಕಾರನ್ನು ಗುದ್ದಿ ಕೋಮಾಕ್ಕೆ ಜಾರಿದವನು ಇದೇ ಕಾರ್ತಿಕ್. ಜನ ಓಡಾಟವಿರದ ರಾತ್ರಿ ಮೂರು ಗಂಟೆಗೆ ಸಂಭವಿಸಿದ ಈ ಅಪಘಾತಕ್ಕೆ, ಟ್ರಾಫಿಕ್ ಸಮಸ್ಯೆಯಂತೂ ಖಂಡಿತಾ ಕಾರಣವಾಗಿರಲಿಲ್ಲ, ಬದಲಾಗಿ ಕಾರಣವಾಗಿದ್ದು ಮಾದಕ ವಸ್ತುವಿನ ಜೊಂಪು. ಈ ಜೊಂಪು ಸಂತೋಷ್ ಕಾಂಚನ್ ಎಂಬ ಒಬ್ಬ ಗೆಳೆಯನ ಸಾವಿಗೂ (ಸ್ಪಾಟ್ ಡೆತ್) ಅವತ್ತು ಕಾರಣವಾಗಿತ್ತು, ಅಂತೂ ಸಾವುಬದುಕಿನ ಹೋರಾಟದಲ್ಲಿ ಭಾರೀ ಕಷ್ಟದಿಂದಲೇ ಬದುಕಿ ಬಂದ ಕಾರ್ತಿಕ್ ಗುಣಮುಖನಾದ ಮೇಲೆ ಆಶೀರ್ವಾದ ಪಡೆಯಲು ಮೊದಲು ಭೇಟಿಯಾದದ್ದು ಇದೇ ರಾಘವೇಶ್ವರ ಸ್ವಾಮೀಜಿಯನ್ನು.

ತಮಾಷೆಯೆಂದರೆ, ಇದೀಗ ಇವರಿಬ್ಬರೂ ಹೆಣ್ಣೊಬ್ಬಳಿಗೆ ಸಂಬಂಧಿಸಿದ ಲೈಂಗಿಕ ವಂಚನೆಯ ಕಾರಣಕ್ಕೆ ಒಟ್ಟೊಟ್ಟಿಗೇ ಸುದ್ದಿಯಲ್ಲಿದ್ದಾರೆ. ವರ್ಷವಿಡೀ ಶುಭವಾಗಿರಲು ಯುಗಾದಿಯ ಮೊದಲ ದಿನ ಶುಭ ವಸ್ತುಗಳಿಂದ ಆರಂಭಗೊಳ್ಳಬೇಕೆಂದು ಎದ್ದ ಕೂಡಲೇ ಫಲವಸ್ತುಗಳ ದರ್ಶನದ ಪರಿಪಾಠ ಕೆಲವೆಡೆ ಚಾಲ್ತಿಯಲ್ಲಿದೆ. ಯಾರೂ ನಂಬಲಾಗದಂತೆ ಕಷ್ಟದಲ್ಲಿ ಬದುಕಿ ಹೊಸ ಹುಟ್ಟು ಪಡೆದ ಕಾರ್ತಿಕ್ ಹೋಗಿ ಹೋಗಿ ಮೊಟ್ಟ ಮೊದಲಿಗೆ ಹೋರಿಯೊಂದರ ದರ್ಶನ ಮಾಡಿ ಆಶೀರ್ವಾದ ಪಡೆದರೆ ಅದರ ಫಲ ಹೀಗಾಗದೇ ಬೇರಿನ್ನೇನಾಗಲು ಸಾಧ್ಯ? 'ಪ್ರೋರಿಯ ಹಿಂದೆ ಹೋರಿ' ಲೇಖನಕ್ಕೆ ಇದೇ ಹೋರಿಯ ಬಳಗ ಪತ್ರಿಕೆ ವಿರುದ್ಧ ಕೇಸ್ ಹಾಕಿತ್ತು, ಆ ಹೋರಿಯ ಬೆಂಗಾವಲು ಪಡೆ ಈಗೇನೆನ್ನುತ್ತಿದೆಯೋ?

ಮೈತ್ರಿಯಾ ಮಾಧ್ಯಮದೆದುರು ಬರಲು ಹಾಗು ದೂರು ಕೊಡಲು ಗೌಡ ಕುಟುಂಬವೇ ನೇರ ಹೊಣೆ. ಕಾರ್ತಿಕ್ ಅಥವಾ ಮೈತ್ರಿಯಾ - ಯಾರೇ ಆಗಿರಲಿ ತಪ್ಪು ಮಾಡಿದವರಿಗೆ ತಕ್ಕ ಶಿಕ್ಷೆಯಾಗಲೇ ಬೇಕು.

- ಅವಿನಾಶ್, ಮಂಗಳೂರು



ಹೊಗಳಿಕೆ ತೆಗಳಿಕೆ

ಶ್ರೀರಾಮನ ಹೆಸರಲ್ಲಿ ರೇಪ್ ಮಾಡಬಾರದಿತ್ತು

ಮಹಿಳೆಯರ ಮೇಲೆ ಅತ್ಯಾಚಾರ ಮಾಡಲು ದೇವರೇ ಪ್ರೇರಣೆ ಕೊಡುತ್ತಾನೆಯೇ? ಧರ್ಮದ ಉದ್ಧಾರಕ್ಕೆ ದೇವರು ಸ್ವಾಮಿಗಳಿಂದ ಮಹಿಳಾ ಭಕ್ತರ ರೇಪ್ ಮಾಡಿಸುತ್ತಾನೆಯೇ? ಸ್ವಾಮಿಗಳ ಮೈಯಲ್ಲಿರುವ ದೈವಾಂಶವು ಅತ್ಯಾಚಾರಕ್ಕೊಳಗಾದ ಮಹಿಳೆಯ ಮೈಯಲ್ಲಿ ವೀರ್ಯದ ಮುಖಾಂತರ ಟ್ರಾನ್ಸ್‌ಫರ್ ಆಗುತ್ತದೆಯೇ? ಅದಕ್ಕಾಗಿಯೇ ಆಸಾರಾಮ್ ಬಾಪು, ಬಿಡದಿ ನಿತ್ಯಾನಂದ ಹಾಗೂ ಇತರ ಕಾವಿಧಾರಿಗಳು ತಮ್ಮ ಮಹಿಳಾ ಭಕ್ತರೊಳಗೆ ದೇವರ ವಿಶೇಷ ಅನುಗ್ರಹ ಟ್ರಾನ್ಸ್‌ಪ್ಲಾಂಟ್ ಮಾಡಲು ರೇಪ್ ಮಾಡಿದ್ದಾರೆಯೇ? ದೇವರು- ಇಂದ್ರ -ಋಷಿಗಳು ಪತಿವ್ರತ ಸ್ತ್ರೀಯರನ್ನು ಮೋಸದಿಂದ ಅಥವಾ ಬಲಾತ್ಕಾರದಿಂದ ಭೋಗಿಸಿದ್ದು ಲೋಕದ/ಧರ್ಮದ ಉದ್ಧಾರಕ್ಕೆ ಎಂದು ನಮ್ಮ ಪುರಾಣಗಳೇ ಸಮರ್ಥಿಸಿವೆ! ತುಳಸಿ, ಅಹಲ್ಯೆ, ಸತ್ಯವತಿ, ಮತ್ಸ್ಯಗಂಧ ಇವರ ಮೇಲೆ ಬಲಾತ್ಕಾರವಾಗಿದ್ದು ಲೋಕದ/ ಧರ್ಮದ ಉದ್ಧಾರಕ್ಕಂತೆ! ಎಂಬತ್ತು ವರ್ಷದ ಹಣ್ಣು ಹಣ್ಣು ಮುದುಕ ಪರಾಶರ ಮುನಿ ಹದಿನೆಂಟು ವರ್ಷದ ಸತ್ಯವತಿಯನ್ನು ರೇಪ್ ಮಾಡಿದ್ದು ವ್ಯಾಸನನ್ನು ಹುಟ್ಟಿಸಿ ಧರ್ಮದ ಉದ್ಧಾರ ಮಾಡಲು! ವೇದವ್ಯಾಸ ಮುನಿ ತನ್ನ ಸಹೋದರ ವಿಚಿತ್ರವೀರ್ಯನ ವಿಧವೆಯರಾದ ಅಂಬಿಕೆ-ಅಂಬಾಲಿಕೆ ಇಬ್ಬರನ್ನೂ ರೇಪ್ ಮಾಡಿದ್ದು ಯಾಕೆಂದರೆ ಆ ವಿಧವೆಯರಿಗೆ ಎರಡು ಮಕ್ಕಳನ್ನು ಹುಟ್ಟಿಸಿ ಅವರಿಬ್ಬರಲ್ಲಿ ಜಗಳ ಹಚ್ಚಿ ಭಯಂಕರ ಕುರುಕ್ಷೇತ್ರ ಯುದ್ಧ ಆಗುವಂತೆ ಮಾಡಿ ಪಾಪಿಗಳು ನಾಶವಾಗಿ ಕೊನೆಗೆ ಧರ್ಮದ ಸ್ಥಾಪನೆ ಆಗುವಂತೆ ಮಾಡುವ ಘನ ಉದ್ದೇಶದಿಂದ! ಅಧರ್ಮದ ನಾಶಕ್ಕೆ ಮತ್ತು ಧರ್ಮದ ಸ್ಥಾಪನೆಗೆ ದೇವರು ಮಹಿಳೆಯರೊಟ್ಟಿಗೆ ರಾಸಲೀಲೆ ಸಹ ಆಡಿದ್ದಿದೆ. ಇಂತಹ ದೇವರ ಲೀಲೆಗಳು ನಮ್ಮಂತಹ ಪಾಮರರಿಗೆ ಅರ್ಥವಾಗುವುದಿಲ್ಲ ಬಿಡಿ!

ಬಾಲ ಬ್ರಹ್ಮಚಾರಿ ಆದಿ ಶಂಕರಾಚಾರ್ಯರ ಜೀವನ ಕಥೆಯಲ್ಲೂ ಅವರು ಸಂಸಾರದ ಅರ್ಥ ಅರಿಯಲು ಒಂದು ಗಂಡಸಿನ ಹೆಣದೊಳಗೆ ಪರಕಾಯ ಪ್ರವೇಶ ಮಾಡಿ ಅವನ ವಿಧವೆಯೊಂದಿಗೆ ಭೋಗಿಸಿದ ಘಟನೆಯ ಅಧಿಕೃತ ಉಲ್ಲೇಖವಿದೆ.

ಆದರೆ ಗೋಸ್ವಾಮಿಯವರು ಶ್ರೀರಾಮ ದೇವರ ಪ್ರೇರಣೆಯ ಹೆಸರಲ್ಲಿ ಗಾಯಕಿಯನ್ನು ರೇಪ್ ಮಾಡಬಾರದಿತ್ತು. ಈ ಮಹಾಪವಿತ್ರ ದೇವರ ಹೆಸರನ್ನು ಅತ್ಯಾಚಾರಕ್ಕೆ ದುರುಪಯೋಗ ಮಾಡಿದ್ದು ದೈವನಿಂದನೆ ಹಾಗೂ ಧರ್ಮದ್ರೋಹಕ್ಕೆ ಸಮ. ಕಾರಣ ಶ್ರೀರಾಮ ಏಕಪತ್ನಿ ವ್ರತಸ್ಥ ಅಂತಹ ನೀತಿವಂತ ದೇವರು ಮಾನವರಿಗೆ ಪರಸ್ತ್ರೀಯನ್ನು ರೇಪ್ ಮಾಡುವಂತೆ ಪ್ರೇರಣೆ ಕೊಡಲು ಸಾಧ್ಯವೇ ಇಲ್ಲ (ಹಿಂದೂತ್ವ ಸಂಘಟನೆಗಳು ಇಂತಹ ದೈವ ದ್ರೋಹಕ್ಕೆ ಸ್ವಾಮೀಜಿಯ ವಿರುದ್ಧ ಕ್ರಮ ಯಾಕೆ ಕೈಗೊಂಡಿಲ್ಲ?).

ಒಂದು ವೇಳೆ ಗೋಸ್ವಾಮಿಯವರು ಶ್ರೀ ರಾಧಾಕೃಷ್ಣ ದೇವರ ಪ್ರೇರಣೆಯೆಂದು ಹೇಳಿದ್ದರೆ ಯಾರ ಆಭ್ಯಂತರವೂ ಇರುತ್ತಿರಲಿಲ್ಲ.

- ಪಿ.ಎಸ್. ಶೆಟ್ಟಿ, ಮಂಗಳೂರು

ವರದಿ ಬಗ್ಗೆ ಅಸಮಾಧಾನ

ಈ ವಾರದ ಮುಖಪುಟ ಸುದ್ದಿಯಾದ ರಾಮಚಂದ್ರಾಪುರದ ಸ್ವಾಮಿಯು 'ಮಾಡಿದ' ಲೈಂಗಿಕ ಶೋಷಣೆಯ ವರದಿ ಕುರಿತು ನನಗೆ ಎರಡು ವಿಷಯಗಳು ತೀವ್ರ ಅಸಮಾಧಾನ ತಂದಿವೆ.

1) ಈ ವರದಿಗಾರರು ಉಪಯೋಗಿಸಿರುವ 'ವಾಯರಿಸಂ'ನ ಭಾಷೆ. ಯಾವುದೇ ಮಹಿಳೆಯ ಮೇಲೆ ಲೈಂಗಿಕ ಶೋಷಣೆ/ಅತ್ಯಾಚಾರ ನಡೆದ ದೂರು ಠಾಣೆಯಲ್ಲಿ ದಾಖಲಾದಾಗ, ಸುದ್ದಿ ಮಾಧ್ಯಮಗಳು ಆ ದೂರು, ಮತ್ತದನ್ನು ಕುರಿತು ಸಿಕ್ಕ ವಿವರಗಳನ್ನಾಧರಿಸಿ ಇನ್ವೆಸ್ಟಿಗೇಟಿವ್ ಲೇಖನ ಬರೆಯುವಾಗ, ಆ ಲೇಖನವೇ ಆ ಮಹಿಳೆಯ ಘನತೆಗೆ, ವೈಯಕ್ತಿಕ ಬದುಕಿಗೆ ಮತ್ತು ಭವಿಷ್ಯಕ್ಕೆ ಇನ್ನಷ್ಟು ಮಸಿ ಎರಚುವಂತೆ ವರದಿ ಮಾಡುವುದು ಪತ್ರಿಕಾ ಧರ್ಮವಂತೂ ಖಂಡಿತಾ ಅಲ್ಲ. ಸಂಪಾದಕರಿಗೆ, ಈ ಭಾಷಾ ರತಿಗೆ ಕತ್ತರಿ ಹಾಕಬೇಕು ಎನ್ನಿಸಲಿಲ್ಲವೇಕೆ?

2) ಅನೇಕ ಹಿಂದೂತ್ವಪಾರಿ ಧಾರ್ಮಿಕ ಸಂಸ್ಥೆಗಳು ಧರ್ಮದ ಹೆಸರಿನಲ್ಲಿ ಜನಸಾಮಾನ್ಯರ ಶೋಷಣೆ ನಡೆಸುತ್ತಾ ಬಂದಿರುವ ಈ ಸಂಕಟದ ಸಂದರ್ಭದಲ್ಲಿ, ಕರ್ನಾಟಕದ ಹಿಂದೂತ್ವಪರ ದಿನಪತ್ರಿಕೆಗಳು ಇಂಥ ಸುದ್ದಿಗಳನ್ನು ವರದಿ ಮಾಡದೆ ದಿವ್ಯ ಮೌನ ತಾಳಿರುವ ಸಂದರ್ಭದಲ್ಲಿ, ಗೌರಿ ಲಂಕೇಶ್ ಪತ್ರಿಕೆಯು ಅತ್ಯಂತ ಸಾಮಾಜಿಕ ಬದ್ಧತೆಯಿಂದ ಈ ಸುದ್ದಿಗಳನ್ನು ನಿರಂತರವಾಗಿ ಬಯಲಿಗೆಳೆಯುತ್ತಾ ಬಂದಿರುವುದು ಸಂತೋಷದ ವಿಷಯವೇ.

ಆದರೆ, ಈ ಪ್ರಕರಣದಲ್ಲಿ ದೂರಿನಲ್ಲಿ ನೀಡಿರುವ ವಿವರಗಳನ್ನೇ 'ಆತ್ಯಂತಿಕ ಸತ್ಯ'ವೆಂಬಂತೆ ಬರೆಯುವುದು ಯಾವ ಸೀಮೆ ವರದಿಗಾರಿಕೆ? ಆಪಾದಿತನು ಎಷ್ಟೇ ಕೊಳಕು ಕೆಲಸ ಮಾಡಿರುವ ಬಗ್ಗೆ ಸಾರ್ವಜನಿಕ ಅಭಿಪ್ರಾಯವಿರಲಿ, ಅಂಥವನನ್ನು 'ಗಿಲ್ಟೀ ಅಂಟಿಲ್ ಪ್ರೂವನ್ ಇನ್ನೊಸೆಂ ಎಂಬಂತೆ ಪರಿಗಣಿಸಿ ತಾವೇ ತೀರ್ಪು ನೀಡಿದಂತೆ ವ ಬರೆಯುವುದು ಲಂಕೇಶ್ ಪತ್ರಿಕೆಯ ಪ್ರಜಾಪ್ರಭುತ್ವವಾ ನಿಲುವಿಗೆ ಧಕ್ಕೆತರುವಂಥ ವಿಷಯ. ಮುಂದಿನ ದಿನಗ ವರದಿಯ ಭಾಷೆ ಮತ್ತು ವಸ್ತುವಿನ ಬಗ್ಗೆ ಎಚ್ಚರದ ಬರೆಯದಿದ್ದರೆ, ಇನ್ನಲ್ಲಾ ರೋಚಕ ಪೀತ ಪತ್ರಿಕೆಗಳಂತೆಯ ಇದೂ ಘನತೆ ಕಳಕೊಳ್ಳುವುದರಲ್ಲಿ ಸಂದೇಹವಿ ಓದುಗರಿಗೆ ತಮ್ಮದೇ ಆದ ವಿಚಕ್ಷಣಾ ಶಕ್ತಿ ಇ ಅದಕ್ಕೊಂದು ಘನತೆ ಇದೆ ಎಂಬುದನ್ನು ಮರೆತಂತೆ ವರದಿಗಳಿದ್ದರೆ ಅದು ನಮಗೆ ಮಾಡುವ ಅವಮಾನ

- ಸುಮಾ ಎಂಬಾರ್, ಮೈಸೂ

ಅಕಾಡೆಮಿಯಲ್ಲಿ ಜಾತಿರಾಜಕಾರಣ ಸರಿಯ

ಪುರುಷೋತ್ತಮ ಬಿಳಿಮಲೆಯವರ 'ಅರೆಭಾಷೆ ಸಂ ಮತ್ತು ಸಾಹಿತ್ಯ ಅಕಾಡೆಮಿ: ಕೆಲವು ಸಂಗತಿಗಳು' ಲೇಖ ಅಕಾಡೆಮಿಯೊಂದು ಸಂಕುಚಿತ ಮನಸ್ಥಿತಿ ಬಲಿಯಾಗುತ್ತಿರುವತ್ತ ನಮ್ಮ ಗಮನವನ್ನು ತೀವ್ರವಾ ಸೆಳೆಯುತ್ತಲೇ, ಘನ ಉದ್ದೇಶವಿರಿಸಿಕೊಂಡು ರಚಿಸಲಾ ಅಕಾಡೆಮಿಗಳನ್ನು ಜಾತಿವಾದ ಪ್ರವೇಶಿಸಿದಲ್ಲಿ ಈ ರೋ ಸಾಂಕ್ರಾಮಿಕವಾಗುತ್ತಾ ಮುಂದೆ ಉಂಟಾಗಬಹುದಾ ಅನಾಹುತಕಾರಿ ಪರಿಸ್ಥಿತಿಯ ಬಗ್ಗೆಯೂ ಯೋಚಿಸುವ ಮಾಡಿದೆ.

ಭಾಷೆಯೊಂದು ಯಾವ ಮೂಲದಿಂದಲೇ ಹುಟ್ಟಿರ ಮೊದಲು ಅದನ್ನು ಯಾರು ಬಳಸುತ್ತಲೇ ಬಂದಿರಲಿ ಭಾಷೆಯ ಒಟ್ಟಾರೆ ಉಳಿವು ಅದರ ಬಳಕೆಯ ಅವಲಂಬಿಸಿರುತ್ತದೆ (ಬಳಕೆಯನ್ನು ಒಂದು ವರ್ಗ ಮೀಸಲಿಟ್ಟಿರುವುದರಿಂದ ಸಂಸ್ಕೃತದ ಗತಿಯೇನಾಯಿ ಎನ್ನುವುದು ನಮಗೆ ಗೊತ್ತೇ ಇದೆ) ಎನ್ನುವುದರಲ್ಲಿ ಎರ ಮಾತಿಲ್ಲ. ಈ ಬಳಕೆಯು ವ್ಯಾಪಕವಾಗು ಹೋಗಬೇಕಾದರೆ ಅದು ಜಾತಿ, ಧರ್ಮಗಳ ಬಂಧನದಿ ಬಿಡಿಸಿಕೊಳ್ಳಲೇಬೇಕು. ಭಾಷೆಯು ಸಂಸ್ಕೃತಿಯ ಒಂ ಬಹುಮುಖ್ಯ ಅಂಗ ಎನ್ನುವುದನ್ನು ಒಪ್ಪಿಕೊಳ್ಳುವುದಾ ಒಂದು ಪ್ರದೇಶದ ಸಂಸ್ಕೃತಿಯ ಬೆಳವಣಿಗೆಯಲ್ಲಿ ಅಂ ಪ್ರದೇಶದ ಸರ್ವ ಜಾತಿ ಮತಗಳವರ ಕೊಡುಗೆಯ ಇದ್ದೇ ಇರುವ ಕಾರಣ ಆ ಭಾಷೆಯ ಏಳಿಗೆಯ ಮ ಆ ಎಲ್ಲ ಜಾತಿಮತಗಳವರಿಗೂ ಸಮಾನ ಮ ಸಲ್ಲಲೇಬೇಕು.

ಅರೆಭಾಷೆ ಎನ್ನುವುದು ಸುಳ್ಯ ಪ್ರದೇಶದ ಗೌ ಬಳಸುವ ಭಾಷೆಯೇ ಆಗಿದ್ದರೂ ಆ ಭಾಷೆಯನ್ನು ಅತ ಸುಲಲಿತವಾಗಿ ಮಾತನಾಡಬಲ್ಲ, ಅದರಲ್ಲಿ ಅನನ್ಯ ಸಾ ಕೃತಿಗಳನ್ನು ರಚಿಸಬಲ್ಲ ಅಸಂಖ್ಯ ಗೌಡೇತರರೂ ಇ ಅವರಿಗೆ ಮನ್ನಣೆ ಸಿಗಬಾರದು ಎನ್ನುವುದಾದರೆ ಏಕಕಾ ನಾವು ಆ ಸಾಧಕರಿಗೂ, ಭಾಷೆಗೂ ಅನ್ಯಾ ಮಾಡಿದಂತಾಗುವುದಿಲ್ಲವೇ? ಇಷ್ಟಕ್ಕೂ ಅದು 'ಅರೆಭ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ'ಯೇ ಹೊ ಗೌಡ ಅಕಾಡೆಮಿ ಅಲ್ಲವಲ್ಲ.

ಸುಳ್ಯ ಪ್ರದೇಶದ ಗೌಡ ಜನಾಂಗದವರು ಶ್ರಮಜ ಗಳೂ, ಕ್ರಿಯಾಶೀಲರೂ, ಸೃಜನಶೀಲ ವ್ಯಕ್ತಿತ್ವ ಉಳ್ಳವ ವಿಶಾಲ ಮನೋಭಾವದವರೂ ಆಗಿದ್ದು ಆ ಸಮುದಾಂ ಮಂದಿ ಇಂದು ಅನೇಕ ಕ್ಷೇತ್ರಗಳಲ್ಲಿ ಅಸಾಧಾರಣ ಸಾ ಮೆರೆಯುತ್ತಿದ್ದಾರೆ. ಈ ಸಾಧನೆಯ ಹಾದಿಯಲ್ಲಿ ಅ ಜಾತಿ, ಮತ, ಭಾಷಾ ಗಡಿಗಳನ್ನು ಮೀರಿ ಎಲ್ಲರಿಂದ ಎಲ್ಲವನ್ನೂ ಪಡೆದುಕೊಂಡು ಬೆಳವಣಿಗೆ ಹೊಂದಿ ಹಾಗಿರುವಾಗ ಅಕಾಡೆಮಿಯೊಂದನ್ನು ಹುಟ್ಟು ಕಟ್ಟ ಹದಿನೆಂಟು ಬಳಿಯ ಗೌಡರಿಗೇ (ನಾನಾ


ಪ್ರತಿಭೆ, ಅಪರೂಪದ ಗುಣಗಳ ಎರಕ ಗುರುಕಿರಣ್

ಗುರುಕಿರಣ್ ಯಾವ ಯಾವ ಚಿತ್ರಗಳಿಗೆ ಸಂಗೀತ ...ನ್ನಾರೆ ಎಂದು ನೆನಪಿಸಿಕೊಂಡರೆ 'ಎ', 'ಉಪೇಂದ್ರ', ... 'ಕರಿಯ', 'ಆಪ್ತಮಿತ್ರ', 'ಕುಟುಂಬ', 'ಜೋಗಿ', ... ಶಾಮ ಭಾಮ', 'ಅರಮನೆ'- ಮುಂತಾದವುಗಳು ...ಗುತ್ತವೆ. ಈ ಬಗೆಯ ಚಿತ್ರಗಳಲ್ಲಿನ ಹಾಡುಗಳನ್ನು ...ಕೊಂಡು ಗುರುಕಿರಣ್ ಅವರ ಬಗ್ಗೆ ಯೋಚಿಸ ...ದಾಗ ಇವರ ಸುತ್ತ ಜರುಗಿದ ಘಟನೆಗಳನ್ನು, ... ಸಂಗತಿಗಳನ್ನು ಚರ್ಚಿಸಬೇಕು ಅನ್ನಿಸುತ್ತದೆ.

...ವರು ಕೆಲವೇ ವರ್ಷಗಳಲ್ಲಿ ಇಷ್ಟು ಎತ್ತರಕ್ಕೆ ಬೆಳೆದಿದ್ದು ...ಯ, ಪ್ರಶಂಸೆಯ ವಿಷಯ; ಗುರುಕಿರಣ್ ಅವರು ...ತೆ ಆಗಿದ್ದರೆ... ಎಲ್ಲರೂ ಕೊಡುವಂಥ ಹಾಡುಗಳನ್ನು ...ಲ್ಲಿ, ಎಲ್ಲರ ರೀತಿಯ ಸೂತ್ರಗಳಿಗೆ ಜೋತು ಬಿದ್ದ ...ತ ನಿರ್ದೇಶಕರಾಗಿದ್ದರೆ ಇನ್ನೂ ಒಂದಷ್ಟು ಹಿಟ್ ...ಗಳನ್ನು ಕೊಡಬಹುದಿತ್ತು. ಆದರೆ ಗುರುಕಿರಣ್, ...ನ್ ಮುಂತಾದ ಸಂಗೀತಗಾರರು ಒಂದು ಬಗೆಯಲ್ಲಿ ...ರ್ ಜಾಕ್ಸನ್, ಮಧುರ್ ಭಂಡಾರ್ಕರ್‌ಗಳು; ಅವರೇ ...ಕೊಂಡ ಕಲಾಜಗತ್ತಿನ ಪರಿಧಿಯಲ್ಲಿ ತಲ್ಲೀನರಾಗುತ್ತ ...ನ್ನೇ ಕಲೆಗೆ ಮೀಸಲಾಗಿಸಿಕೊಂಡು ಬದುಕುವ ...ಕಪೂರ್, ರವಿಚಂದ್ರನ್‌ಗಳು. ನಮಗೆ ರೆಹಮಾನ್, ...ರ್ ಜಾಕ್ಸನ್‌ಗಳ ಯೋಚನಾಕ್ರಮ ಅರಿವಿಗೆ ದಕ್ಕಿದರೆ, ... ಬಂದ ಅವಕಾಶಗಳನ್ನೆಲ್ಲಾ ಒಪ್ಪಿಕೊಂಡು, ಕೇವಲ ...ಗಷ್ಟೇ ಛತ್ತು ಕೊಟ್ಟು, ಕಡೆಗೆ ಲಡ್ಡಾಗಿ ನಿವೃತ್ತಿ ಹೊಂದುವುದನ್ನು ಊಹಿಸಿಕೊಳ್ಳಲೂ ಕಷ್ಟವಾಗುತ್ತದೆ. ನಿತ್ಯದ ಬದುಕು, ಕ್ರಿಯಾಶೀಲತೆಗಳನ್ನೆಲ್ಲಾ ಒಟ್ಟಿಗೇ ಸವಿಯುತ್ತ ಅಚ್ಚರಿಯಾಗಿ ಕಾಣುವ ಈ ರಮ್ಯ ಜೀವಿಗಳ ಲೋಕ ವರ್ಣಮಯವಾದದ್ದು, ಸೋಲುಗೆಲುವುಗಳನ್ನೂ ಕೂಡ ಒಂದು ಸವಾಲಾಗಿ ಸ್ವೀಕರಿಸಿದ್ದು ಇನ್ನೂ ರೋಚಕ ಸಂಗತಿ.

ನೀವು ಈ ಗುರುಕಿರಣ್‌ರನ್ನು ಬಲ್ಲಿರಿ. ಇವರ ಹಾಡುಗಳಲ್ಲಿ ಇವರದೇ ಫೀಲ್ ಮತ್ತು ಸ್ಟೈಲ್. ಗುರುಕಿರಣ್ ಫೀಲ್ ಮಾಡುವ ಟ್ಯೂನನ್ನು ಚಿತ್ರಕತೆಯ, ಹಾಡಿನ ಸನ್ನಿವೇಶದ ಆಶಯಕ್ಕೆ ಮೋಸವಾಗದಂತೆ ವಾದ್ಯ ಸಂಯೋಜನೆ, ಪೂರಕ ಸಾಹಿತ್ಯ ಗಾಯನದ ಮೂಲಕ ಜನಕ್ಕೆ ತಲುಪಿಸುವುದು ಅವರ ಹೊಣೆ; ಹಾಡು ರೂಪಿಸುವ ತಂತ್ರದಲ್ಲಿ ಚೆನ್ನಾಗಿ ಪಳಗಿದ್ದ ಗುರುಕಿರಣ್ ಪ್ರಯೋಗಿಸಿದ ಹೊಸತನವೆಂದರೆ, ಆದಷ್ಟೂ ಸೌಂಡಿಂಗ್ ಮೂಲಕ ರಂಜನಾತ್ಮಕವಾಗಿ ಹಾಡುಗಳನ್ನು ರೂಪಿಸುತ್ತಾ ಆಡಿಯೋ ಹಿಟ್ ಆಗುವಂತೆ ನೋಡಿಕೊಳ್ಳುವುದು, ಕೇಳುಗ ಚಕಿತಗೊಳ್ಳುವಂತೆ ಮಾಡುವುದು. ಇವರು 'ಜೋಗಿ' ಚಿತ್ರಕ್ಕೆ ಹಾಡುಗಳನ್ನು ಮಾಡುವ ಮುಂಚೆ ಇವರು ಜಾನಪದೀಯ ಹಿನ್ನೆಲೆಯುಳ್ಳ ಸಂಗೀತ ನೀಡಿರಲಿಲ್ಲ; 'ಜೋಗಿ'ಯಲ್ಲಿನ ಕತೆ, ಚಿತ್ರಕತೆಯಲ್ಲಿನ ಮೂಡ್ ಗುರುಕಿರಣ್ ಅವರಿಂದ ಸೌಂಡಿಂಗ್ ಜೊತೆಗೆ ಜಾನಪದೀಯ ಸ್ಪರ್ಶದ ಅವಶ್ಯಕತೆಯನ್ನೂ ಮನವರಿಕೆ ಮಾಡಿದ್ದವು. ಆದರೆ ಪ್ರೇಮ್ ಅವರಿಗಿದ್ದ ಹಳ್ಳಿಗಾಡಿನ ಪರಿಚಯ, ಗ್ರಾಮ್ಯ ಭಾಷೆಯ ಅರಿವು ಅರಿತುಕೊಂಡು ಆ ಮೂಡ್‌ಗೆ ಹೊಂದುವ ರೀತಿಯಲ್ಲಿ ಗುರುಕಿರಣ್ ಹಾಡುಗಳನ್ನು ರೂಪಿಸಿದರು. ಅಲ್ಲಿಯತನಕ ಕೇಳಿರದಿದ್ದ ಹೊಸಬಗೆಯ ಗುರುಕಿರಣ್ ಹಾಡುಗಳು ಜನಕ್ಕೆ ಸಿಕ್ಕವು. ಹಾಡುಗಳನ್ನು ಇದ್ದಕ್ಕಿದ್ದಂತೆ ಪರವಶತೆಯ ಘಟ್ಟಕ್ಕೆ ತಲುಪಿಸಬಲ್ಲ ಗುರುಕಿರಣ್ ಅಬ್ಬರದ ಸೌಂಡ್, ಕ್ಯಾಚಿ ಲಿರಿಕ್ಸ್, ಸ್ಟೈಲಿಶ್ ಹಾಡುಗಾರಿಕೆಯಿಂದ ಕೇಳುಗರನ್ನು ರಂಜಿಸಲು ಪ್ರಯತ್ನಿಸುವವರು. 'ಎ' ಚಿತ್ರದ ಹಾಡುಗಳು ಆವರೆಗಿನ ಕನ್ನಡ ಕೇಳುಗರನ್ನು ಬೆಚ್ಚಿ ಬೀಳಿಸಿದ್ದು, 'ಆಪ್ತಮಿತ್ರದ'ದ ಹಾಡುಗಳು ಬೇರೆಯದೇ ಗುರುಕಿರಣ್‌ರನ್ನು ತೋರಿಸಿದ್ದು, 'ಶುಭಂ'ನ ನವಿರಾದ ಕತೆಗೆ ಮಾಧುರ್ಯದ ಟಚ್ ಕೊಟ್ಟು ಇಡೀ ಚಿತ್ರವನ್ನು ಸಂಗೀತಮಯಗೊಳಿಸಿದ್ದು - ಇವು ಒಂದಿಷ್ಟು ಉದಾಹರಣೆಗಳು ಮಾತ್ರ.

ಇಲ್ಲಿ ಇದಕ್ಕೆ ಪೂರಕವಾಗಿ ಕೆಲವೊಂದು ವಿಷಯ ಹೇಳಬೇಕು. ಷೋ ಮ್ಯಾನ್ ಗುರುಕಿರಣ್, ಲವಲವಿಕೆಯನ್ನೇ ಜೀವನದ ಬಹುಮುಖ್ಯ ಶಕ್ತಿಯಾಗಿ ಅರಿತ ಗುರುಕಿರಣ್ ಕರ್ನಾಟಕದ ಮಟ್ಟಿಗೆ ಮೊದಲ ಸ್ಟೈಲಿಶ್ ಸಂಗೀತ ನಿರ್ದೇಶಕ; ಭಾರತೀಯ ಚಲನಚಿತ್ರರಂಗ ನಿಜಕ್ಕೂ ಹಾಡುಗಳ ಚಿತ್ರರಂಗ. ಗುರುಕಿರಣ್ ಅವರ ಸೌಂಡಿಂಗ್ ಸೆನ್ಸ್, ಸಂಗೀತದಲ್ಲಿನ ಹೊಸತನವೇ ಚಿತ್ರವೊಂದಕ್ಕೆ ಹುರುಪು ಮತ್ತು ಚೈತನ್ಯ ತರಬಲ್ಲವೆಂಬ ಪರಮಗುಟ್ಟನ್ನು ತಮ್ಮ ಸಂಗೀತದ ಮೂಲಕ, ಹಾಡುಗಾರಿಕೆಯ ಮೂಲಕ ತೋರಿ ಯಾವನೇ ಸಿನಿಮಾ ನಾಯಕನಷ್ಟೇ ಖ್ಯಾತಿವಂತರಾದ ವ್ಯಕ್ತಿ ಇವರು. ಚಿತ್ರಕ್ಕೆ ಹಾಡುಗಳೇ ಜೀವಾಳ ಎಂಬುದಕ್ಕೆ ಉದಾಹರಣೆ: ಗಾಯಕನಿಗೆ ಈ ನೋಟ್‌ನಲ್ಲಿ ಪ್ರೇಮದ ಭಾವನೆ ತೋರು ಎಂದು ಹೇಳಿ ಹಾಡಿಸಿಕೊಂಡಿದ್ದನ್ನು ನಿರ್ದೇಶಕರು ನಾಯಕನ ಸ್ವಗತದಲ್ಲೋ, ನಾಯಕಿಯ ಕಲ್ಪನೆಯಲ್ಲೋ ಹಾಕಬಹುದು- ಇದನ್ನು ಮನಗಂಡಿದ್ದ ಗುರುಕಿರಣ್ ತಮ್ಮ ಪ್ರತಿಭೆಯನ್ನು ಮಾತ್ರವಲ್ಲ, ತಮ್ಮ ಅಂದಾಜು, ಭಾವುಕತೆ, ಹೊಸತನ ಮುಂತಾದವುಗಳನ್ನು ಬಸಿದುಕೊಂಡರು, ಸಂಗೀತವನ್ನೇ ಹೀರೋ ಮಾಡಿದರು. ಅವರೊಂದಿಗೆ ತಾವೂ ಅರಳಿಕೊಂಡರು. ಹಾಗೆಯೇ ಸದಾ ಹಾಡುಗಳ ಗುಂಗಿನಲ್ಲಿಯೇ ಮುಳುಗಿರುತ್ತಿದ್ದ ಗುರುಕಿರಣ್ ಅವರು ಮೇಲುನೋಟಕ್ಕೆ ಸ್ಟಾರ್ ರೀತಿಯಲ್ಲಿ ಕಂಡರೂ ಆಳದಲ್ಲಿ ಸರಳ ಭಾವುಕರಾಗಿದ್ದರು; ಸಂಗೀತವನ್ನೇ ಹಚ್ಚಿಕೊಂಡಿರುವ ಇವರು, ಅನೇಕ ಹೊಸ ಹೊಸ ಗೀತರಚನೆಕಾರರನ್ನು, ಗಾಯಕ/ಗಾಯಕಿಯರನ್ನು ಚಿತ್ರರಂಗಕ್ಕೆ ಪರಿಚಯಿಸಿದ್ದೂ ಉಂಟು. ಸಿನಿಮಾಗಳ ಜೊತೆಜೊತೆಗೆ 'ಕಾನ್ಫಿಡೆಂಟ್ ಸ್ಟಾರ್ ಸಿಂಗರ್' ತರಹದ ಕಿರುತೆರೆಯ ರಿಯಾಲಿಟಿ ಷೋಗಳನ್ನು ನಡೆಸಿಕೊಡುವ ಮೂಲಕ, ಅಲ್ಲಿ ಹಾಡುವ ಒಂದಿಷ್ಟು ಪ್ರತಿಭೆಗಳನ್ನು ಗುರುತಿಸಿ ತಮ್ಮ ಚಿತ್ರಗಳಲ್ಲಿ ಹಾಡುವ ಅವಕಾಶ ಕಲ್ಪಿಸಿಕೊಟ್ಟರು. ನಿಜಕ್ಕೂ ಹೊಸ ಗಾಯಕರಿಗೆ ಇವರು ಕೊಡುವ ಗೌರವ, ತುಂಬುವ ಆತ್ಮವಿಶ್ವಾಸ ಮೆಚ್ಚುಗೆ ಉಂಟುಮಾಡುವಂಥದ್ದೇ. ಈ ಕುರಿತು ಗುರುಕಿರಣ್ "ನಾನು ಮೊದಲಿಗೆ ಗಾಯಕನಾಗಬೇಕು ಅಂತ ಚಿತ್ರರಂಗಕ್ಕೆ ಬಂದೆ. ಅಲ್ಲಿ ಇಲ್ಲಿ ಅವಕಾಶಗಳಿಗಾಗಿ ಪ್ರಯತ್ನಿಸಿದೆ. ಒಂದು ಸಲ ಒಬ್ಬರು ಹಿರಿಯ ಹೆಸರಾಂತ ಸಂಗೀತ ನಿರ್ದೇಶಕರ ಬಳಿ ಅವಕಾಶ ಕೇಳಲು ಹೋಗಿದ್ದೆ. ಹಾಡು ಅಂದರು. ಅವರ ಸಮ್ಮುಖದಲ್ಲಿಯೇ ನನ್ನದೇ ಶೈಲಿಯಲ್ಲಿ ಹಾಡಿದೆ. ನಾನು ನನ್ನದೇ ಶೈಲಿಯಲ್ಲಿ ಹಾಡಿದ್ದನ್ನು ಕೇಳಿಸಿಕೊಂಡ ಆ ಸಂಗೀತ ನಿರ್ದೇಶಕರು, ಹೀಗೆಲ್ಲಾ ಹಾಡಬಾರದು, ಎಸ್.ಪಿ.ಬಾಲಸುಬ್ರಹ್ಮಣ್ಯಂ ಹಾಡಿದಂತೆ ಬೇಸ್ ವಾಯ್ಸ್‌ನಲ್ಲಿ, ಮೃದುವಾದ, ನಿಧಾನಗತಿಯ ಧಾಟಿಯಲ್ಲಿ ಹಾಡಬೇಕೆಂದೂ, ನಾನು ಹಾಡುವ ಬಗೆ ಸರಿಯಿಲ್ಲವೆಂದೂ ನನ್ನ ಮನಸನ್ನು ನೋಯಿಸಿದ್ದರು.



ಗಾಯಕನಾಗಿ ಬದುಕು ಕಂಡುಕೊಳ್ಳಬೇಕು, ಉನ್ನತವಾದುದನ್ನು ಸಾಧಿಸಬೇಕು ಎಂಬ ನನ್ನ ಕನಸನ್ನು ಸುಳ್ಳಾಗಿಸಿದ್ದರು. ಅದನ್ನೇ ಚಾಲೆಂಜಾಗಿ ತೆಗೆದುಕೊಂಡು, ನನ್ನ ಹಾಡುವ ಶೈಲಿಯನ್ನು ಯಾವುದೇ ಕಾರಣಕ್ಕೂ ಬದಲಾಯಿಸಿಕೊಳ್ಳದೆ ಅದನ್ನೇ ಆಧಾರವಾಗಿಟ್ಟುಕೊಂಡು ಮುಂದೆ ಸಾಧಿಸಬೇಕು ಅಂತ ತೀರ್ಮಾನಿಸಿದೆ. ಆ ಪ್ರಯತ್ನ 'ಉಪೇಂದ್ರ' ಚಿತ್ರದ 'ಟು ಥೌಸಂಡ್ ಎ.ಡಿ. ಲೇಡಿಯೇ' ಹಾಡಿನ ಮೂಲಕ ಫಲ ನೀಡಿತು. ನನ್ನ ಸ್ಟೈಲ್ ಆಫ್ ಸಿಂಗಿಂಗ್ ಕ್ಲಿಕ್ ಆಗುವ ಮೂಲಕ ನನ್ನ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸಿತು. ಆದ್ದರಿಂದ ಯಾರಾದರು ಹೊಸದಾಗಿ ಹಾಡಲು ಬರುವ ಗಾಯಕ/ಗಾಯಕಿಯನ್ನು ಅವಮಾನಿಸುವುದಾಗಲೀ, ಅವರ ಆತ್ಮವಿಶ್ವಾಸವನ್ನು ಕುಗ್ಗಿಸುವುದಾಗಲೀ ನಾನು ಮಾಡುವುದಿಲ್ಲ, ಬದಲಿಗೆ ಅವರದೇ ಶೈಲಿಯಲ್ಲಿ ಹಾಡಲು ಹೇಳುತ್ತೇನೆ. ಅವರ ಧ್ವನಿ, ಸ್ಟೈಲ್ ಆಫ್ ಸಿಂಗಿಂಗ್ ಯಾವ ಬಗೆಯದ್ದು ಎಂದು ಗ್ರಹಿಸಿ ನಾನು ಕಂಪೋಸ್ ಮಾಡಿರುವ ಯಾವ ಹಾಡಿಗೆ ಅವರ ಧ್ವನಿ ಹೊಂದುತ್ತದೆ ಎಂದು ಅಂದಾಜು ಮಾಡುತ್ತೇನೆ. ಅವರ ಧ್ವನಿ ನಾನು ಹಾಕಿದ ರಾಗಕ್ಕೆ, ಅದರ ಆಶಯಕ್ಕೆ ಹೊಂದುವುದಾದರೆ ಖಂಡಿತ ಅವರಿಂದ ಹಾಡಿಸುತ್ತೇನೆ. ನನಗೆ ಬಾಲಿವುಡ್ ಗಾಯಕರಿಂದಲೇ ಹಾಡಿಸಬೇಕೆಂದು ಹಠವೇನೂ ಇಲ್ಲ, ಆಯಾಯ ಹಾಡಿಗೆ ಹೊಂದುವ ಆಯಾಯಾ ವಾಯ್ಸ್ ಸೂಟ್ ಆದರೆ ಸಾಕು. ನನ್ನ ಅದೆಷ್ಟೋ ಹಾಡುಗಳನ್ನು ಹೊಸಗಾಯಕ ಗಾಯಕಿಯರು ಹಾಡಿದ್ದುಂಟು, ಆ ಹಾಡುಗಳು ಸೂಪರ್ ಹಿಟ್ ಆಗಿದ್ದೂ ಉಂಟು" ಎನ್ನುತ್ತಾರೆ.

ತಮ್ಮ ವೃತ್ತಿಬದುಕಿನ ಅಪಾರ ಸ್ಪರ್ಧೆಯ ನಡುವೆಯೂ ತಮ್ಮ ಕ್ರಿಯಾಶೀಲತೆಯನ್ನು ಕಾಪಾಡಿಕೊಳ್ಳಲು ಯತ್ನಿಸುವ ಗುರುಕಿರಣ್ ಅವರು ಚಿತ್ರರಂಗದಲ್ಲಿ ಏನನ್ನೂ ಸಾಧಿಸದೆ, ಗಾಯಕನಾಗಬೇಕೆಂದು ಅಲ್ಲಿಇಲ್ಲಿ ಅವಕಾಶಗಳ ಬೆನ್ನತ್ತುತ್ತಿದ್ದ ನಾಳೆಯ ಬದುಕಿನ ಸ್ಪಷ್ಟತೆಯೇ ಇರದಿದ್ದ ದಿನಗಳಲ್ಲಿಯೇ ತಮ್ಮ ಬದುಕಿನ ಹಾಡಿಗೆ ಪಲ್ಲವಿ ಎಂಬ ಬಾಳಸಂಗಾತಿಯಾಗಿ ಆಯ್ಕೆ ಮಾಡಿಕೊಂಡರು. ಹೃದಯ್, ಶ್ರಾವ್ಯ ಎಂಬೆರಡು ಮಕ್ಕಳ ಅಪ್ಪನಾಗಿ ಮುಂದೊಮ್ಮೆ ಹೆಂಡತಿ ಮಕ್ಕಳಿಗೂ ಸಮಯ ಕೊಡಲಾರದಷ್ಟು ಬ್ಯುಸಿಯೆಸ್ಟ್ ಸಂಗೀತ ನಿರ್ದೇಶಕ ಅನ್ನಿಸಿಕೊಂಡರು. ಯಶಸ್ಸು, ಕೀರ್ತಿ, ಹಣ, ಸ್ಟಾರ್‌ಗಿರಿ ಎಲ್ಲವೂ ಇದ್ದ ಕಾಲದಲ್ಲಿಯೂ ಆ ಗೆಲುವಿನ ಪಿತ್ತವನ್ನು ನೆತ್ತಿಗೇರಿಸಿಕೊಳ್ಳದ ಹಾಗೆ ಇರುಳೆಲ್ಲಾ ವಾದ್ಯಗಳೊಂದಿಗೆ, ನಾದದೊಂದಿಗೆ ಮುಳುಗಿಹೋದರು. ಸಾಮಾನ್ಯ ಕೇಳುಗನಿಗಾಗಿ ಸರಳ ಗೀತೆಗಳನ್ನು ರೂಪಿಸುತ್ತಾ ಚೊಚ್ಚಲ ಬಾರಿಗೆ ಸಿನಿಮಾ ಮಾಡಿದ ಅದೆಷ್ಟೋ ನಿರ್ದೇಶಕರಿಗೆ ತಮ್ಮ ಹಾಡುಗಳ ಮೂಲಕ ಗೆಲುವು ತಂದುಕೊಟ್ಟವರು; 'ಧ್ರುವ'ದ ಎಂ.ಎಸ್.ರಮೇಶ್, 'ತುಂಟಾಟ'ದ ಇಂದ್ರಜಿತ್ ಲಂಕೇಶ್, 'ಕರಿಯ'ನ ಪ್ರೇಮ್, 'ಖುಷಿ'ಯ ಪ್ರಕಾಶ್, 'ಕಂಠಿ'ಯ ಭರತ್, 'ರಾಮ ಶಾಮ ಭಾಮ'ದ ರಮೇಶ್ ಅರವಿಂದ್, 'ಸತ್ಯ ಇನ್ ಲವ್'ನ ರಾಘವ್ ಲೋಕಿ, 'ಅರಮನೆ'ಯ ನಾಗಶೇಖರ್ ಆ ಪೈಕಿ ಪ್ರಮುಖ ನಿರ್ದೇಶಕರು. ತಮ್ಮ ಪ್ರತಿಭೆ, ಸಾಮರ್ಥ್ಯದ ಬಗ್ಗೆ ಅಪಾರ ವಿಶ್ವಾಸ ಹೊಂದಿರುವ ಗುರುಕಿರಣ್ ತಮ್ಮ ಸಂಗೀತದ ಹಾಡುಗಳು ತೆರೆಯ ಮೇಲೆ ಚೆನ್ನಾಗಿ ಮೂಡಿಬಂದಾಗ ಹೇಗೆ ಖುಷಿ ಪಡುತ್ತಾರೋ ಅದೇ ಆ ಹಾಡುಗಳು ಕೆಟ್ಟದಾಗಿ, ಅಭಿರುಚಿಶೂನ್ಯತೆಯಿಂದ ಚಿತ್ರಿತವಾಗಿದ್ದರೆ ಬೇಜಾರು ಮಾಡಿಕೊಳ್ಳುವುದೂ ಉಂಟು.

ಹಾಡು ಕುರಿತ ತಮ್ಮ ಜಡ್ಜ್‌ಮೆಂಟ್ ಬಗ್ಗೆ ಗ್ಯಾರಂಟಿ ಹೊಂದಿರುವ ಗುರುಕಿರಣ್ ತಮಗೆ ಮೊದಲಿಗಿದ್ದ ಬೇಡಿಕೆ ತುಸು ಕುಗ್ಗಿದಾಗಲೂ, ತಮ್ಮಿಂದ ಹಿಟ್ ಗೀತೆಗಳನ್ನು ಪಡೆದು ಚಿತ್ರರಂಗದಲ್ಲಿ ಎತ್ತರಕ್ಕೇರಿದ ಕೆಲವು ನಿರ್ದೇಶಕರು, ನಿರ್ಮಾಪಕರು ಬೇರೊಬ್ಬ ಸಂಗೀತ ನಿರ್ದೇಶಕರ ಹತ್ತಿರ ಹೋದಾಗಲೂ ಆಘಾತಕ್ಕೊಳಗಾಗದೆ, ಯಾರನ್ನೂ ದೂರದೆ, ಯಾರ ಮೇಲೂ ಕೋಪಿಸಿಕೊಳ್ಳದೆ ತಾವಾಯಿತು, ತಮ್ಮ ಕೆಲಸವಾಯಿತು ಎಂಬ ತೀರ್ಮಾನಕ್ಕೆ ಬಂದರು. ಕೆಲವು ಸಮಯಸಾಧಕರು ತಮ್ಮಿಂದ ಉಪಕಾರ ಪಡೆದೂ, ಬೆನ್ನಿನ ಹಿಂದೆ ತಮ್ಮ ಬಗ್ಗೆಯೇ ಇಲ್ಲದ್ದನ್ನು ಮಾತಾಡುವಾಗಲೂ, ತಮ್ಮನ್ನು ಹಗುರವಾಗಿ ಚಿತ್ರಿಸುವಾಗಲೂ ಅಂಥವರ ಮೇಲೆ ಮೊದಲಿನಂತೆಯೇ ಪ್ರೀತಿಯಿಂದ, ತುಂಬು ವಿಶ್ವಾಸದಿಂದ ವರ್ತಿಸಿದರು. "ಒಬ್ಬರಿಗೆ ಸಹಾಯ ಮಾಡಿದರೆ ಅದರಿಂದ ಪ್ರತಿಯಾಗಿ ಏನನ್ನೋ ಬಯಸುವುದರಲ್ಲಿ ಅರ್ಥವಿಲ್ಲ, ಅದು ಸ್ವಾರ್ಥವಾಗುತ್ತದೆ. ನನ್ನಿಂದ ಸಹಾಯ, ಉಪಕಾರ ಪಡೆದ ಕೆಲವರು ನನ್ನ ಬಗ್ಗೆ ಅಲ್ಲಿ ಇಲ್ಲಿ ನೆಗೆಟೀವ್ ಆಗಿ ಮಾತಾಡುವುದನ್ನು ಕೇಳಿದ್ದೇನೆ. ಇದರಿಂದ ಮನಸಿಗೆ ತುಸು ನೋವಾದರೂ ಮರೆತು ಸುಮ್ಮನಾಗಲು ಯತ್ನಿಸುತ್ತೇನೆ. ಏಕೆಂದರೆ ಬದುಕು ಕ್ಷಣಿಕ, ಇವತ್ತಿದ್ದವರು ನಾಳೆ ಇರಲ್ಲ, ಇದ್ದಷ್ಟು ಕಾಲ ಖುಷಿಯಿಂದ, ಪ್ರಾಮಾಣಿಕವಾಗಿ ಬದುಕಬೇಕಷ್ಟೇ" ಎಂದು ಹೇಳಿ ಭಾವುಕರಾಗುವ ಗುರುಕಿರಣ್ ವ್ಯಂಗ್ಯಚಿತ್ರಗಳನ್ನೂ ಬರೆಯಬಲ್ಲ ಗಂಭೀರ ಸ್ವಭಾವದ ಮನುಷ್ಯ ಎಂಬುದು ಎಷ್ಟೋ ಜನಕ್ಕೆ ಗೊತ್ತಿಲ್ಲ. ತಾವು ಈ ಮಟ್ಟಕ್ಕೆ ಬರಲು ಕಾರಣರಾದ ಉಪೇಂದ್ರ, ವಿ.ಮನೋಹರ್ ಅವರನ್ನು ಯಾವಾಗಲೂ ನೆನಪಿಸಿಕೊಳ್ಳುವ ಇವರು ಆಳದಲ್ಲಿ ಸೂಕ್ಷ್ಮ ಸ್ವಭಾವದ, ಅಷ್ಟೇ ಕ್ಲಿಷ್ಟಕರ ಹಾಗೂ ಅಷ್ಟೇ ಸರಳ ವ್ಯಕ್ತಿತ್ವದ ವ್ಯಕ್ತಿ.

ಗುರುಕಿರಣ್ ಅವರಲ್ಲಿನ ಮತ್ತೊಂದು ವಿಶೇಷ ಪ್ರತಿಭೆಯೆಂದರೆ ಅವರ 'ಗುರುಕಿರಣ್ ಮ್ಯೂಸಿಕಲ್ ನೈಟ್' ಮೂಲಕ ನಾಡಿನ ಮೂಲೆಮೂಲೆಯ ಜನರನ್ನು ರಂಜಿಸಿದ್ದು. ಗುರುಕಿರಣ್ ತಮ್ಮ ತಂಡ ಕಟ್ಟಿಕೊಂಡು ಹೋಗಿ ಹಾಡಿ ರಂಜಿಸುವವರೆಗೆ 'ಹಂಪಿ ಉತ್ಸವ'ಕ್ಕೆ ತನ್ನದೇ ಆದ ಕಳೆ, ಮೆರಗು, ಗ್ಲಾಮರ್ ಬಂದಿರಲಿಲ್ಲವೆಂದರೆ ನಿಮಗೆ ಅಚ್ಚರಿಯಾಗಬಹುದು. ಯಾವಾಗ ಹಂಪಿಯಲ್ಲಿ 'ಗುರುಕಿರಣ್ ನೈಟ್' ಹಿಟ್ ಕಾರ್ಯಕ್ರಮ ಅನ್ನಿಸಿಕೊಂಡಿತೋ ಅಲ್ಲಿಂದಾಚೆಗೆ 'ಗುರುಕಿರಣ್ ನೈಟ್'ಗಳು ಸಾಕಷ್ಟು ಜನಪ್ರಿಯತೆ ಗಳಿಸಲಾರಂಭಿಸಿದವು. ಸರ್ಕಾರ ಏರ್ಪಡಿಸುವ ಜಿಲ್ಲಾ ಉತ್ಸವಗಳು ಗುರುಕಿರಣ್ ಹಾಡುಗಳ ರಂಗು ತುಂಬಿಕೊಂಡು ಹಬ್ಬದ ವಾತಾವರಣ ನಿರ್ಮಾಣವಾಗತೊಡಗಿತು. ಗುರುಕಿರಣ್ ಹಾಡುತ್ತಾ ಕುಣಿಯುತ್ತಾ ಹೋದರು. ಜನ ಅಭಿಮಾನದಿಂದ ಚಪ್ಪಾಳೆ ಹೊಡೆದು, ತಾವೂ ಕುಣಿದು ಸಂಭ್ರಮಿಸಿದರು. ಅದೊಂದೇ ವರ್ಷ ತುಮಕೂರು, ಬೀದರ್, ಬಾಗಲಕೋಟೆ, ಚಿತ್ರದುರ್ಗ, ದಾವಣಗೆರೆ ಸೇರಿದಂತೆ ಸುಮಾರು ಹತ್ತನ್ನೆರಡು ಜಿಲ್ಲೆಗಳಲ್ಲಿ 'ಗುರುಕಿರಣ್ ನೈಟ್'ಗಳ ಅಭಿಯಾನ ಆರಂಭವಾಯಿತು. ಗುರುಕಿರಣ್ ಹಾಡುಗಳು ಜನರಲ್ಲಿ ಮತ್ತಷ್ಟು ತೀವ್ರವಾಗಿ ಬೇರೂರಲಾರಂಭಿಸಿದವು. 'ಗುರುಕಿರಣ್ ನೈಟ್'ಗಳ ಮಹತ್ವ ಪ್ರಭಾವ, ಕ್ರೇಜ್ ಎಷ್ಟಿತ್ತು ಎಂಬುದಕ್ಕೆ ಮೊಟ್ಟಮೊದಲ 'ಮೈಸೂರು ಯುವದಸರ'ಕ್ಕೆ ಗುರುಕಿರಣ್ ಹಾಡುವ, ಕುಣಿಯುವ ಮೂಲಕ ವಿಶೇಷ ಮೆರಗು ತಂದಿದ್ದರು. ಅದೇರೀತಿ ಬರೀ ಕರ್ನಾಟಕ ಮಾತ್ರವಲ್ಲದೆ ಅಮೆರಿಕಾ, ಇಂಗ್ಲೆಂಡ್, ದುಬೈ, ಮಸ್ಕಟ್, ಅಬುದಾಬಿ, ಸಿಂಗಪೂರ್ ಇನ್ನೂ ಮುಂತಾದ ಕಡೆ ಇವರು ಕಾರ್ಯಕ್ರಮ ಕೊಟ್ಟರು. ಅಲ್ಲಿಯ ಕನ್ನಡಿಗರನ್ನು ರಂಜಿಸಿದರು. ಅಂದಹಾಗೆ ತಮ್ಮ ಷೋಗಳಲ್ಲಿ ತಮ್ಮ ಹಾಡುಗಳು ಮಾತ್ರವಲ್ಲದೆ ಇತರ ಸಂಗೀತ ನಿರ್ದೇಶಕರ ಹಾಡುಗಳನ್ನು ಹಾಡುತ್ತಿದ್ದದ್ದು, ಪರ್ಫಾರ್ಮ್ ಮಾಡುತ್ತಿದ್ದದ್ದು ಇವರಿಗಿದ್ದ ಮತ್ತೊಂದು ವಿಶೇಷ ಗುಣ. ಇನ್ನೊಬ್ಬರ ಪ್ರತಿಭೆ, ಕಲೆಯನ್ನು ಗೌರವಿಸುವ ಆದರ್ಶಗುಣ ಅನ್ನಬಹುದು.

ಇಷ್ಟೆಲ್ಲವನ್ನೂ ಚರ್ಚಿಸಿದ ಮೇಲೂ ಗುಂಗುರು ಕೂದಲ, ಒಂದೆರಡು ಸಿನಿಮಾಗಳಲ್ಲಿ ಹೀರೋ ಕೂಡ ಆದ, ಧಾರಾವಾಹಿಗಳಲ್ಲಿ ನಟಿಸಿದ, ತಮ್ಮ ಸಂಗೀತಕ್ಕಾಗಿ ಒಮ್ಮೆ ರಾಜ್ಯ ಪ್ರಶಸ್ತಿ, ಮೂರು ಬಾರಿ ಫಿಲಂ ಫೇರ್ ಅವಾರ್ಡ್ ಪಡೆದ, ಕನ್ನಡದ ಜೊತೆಗೆ ತೆಲುಗು, ತಮಿಳು, ತುಳು ಸೇರಿದಂತೆ ಹತ್ತಿರಹತ್ತಿರ ನೂರು ಚಿತ್ರಗಳಿಗೆ ಸಂಗೀತ ನೀಡಿದ ಗುರುಕಿರಣ್ ಅವರ ಪ್ರತಿಭೆ ಅಪಾರ ಪ್ರಯೋಗ, ಹೊಸತಿನೆಡೆಗಿನ ತುಡಿತಗಳಿಂದ ರೂಪಿತವಾಗಿರುವಂಥದ್ದು. ಅವರ ಜೀವನೋಲ್ಲಾಸದ ಹಿಂದೆ ಕಂಡ ಸೋಲು, ಕಹಿ ಅನುಭವ, ಆದ ಅವಮಾನ, ಏಕಾಂತದ ನೋವಿನ ಸ್ವಗತಗಳಿವೆ. ಮಗುವಿನ ಮುಗ್ಧತೆ ಮತ್ತು ಏಳುಬೀಳುಗಳ ಬದುಕು ನೀಡಿದಂತ ದಿಟ್ಟ ಅನುಭವ ಅವರಲ್ಲಿದೆ. ಇವನ್ನೆಲ್ಲ ಮೀರಿದ ಮಾಂತ್ರಿಕತೆ - ಜೀವನ ಪ್ರೀತಿ, ಬದುಕಿನ ಒಂದೊಂದು ಕ್ಷಣವನ್ನೂ ಆನಂದಿಸುವ, ಆರಾಧಿಸುವ ಗುಣ ಅವರಲ್ಲಿನ ವಿಶೇಷತೆ. ಗುರುಕಿರಣ್ ಅವರ ಜಾಗದಲ್ಲಿ ಗುರುಕಿರಣ್ ಅಲ್ಲದೆ ಬೇರಾರನ್ನೂ ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ.

● ಹೃದಯಶಿವ

...ಷ ವರ್ಣಸಂಕರಗಳಾಗಿ ಯಾವೊಂದು ಜಾತಿಯೂ ... ತನ್ನ ಪರಿಶುದ್ಧತೆಯನ್ನು ಕಾಪಾಡಿಕೊಂಡಿಲ್ಲ ಎನ್ನುವ ...ದವನ್ನೂ ನಾವು ಇಲ್ಲಿ ಗಮನಿಸಬೇಕು) ...ತಗೊಳಿಸುವುದು ಎಂದರೆ ಒಂದು ಸಮುದಾಯದ ...ದ್ಧತೆಯ ಮತ್ತು ವಿವೇಕದ ಕೀರ್ತಿಗೇ ಮಸಿಬಳಿಯುವ ... ಎನಿಸಿಕೊಳ್ಳುವುದಿಲ್ಲವೇ?

...ಜಾತಿ, ಮತಗಳಿಗೆ ಸೀಮಿತವಾಗಿ ನಿಂತ ಭಾಷೆಗಳು ... ಮತದ ಅವನತಿಯೊಂದಿಗೇ ನಾಶವಾಗಿಹೋಗ ...ವು ಎನ್ನುವ ಕನಿಷ್ಠ ಎಚ್ಚರ ಈ ಮಂದಿಗೇಕಿಲ್ಲ? ...ರ್ಥದಲ್ಲಿ ಅರೆಭಾಷಾ ಅಕಾಡೆಮಿಯನ್ನು ಗೌಡರಿಗೇ ...ಡಬೇಕು ಎನ್ನುವವರು ತಮಗೆ ಅರಿವಿಲ್ಲದಂತೆಯೇ ...ಷೆಗೆ ಘೋರ ಅನ್ಯಾಯ ಮಾಡುತ್ತಿದ್ದಾರೆ.

...ರೆಭಾಷಾ ಅಕಾಡೆಮಿಯನ್ನು ಗೌಡ ಸಮುದಾಯಕ್ಕೆ ...ಲಿಡಬೇಕು ಎಂಬ ವಿಚಾರದಲ್ಲಿ (ಪಕ್ಷಭೇದದ ...ಯಲ್ಲಿ ಸಮಾಜದ ಹಿತಾಸಕ್ತಿಯ ಅನೇಕ ವಿಚಾರಗಳಲ್ಲಿ ...ಗದಿರುವವರೂ) ಪಕ್ಷಭೇದ ಮರೆತು ಸಂಘಟಿತ ...ತ್ತಿರುವುದು, ಸಂಕುಚಿತವಾಗಿ ಯೋಚಿಸುತ್ತಿರುವುದು ...ನಾಗಿದೆ. ದಲಿತ ಜನಾಂಗದವನೊಬ್ಬ ಅರೆಭಾಷಾ ...ಡೆಮಿಯ ಸದಸ್ಯನಾಗಿದ್ದರೆ ಅದಕ್ಕೆ ದಲಿತ ಜನಾಂಗದ ...ಪ್ರತಿನಿಧಿಸಹಿತ ಆ ಜನಾಂಗದ ನೇತಾರರು ...ಪಡಬೇಕು ಆ ಸದಸ್ಯತ್ವ ಉಳಿಯುವಂತೆ ಮಾಡಬೇಕು. ... ರೀತಿಯಲ್ಲಿ ಇತರ ಸಮುದಾಯಗಳವರೂ ತಮ್ಮ ...ತ್ತಬೇಕು. ಆದರೆ ಹಾಗಾಗದೆ ಸದರಿ ಅಕಾಡೆಮಿಯು ...ಜಾತಿಗಳ ನಡುವೆ, ಮತಮತಗಳ ನಡುವೆ ಕೊನೆಗೆ ...ಷೆ ಮಾತನಾಡುವ ಮತ್ತು ತುಳು ಮಾತನಾಡುವ ...ರ ನಡುವೆಯೂ ಒಡಕು ಸೃಷ್ಟಿಸಿರುವುದು ವಿಷಾದದ ...ತಿ. ಜಾತಿರಾಜಕಾರಣ ಮತ್ತು ಪಕ್ಷ ರಾಜಕಾರಣ ...ದಲ್ಲಿ ತನ್ನ ಅತ್ಯಂತ ಕೊಳಕು ಮುಖವನ್ನು ...ರ್ಶಿಸುತ್ತಿರುವುದು ಖಂಡಿತಾ ಒಳ್ಳೆಯ ಬೆಳವಣಿಗೆಯಲ್ಲ. ...ಅಕಾಡೆಮಿಗೆ ಹಣಕಾಸು ನೀಡುವುದು ಸರಕಾರ. ...ರಕ್ಕೆ ಹಣ ಬರುವುದು ಜಾತಿ, ಮತಭೇದವಿಲ್ಲದೆ ...ಸ ಎಲ್ಲ ಪ್ರಜೆಗಳಿಂದ. ಅಕಾಡೆಮಿಯೊಂದು ಒಂದು ...ಗೆ ಸೀಮಿತವಾಗುವುದಾದರೆ ಅದಕ್ಕೆ ಇತರ ಜಾತಿ ...ಗಳವರಿಂದ ಸಂಗ್ರಹವಾದ ಹಣ ಏಕೆ ಹೋಗಬೇಕು ...ಷ ಪ್ರಶ್ನೆ ಎದುರಾಗುವುದಿಲ್ಲವೇ? ಜಾತಿ ಆಧಾರಿತ ...ಡೆಮಿಗೆ ಸರಕಾರ ನೆರವು ನೀಡಿದರೆ ಅದು ಜಾತಿ ...ವಾದಕ್ಕೆ, ಆ ಮೂಲಕ ಜಾತಿವಾದಕ್ಕೆ ಬಹಿರಂಗ ಬೆಂಬಲ ...ದ ಸಂವಿಧಾನಬಾಹಿರ ಕೆಲಸವಾಗುವುದಿಲ್ಲವೇ? ಇನ್ನೂ ...ಷ್ಟವಾಗಿ ಅರೆಭಾಷೆಯನ್ನು ಗೌಡ ಜಾತಿಗೆ ಸೀಮಿತ ...ಸಿ ಅಕಾಡೆಮಿಯ ಮೂಲಕ ಅದಕ್ಕೆ ಪ್ರೋತ್ಸಾಹ ...ಡುವುದು ಸರಿ ಎನ್ನುವುದಾದರೆ ಅರೆಭಾಷೆಯಷ್ಟೇ ...ದ್ಧವಾದ ಹವ್ಯಕ ಕನ್ನಡ, ಕುಂದಗನ್ನಡಗಳು ಏನು ...ರಾಧ ಮಾಡಿವೆ? ಅದಕ್ಕಿಂತಲೂ ಮುಖ್ಯವಾಗಿ ಅತ್ಯಂತ ...ೀನ ಮತ್ತು ಸಮೃದ್ಧ ಭಾಷೆಯಾದ ಕೊರಗರ ಭಾಷೆಗೂ ...ಡೆಮಿ ಸ್ಥಾಪಿಸಬೇಡವೇ? ಹಾಗೆ ಮಾಡದಿದ್ದರೆ ಅದು ...ಮಾಜಿಕ ನ್ಯಾಯಕ್ಕೆ ವಿರುದ್ಧವಾಗುವುದಿಲ್ಲವೇ? ಇದು ...ಗೆ ಎಲ್ಲಿಗೆ ಹೋಗಿ ನಿಲ್ಲುತ್ತದೆ?

- ಶ್ರೀನಿವಾಸ ಕಾರ್ಕಳ, ಮಂಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...kesh70@rediffmail.com ಗೆ ನುಡಿ ...ವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ...ತ್ರಿಯೆಗಳನ್ನು 9980331427 ನಂಬರ್‌ಗೂ ...ಗಿ ಮತ್ತು ಚುಟುಕಾಗಿ SMS ಕಳುಹಿಸಬಹುದು.



ಇವಳು ಪೋಸು ಕೊಡ್ತಳೆ... ಇವಳು ಟೆಂಪ್ಟು ಮಾಡ್ತಳೆ

ಡಾ.ರಾಜ್‌ಕುಮಾರ್ ಕನ್ನಡದ ಮಟ್ಟಿಗೆ ಹಾಡು ಹಾಡಿದ ಮೊದಲ ಹೀರೋ, ಅವರು ಹೀರೋ ಆಗಿ ಎಷ್ಟು ಜನಪ್ರಿಯರೋ ಗಾಯಕರಾಗಿ ಕೂಡ ಅಷ್ಟೇ ಜನಪ್ರಿಯರು. ಆ ಜನಪ್ರಿಯತೆ ಯಾವ ಮಟ್ಟಿಗಿತ್ತು ಎಂದರೆ ರಾಜ್‌ಕುಮಾರ್ ತಮ್ಮ ಸಿನಿಮಾಗಳಿಗೆ ಮಾತ್ರವಲ್ಲದೆ ಇತರರ ಸಿನಿಮಾಗಳಿಗೂ ಹಾಡುವುದರ ಜೊತೆಗೆ ಭಕ್ತಿಗೀತೆ, ಭಾವಗೀತೆಗಳನ್ನೂ ಹಾಡಿ ಸೈ ಎನ್ನಿಸಿಕೊಳ್ಳುವಷ್ಟು. ತಮ್ಮ 'ಜೀವನಚೈತ್ರ' ಚಿತ್ರದ 'ನಾದಮಯ' ಹಾಡಿನ ಗಾಯನಕ್ಕಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದರು. ಆಮೇಲೆ ವಿಷ್ಣುವರ್ಧನ್, ಅಂಬರೀಶ್, ಉಪೇಂದ್ರ, ಶಿವರಾಜ್‌ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್, ಜಗ್ಗೇಶ್, ಸುದೀಪ್, ಪ್ರೇಮ್, ಗಣೇಶ್ ಕೂಡ ಹಾಡುಗಳನ್ನು ಹಾಡಿದ್ದರು. ಈಗ ಕೋಮಲ್ ಕೂಡ ತಮ್ಮ ಚಿತ್ರಕ್ಕೆ ಹಾಡು ಹಾಡಿದ್ದಾರೆ. ತಮ್ಮ 'ನಮೋ ಭೂತಾತ್ಮ' ಚಿತ್ರದ "ಇವಳು ಫೋಸು ಕೊಡ್ತಳೆ... ಇವಳು ಟೆಂಪ್ಟು ಮಾಡ್ತಳೆ" ಅಂತ ಶುರುವಾಗುವ ಈ ಹಾಡು ಇಬ್ಬರು ಯುವತರುಣಿಯರ ಪ್ರೇಮದಾಳಿಗೆ ಸಿಕ್ಕ ಒಬ್ಬ ಪ್ರೇಮಿಯ ಪಾಡು. ಈ ಹಾಡಿನಲ್ಲಿ ಸಾಕಷ್ಟು ಮಸಾಲ ಅಂಶಗಳಿದ್ದು ಹಾಡು ಹಿಟ್ ಆಗೇ ಆಗುತ್ತದೆ ಎಂಬುದು ಕೋಮಲ್ ಅವರ ನಂಬಿಕೆ.

ಗೌರೀಶ್ ಚಿತ್ರದಲ್ಲಿ ಸಂಜನಾ



ಟಿವಿ ಮೂಲಕ ಜನಪ್ರಿಯತೆ ಗಳಿಸಿದ ಗೌರೀಶ್ ಅಕ್ಕಿ ಮೊದಲಿಂದಲೂ ಸಿನಿಮಾ ನಿರ್ದೇಶಿಸಬೇಕು ಅಂತ ಕನಸು ಕಂಡಿದ್ದರು. 'ಸಿನಿಮಾ ಮೈ ಡಾರ್ಲಿಂಗ್' ಎನ್ನುವ ಸಿನಿಮಾ ಮೂಲಕ ತಮ್ಮ ಕನಸನ್ನು ನನಸು ಮಾಡಿಕೊಳ್ಳುತ್ತಿದ್ದಾರೆ. ಈ ಚಿತ್ರಕ್ಕೆ ಈಗಾಗಲೇ ಮೊದಲಹಂತದ ಚಿತ್ರೀಕರಣ ಯಶಸ್ವಿಯಾಗಿ ಮುಗಿದಿದ್ದು ಈಗ ಎರಡನೇ ಹಂತದ ಶೂಟಿಂಗ್ ಭರದಿಂದ ನಡೀತಾ ಇದೆ. ಸಾಕಷ್ಟು ಹೊಸಮುಖಗಳೇ ಇರುವ ಈ ಚಿತ್ರಕ್ಕೆ 'ಗಂಡಹೆಂಡತಿ' ಚಿತ್ರದಲ್ಲಿ ನಟಿಸಿ ಪ್ರಸಿದ್ಧಿಗೆ ಬಂದ ಸಂಜನಾ ನಾಯಕಿಯಾಗಿ ಆಯ್ಕೆಯಾಗಿದ್ದಾರೆ. ಸ್ವತಃ 'ಗೌರೀಶ್ ಅಕ್ಕಿ ಸಿನಿಮಾಸ್' ಬ್ಯಾನರಿನಡಿ ತಯಾರಾಗುತ್ತಿರುವ 'ಸಿನಿಮಾ ಮೈ ಡಾರ್ಲಿಂಗ್'ಗೆ ಇನ್ನಿಬ್ಬರು ನಿರ್ಮಾಪಕರ ಸಹಯೋಗ ಇದೆಯಂತೆ. ಅಂದಹಾಗೆ ರಜನೀಶ್ ಲೋಕನಾಥ್ ಈ ಸಿನಿಮಾಗೆ ಮ್ಯೂಸಿಕ್ ಮಾಡುತ್ತಿದ್ದಾರೆ. ತಮ್ಮ ವಿನೂತನ ಧ್ವನಿ, ಮ್ಯಾನರಿಸಂ, ಕಾರ್ಯಕ್ರಮ ನಿರೂಪಣಾ ವಿಧಾನದ ಮೂಲಕ ಗೌರೀಶ್ ಅಕ್ಕಿ ಅವರು ಟಿವಿಯಲ್ಲಿ ಮೂಡಿಸಿದ ರೀತಿಯಲ್ಲಿಯೇ ಬೆಳ್ಳಿತೆರೆಯಲ್ಲಿಯೂ ತಮ್ಮ ಛಾಪನ್ನು ಮೂಡಿಸುತ್ತಾರಾ ಅಂತ ಕಾದುನೋಡಬೇಕು.


ಕರುಳಿನಿಂದ ಖಾಕಿವರೆಗೆ



'ತವರಿಗೆ ಬಾ ತಂಗಿ' ತರಹದ ಕರುಳುಬಳ್ಳಿಯ ಸುತ್ತಲಿನ ಕಥಾವಸ್ತು ಇಟ್ಟುಕೊಂಡು ಸಿನಿಮಾ ಮಾಡಿ ಪ್ರೇಕ್ಷಕರನ್ನು ಅಳಿಸುತ್ತಿದ್ದ ಸಾಯಿಪ್ರಕಾಶ್ ಎಂಬ ಕನ್ನಡದ ಸೀನಿಯರ್ ಡೈರೆಕ್ಟರ್ ತಮ್ಮ ನೂರನೇ ಸಿನಿಮಾ ಮಾಡಲು ರೆಡಿಯಾಗಿದ್ದಾರೆ. ಈ ಬಾರಿ ಕರುಳು, ಕಣ್ಣೀರು, ತವರು, ಬಳೆ, ಬಾಗಿನ, ಅರಿಸಿನ ಕುಂಕುಮ ಇತ್ಯಾದಿಗಳ ಗೋಜಿಗೆ ಹೋಗದೆ ಏಕ್ದಂ 'ಲೇಡಿ ಸಿಂಗಂ' ಎಂಬ ಭಯಂಕರ ಟೈಟಲ್ ಇಟ್ಟುಕೊಂಡು ಸಾಯಿಪ್ರಕಾಶ್ ಸಿನಿಮಾ ಮಾಡಲು ಹೊರಟಿದ್ದಾರೆ. ಈ ಬಾರಿ ಸಿಂಹಿಣಿಯಾಗಿ ಸದ್ಯದ ಹಾಟ್ ಅಂಡ್ ಕ್ಯೂಟ್ ಹುಡುಗಿ ರಾಗಿಣಿ ದ್ವಿವೇದಿ ಸಜ್ಜಾಗುತ್ತಿದ್ದಾರೆ. ಇವರು ಈ ಚಿತ್ರದಲ್ಲಿ ರಫ್ ಅಂಡ್ ಟಫ್ ಪೊಲೀಸ್ ಅಧಿ ಪಾತ್ರದಲ್ಲಿ ಕಾಣಿಸಿಕೊಳ್ಳುವ ಮೂಲಕ ಲೇಡಿ ಸಾಯಿಕುಮಾರ್ ಇಲ್ಲ ಜೂನಿಯರ್ ಮಾಲಾಶ್ರೀ ಆಗಲು ಹೊರಟಿದ್ದಾರೆ ಎಂಬ ಸುದ್ದಿ ಅಂದಹಾಗೆ ಇವರ 'ರಾಗಿಣಿ ಐಪಿಎಸ್' ಚಿತ್ರದಲ್ಲಿನ ಖಾಕಿ ಕಾಸ್ಟ್ಯೂ ಈಕೆಯನ್ನು ಇಂಥ ಪಾತ್ರಗಳಿಗೂ ಕರೆಯುವಂತೆ ಮಾಡಿರಬಹುದೇನೋ ಗೊತ್ತಿಲ್ಲ, ಒಟ್ಟಾರೆಯಾಗಿ ಸಾಯಿಪ್ರ ತಮ್ಮ ನೂರನೇ ಚಿತ್ರವನ್ನು ರಫ್ ಅಂಡ್ ಟಫ್ ಆಗಿ ಆಚರಿಸಿಕೊಳ್ಳುತ್ತಿರುವುದು ಅವರ ಕಣ್ಣೀರಿನ ಕತೆಗಳನ್ನು ನೋ ಹೆಣ್ಣು ಮಕ್ಕಳಿಗೆ ನಿರಾಶೆಯನ್ನುಂಟು ಮಾಡಿರಬಹುದು ಅಲ್ಲ



ರವಿಚಂದ್ರನ್ ಐವತ್ತನೇ ಅತಿ



ಕರ್ನಾಟಕ ಚಲನಚಿತ್ರ ಅಕಾಡೆಮಿ ಕೆಲವೇ ವರ್ಷಗಳ ಹಿಂದೆ ರೂಪಿಸಿರುವ 'ಬೆಳ್ಳಿ ಹೆಜ್ಜೆ' ಎಂಬ ವಿನೂತನ, ವಿಶಿಷ್ಟ ಕಾರ್ಯಕ್ರಮಕ್ಕೆ ಐವತ್ತನೇ ಅತಿಥಿಯಾಗಿ ರವಿಚಂದ್ರನ್ ಆಯ್ಕೆಯಾಗಿದ್ದಾರೆ. ಈ ಕಾರ್ಯಕ್ರಮದ ಮತ್ತೊಂದು ವಿಶೇಷತೆಯೆಂದರೆ ಈ ಹಿಂದಿನ ನಲವತ್ತೊಂಭತ್ತು ಕಾರ್ಯಕ್ರಮಗಳಲ್ಲಿ ಅತಿಥಿಯಾಗಿ ಪಾಲ್ಗೊಂಡ ಎಲ್ಲರೂ ಒಂದೇ ವೇದಿಕೆಯಲ್ಲಿ ಐವತ್ತನೇ ಅತಿಥಿ ರವಿಚಂದ್ರನ್ ಅವರೊಂದಿಗೆ ಕೂಡಿಕೊಳ್ಳಲಿದ್ದಾರೆ. ಪಾರ್ವತಮ್ಮ ರಾಜ್‌ಕುಮಾರ್ ಈ ಕಾರ್ಯಕ್ರಮದ ಪ್ರಪ್ರಥಮ ಅತಿಥಿಯಾಗಿದ್ದು ಆನಂತರ ಅಂಬರೀಶ್, ದ್ವಾರಕೀಶ್, ಬಿ.ಸರೋಜಾದೇವಿ, ಜಯಂತಿ, ಅನಂತನಾಗ್, ಭಾರತಿ ವಿಷ್ಣುವರ್ಧನ್, ರಾಜೇಶ್, ಆರ್.ಎನ್.ಸುದರ್ಶನ್ ಸೇರಿದಂತೆ ಮುಂತಾದವರು ಅತಿಥಿಗಳಾಗಿ ಚಲನಚಿತ್ರ ಅಕಾಡೆಮಿಯ ಗೌರವಕ್ಕೆ ಪಾತ್ರರಾಗಿದ್ದರು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.

ಸಿಗರೇಟ್ ಹಾಡು ಕೇಳುವ ಸಮಯ

'ಸಿಗರೇಟ್' ಚಿತ್ರದ ಹಾಡುಗಳು ಮಾರುಕಟ್ಟೆಗೆ ಬಂದಿವೆ. ಇಂದ್ರಸೇನ ಸಂಗೀತ ನೀಡಿರುವ ಈ ಚಿತ್ರದಲ್ಲಿ ಒಟ್ಟು ನಾಲ್ಕು ಹಾಡುಗ ನಾಗಶೇಖರ್, ರೂಪಶ್ರೀ ಮುಂತಾದವರು ಈ ಚಿತ್ ನಟಿಸಿದ್ದಾರೆ. ಶಂಕರ್ ಎಂಬುವವರು ಈ ಚಿತ್ರದ ನಿರ್ದೇಶಕರು. ಸಿಗರೇಟ್ ಸೇವನೆ ಮಾಡುವುದ ಉಂಟಾಗಬಹುದಾದ ಅಡ್ಡಪರಿಣಾಮಗಳ ಕುರಿ



ಒಂದು ಸಂದೇಶವೂ ಇದ್ದು, ಮನರಂಜನೆ, ಫೈಟ್, ಕಾಮಿಡಿ ಎಲ್ಲವೂ ಚಿತ್ರದಲ್ಲಿವೆಯಂತೆ. ಶಂಕರ್ ಈ ಮೊದಲು 'ಜಮಾನ', 'ನೈ 'ದೇವ್ರಾಣೆ' ಮುಂತಾದ ಚಿತ್ರಗಳನ್ನು ನಿರ್ದೇಶಿಸಿದ್ದರು. ಇಂದ್ರಸೇನ ಹಂಸಲೇಖ ಶಿಷ್ಯನಾಗಿ ಸ್ವತಃ ಹಾ ಬರೆಯಬ ಸಂಗೀತವನ ನೀಡಬಲ್ಲವರ ಚಿತ್ರದಲ್ಲಿ ಸಂಗೀತದ ಜೊತೆಗೆ ಇಂದ್ರಸೇನ ಅವರು ಕೂಡ ಒಂದು ಗೀತೆಯನ್ನು ಬರೆದಿರುವುದು ವಿಶೇಷ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore